Swabhimani Sahakari
Pages : 46 / 12₹
Volume - 19
Issue - 09
September - 2022

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ದಿನಾಂಕ: 5/09/2022

ಪ್ರತಿಯೊಬ್ಬ ವಿದ್ಯಾರ್ಥಿಗೂ
ಗುರಿ ಮುಖ್ಯ
ಗುರಿ ತೋರಲು
ಗುರು ಮುಖ್ಯ

---

ಶಿಕ್ಷಕರ ದಿನಾಚರಣೆ ಶುಭಾಶಯಗಳು


ಡಾ. ಸರ್ವಪಲ್ಲಿ ರಾಧಾಕೃಷ್ಣನ್



ಸೌಹಾರ್ದ ಸಹಕಾರಿಗಳ
ಸಂಖ್ಯೆ : 5650

ಇ-ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1543



ಜಿ. ನಂಜನಗೌಡ

> ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಯ ನೇತೃತ್ವ ವಹಿಸಿರುವ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಚುನಾವಣೆ ದಿನಾಂಕ 24.07.2022 ರಂದು ನಡೆದು ದಿನಾಂಕ 04.08.2022 ರಂದು ನಡೆದ ಪದಾಧಿಕಾರಿಗಳ ಚುನಾವಣೆಯು ಸರ್ವಸಮ್ಮತಿಯಿಂದ ಪ್ರಜಾಸತ್ತಾತ್ಮಕ ರೀತಿಯಲ್ಲಿ ಸೌಹಾರ್ದ ಸಹಕಾರಿಗಳ ಕಾಯ್ದೆ ನಿಯಮಗಳ ಪ್ರಕಾರ ನಡೆದು ಅವಿರೋಧವಾಗಿ ನನ್ನನ್ನು ಅಧ್ಯಕ್ಷನಾಗಿ ಹಾಗೂ ಶ್ರೀ ಎ. ಆರ್.ಪ್ರಸನ್ನಕುಮಾರರವರನ್ನು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಿರುವುದು ತಮಗೆ ತಿಳಿದಿದೆ. ಈ ಕಾರ್ಯದಲ್ಲಿ ನಮ್ಮಿಬ್ಬರ ಮೇಲೆ ವಿಶ್ವಾಸವಿಟ್ಟು ಈ ಅತ್ಯಂತ ಮಹತ್ವದ ಜವಾಬ್ದಾರಿಯನ್ನು ನಮಗೆ ವಹಿಸಿರುವುದಕ್ಕೆ ಸಂಯುಕ್ತ ಸಹಕಾರಿಯ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ಹಿತ ಚಿಂತಕರಿಗೆ ಹಾಗೂ ಎಲ್ಲ ಸಹಕಾರಿಗಳಿಗೆ ಅಭಿಮಾನಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಮತ್ತು ಎಲ್ಲರ ನಿರೀಕ್ಷೆಗೆ ತಕ್ಕಂತೆ ಕಾರ್ಯನಿರ್ವಹಿಸಲು ಬದ್ಧರಾಗಿದ್ದೇವೆಂದು ಹೆಮ್ಮೆಯಿಂದ ತಿಳಿಸಬಯಸುತ್ತೇನೆ.

# ಅವಕಾಶ ಕಲ್ಪಿಸಿದ ಸಹಕಾರಿಗಳಿಗೆ ಕೃತಜ್ಞತೆ : ಸೌಹಾರ್ದ ಸಹಕಾರಿಗಳ ಗುಣಮಟ್ಟ ನಿರ್ವಹಣೆಗೆ ಪ್ರಥಮ ಆದ್ಯತೆ. ಸಹಕಾರಿಗಳ ಸಂಪೂರ್ಣ ಸಹಕಾರ ನಿರೀಕ್ಷೆ.

**ಆತ್ಮೀಯ ಸಹಕಾರಿ ಬಂಧುಗಳೆ, ಎಲ್ಲರಿಗೂ ಹೃದಯಪೂರ್ವಕ ನಮಸ್ಕಾರಗಳು,**

ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಯ ನೇತೃತ್ವ ವಹಿಸಿರುವ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಚುನಾವಣೆ ದಿನಾಂಕ 24.07.2022 ರಂದು ನಡೆದು ದಿನಾಂಕ 04.08.2022 ರಂದು ನಡೆದ ಪದಾಧಿಕಾರಿಗಳ ಚುನಾವಣೆಯು ಸರ್ವಸಮ್ಮತಿಯಿಂದ ಪ್ರಜಾಸತ್ತಾತ್ಮಕ ರೀತಿಯಲ್ಲಿ ಸೌಹಾರ್ದ ಸಹಕಾರಿಗಳ ಕಾಯ್ದೆ ನಿಯಮಗಳ ಪ್ರಕಾರ ನಡೆದು ಅವಿರೋಧವಾಗಿ ನನ್ನನ್ನು ಅಧ್ಯಕ್ಷನಾಗಿ ಹಾಗೂ ಶ್ರೀ ಎ.ಆರ್.ಪ್ರಸನ್ನಕುಮಾರರವರನ್ನು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಿರುವುದು ತಮಗೆ ತಿಳಿದಿದೆ. ಈ ಕಾರ್ಯದಲ್ಲಿ ನಮ್ಮಿಬ್ಬರ ಮೇಲೆ ವಿಶ್ವಾಸವಿಟ್ಟು ಈ ಅತ್ಯಂತ ಮಹತ್ವದ ಜವಾಬ್ದಾರಿಯನ್ನು ನಮಗೆ ವಹಿಸಿರುವುದಕ್ಕೆ ಸಂಯುಕ್ತ ಸಹಕಾರಿಯ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ಹಿತ ಚಿಂತಕರಿಗೆ ಹಾಗೂ ಎಲ್ಲ ಸಹಕಾರಿಗಳಿಗೆ ಅಭಿಮಾನಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಮತ್ತು ಎಲ್ಲರ ನಿರೀಕ್ಷೆಗೆ ತಕ್ಕಂತೆ ಕಾರ್ಯನಿರ್ವಹಿಸಲು ಬದ್ಧರಾಗಿದ್ದೇವೆಂದು ಹೆಮ್ಮೆಯಿಂದ ತಿಳಿಸಬಯಸುತ್ತೇನೆ.

ಮಾನ್ಯ ಸಹಕಾರಿಗಳೆ, ರಾಜ್ಯದ ಸೌಹಾರ್ದ ಸಹಕಾರಿಗಳ ಸಂಖ್ಯೆ ಈಗ 5650. ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಸೌಹಾರ್ದ ಸಹಕಾರಿಗಳು ನಿರ್ವಹಿಸುತ್ತಿರುವ ಇ–ಸ್ಟಾಂಪಿಂಗ ಕೇಂದ್ರಗಳ ಸಂಖ್ಯೆ 1543. ಸಂಯುಕ್ತ ಸಹಕಾರಿಯ ದಾವಾ ಪಂಚಾಯಿತಿ ನ್ಯಾಯಾಲಯಕ್ಕೆ ಪೂರ್ಣ ಪ್ರಮಾಣದ ಪೀಠಾಧಿಕಾರಿಯಿದ್ದು ಬೆಂಗಳೂರು ಹಾಗೂ ಬೆಳಗಾವಿಗಳಲ್ಲಿ ಕೇಸುಗಳ ವಿಲೇವಾರಿ ನಿರಂತರವಾಗಿ ನಡೆಸಲಾಗುತ್ತಿದೆ. ಸಮಸ್ಯಾತ್ಮಕ ಸೌಹಾರ್ದ ಸಹಕಾರಿಗಳು ಹುಟ್ಟಿಕೊಳ್ಳಲಾರದಂತೆ ಈಗ ಇರುವ ಸಮಸ್ಯೆಗಳ ನಿವಾರಣೆಯನ್ನು ಸಾಧ್ಯವಾಗುವಷ್ಟು ಬೇಗನೆ ಪರಿಹರಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕಿದೆ. ಸಂಯುಕ್ತ ಸಹಕಾರಿಯ ಆಡಳಿತ ವ್ಯವಸ್ಥೆಯ ವೇಗ ಹಾಗೂ ಗುಣಮಟ್ಟ ಹೆಚ್ಚಿಸುವ ಸವಾಲುಗಳು ನಮ್ಮ ಮುಂದೆ ಇವೆ. ಆಡಳಿತ ಮಂಡಳಿಯಲ್ಲಿ 11 ಜನ ಮರು ಆಯ್ಕೆ ನಿರ್ದೇಶಕರು ಮತ್ತು 10 ಜನ ನೂತನ ನಿರ್ದೇಶಕರುಗಳು ಇದ್ದು ಅರಿತ ನುರಿತ ಅನುಭವಿ ಆಸಕ್ತ ಸಹಕಾರಿಗಳ ಸಮಾಗಮವಿದೆ. ಎಲ್ಲರನ್ನು ಒಟ್ಟಿಗೆ ತೆಗೆದುಕೊಂಡು ವಿಶ್ವಾಸದಿಂದ ಸಹಕಾರಿಗಳ ಆಡಳಿತ ಮಂಡಳಿಯ ಮತ್ತು ಸಿಬ್ಬಂದಿಯವರ ಸಹಕಾರದಿಂದ ಈ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನಿರ್ವಹಿಸಲು ಪ್ರಯತ್ನಿಸುವುದಾಗಿ ತಿಳಿಸಬಯಸುತ್ತೇನೆ.

ಮಾನ್ಯರೇ ಯಾವುದೇ ಕೆಲಸ ಒಬ್ಬರಿಂದ ಸಾಧ್ಯವಾಗುವುದಿಲ್ಲ ಅಥವಾ ಪೂರ್ಣಗೊಳ್ಳುವುದಿಲ್ಲ. ಅದಕ್ಕೆ ಎಲ್ಲರ ಸಲಹೆ ಸಹಕಾರ ಮಾರ್ಗದರ್ಶನ ಅಗತ್ಯ. ತಮ್ಮ ಸಲಹೆ ಸಹಕಾರ ಹಾಗೂ ಮಾರ್ಗದರ್ಶನಗಳನ್ನು ತುಂಬು ಹೃದಯದಿಂದ ಸ್ವಾಗತಿಸುತ್ತೇನೆ. ನಿಮ್ಮ ಅಹವಾಲುಗಳಿಗೆ ನಿರಂತರವಾಗಿ ಸ್ಪಂದಿಸುವ ಪ್ರಯತ್ನ ನಮ್ಮದಾಗಿದೆ. ಬನ್ನಿ ನಮ್ಮೊಂದಿಗೆ ಕೈ ಜೋಡಿಸಿ. ಸೌಹಾರ್ದ ಸಹಕಾರಿ ರಥವನ್ನು ವೈಭವ ಪೂರ್ವಕ ಹಾಗೂ ಸಂಭ್ರಮ ಸಂತೋಷದಿಂದ ಮುನ್ನಡೆಸೋಣ. ನಿಮ್ಮ ಅಭಿಪ್ರಾಯಗಳನ್ನು ನನ್ನ ವೈಯಕ್ತಿಕ ಹೆಸರಿಗೆ ಸಂಯುಕ್ತ ಸಹಕಾರಿಗೆ ಪತ್ರ ಬರೆಯಿರಿ.

ಸ್ವಾಭಿಮಾನಿ ಸಹಕಾರಿ
ಸಂಪಾದಕ ಮಂಡಳಿ

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು
ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ ಪಾಟೀಲ
ಸಂಪಾದಕರು

ಶ್ರೀ ವಿ.ಜೆ. ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ........................................ 2
ಸಂಪಾದಕೀಯ........................................ 3
ಜ್ಞಾನ ಜ್ಯೋತಿ........................................ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ........................................ 05–17
ಸರ್ಕಾರದ ಸುತ್ತೋಲೆ...................... 18–20
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... ........................................ 21–39
**ಲೇಖನಗಳು :**
ಸಹಕಾರ ಶಿಕ್ಷಣ, ಶಿಕ್ಷಣ ನಿಧಿ ನಿರ್ವಹಣೆ, ಸಂಪನ್ಮೂಲ ವ್ಯಕ್ತಿಗಳು ಮತ್ತು ನಿಬಂಧಕರು ಮತ್ತು ನಿಬಂಧಕರು – ಒಂದು ವಿಮರ್ಶೆ ...... 40–42
ವಿತ್ತೀಯ ಸಾಕ್ಷರತೆ ............................ 43, 45

# ಸಂಪಾದಕೀಯ

## ಸಹಕಾರಿಗಳ ಸದಸ್ಯರ ಶಿಕ್ಷಣ ಅಭಿಯಾನ – ವಾರ್ಷಿಕ ಸಾಮಾನ್ಯ ಸಭೆಗಳೇ ಸೂಕ್ತ ವೇದಿಕೆಗಳು ಪರಿಣಾಮಕಾರಿಯಾಗಲು ಕ್ರಮ ಅಗತ್ಯ.

ಪ್ರಜಾ ಪ್ರಭುತ್ವದ ಆಡಳಿತ ವ್ಯವಸ್ಥೆ ಸಹಕಾರ ತತ್ವಗಳಲ್ಲಿ ಅತ್ಯಂತ ಮಹತ್ವದ್ದು. ಸಹಕಾರ ಕ್ಷೇತ್ರ ಪ್ರಜಾಪ್ರಭುತ್ವದ ತಳಹದಿಯ ಮೇಲೆ ಕಾರ್ಯನಿರ್ವಹಿಸುವ ಕ್ಷೇತ್ರ. ಒಂದು ವಿಧದಲ್ಲಿ ಸಹಕಾರ ಕ್ಷೇತ್ರ ಪ್ರಜಾಪ್ರಭುತ್ವದ ಆಡಳಿತ ವ್ಯವಸ್ಥೆಯ ತರಬೇತಿ ಶಾಲೆ ಇದ್ದಂತೆ. ಪ್ರಜಾಪ್ರಭುತ್ವದ ಆಡಳಿತ ವ್ಯವಸ್ಥೆಯಲ್ಲಿ ಹೇಗೆ ಜನರು ಹೆಚ್ಚು ಭಾಗವಹಿಸಿದರೆ ಪ್ರಜಾಪ್ರಭುತ್ವ ಯಶಸ್ವಿಯಾಗುತ್ತದೆಯೊ ಹಾಗೆ ಸಹಕಾರಿ ಕ್ಷೇತ್ರದಲ್ಲೂ ಸಹ ಜನರ ಭಾಗವಹಿಸುವಿಕೆ ಹೆಚ್ಚಾಗಬೇಕಿರುವ ಅವಶ್ಯಕತೆ ಇದೆ. ಪಾರ್ಟಿಸಿಪೇಟಿವ್ ಡೆಮಾಕ್ರಸಿಯಲ್ಲಿ ನಿರೀಕ್ಷಿಸಿದ ಯಶಸ್ಸು ಇರುವ ಹಾಗೆ ಮೆಂಬರ ಪಾರ್ಟಿಸಿಪೇಟಿವ್ ಕೋಆಪರೇಟಿವ್ ಮೂವ್‌ಮೆಂಟ್ ಆದಾಗ ಸಹಕಾರಿ ಕ್ಷೇತ್ರ ನಿರೀಕ್ಷಿಸಿದ ಪ್ರಗತಿ ಸಾಧಿಸಲು ಸಾಧ್ಯವಾಗುತ್ತದೆ ಎಂಬುದು ಅನುಭವದ ಸತ್ಯ, ಇದು ಅನೇಕ ದೇಶಗಳ ಸಹಕಾರಿ ಚಳುವಳಿಯ ಸಾಧನೆಗಳ ಪ್ರಗತಿಗಳ ಅಧ್ಯಯನದಿಂದ ತಿಳಿಯಬಹುದಾಗಿದೆ.

ಈಗ ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಗಳ ಸಮಯ. ಈ ವಾರ್ಷಿಕ ಸಾಮಾನ್ಯ ಸಭೆಗಳಲ್ಲಿ ಸಹಕಾರಿಗಳ ಹೆಚ್ಚು ಸದಸ್ಯರು ಭಾಗವಹಿಸುವಿಕೆ ಮಾಡುವುದು ಸಹಕಾರಿಗಳ ಪದಾಧಿಕಾರಿಗಳ, ಆಡಳಿತ ಮಂಡಳಿ ಸದಸ್ಯರುಗಳ ಹಾಗು ಅಧಿಕಾರಿಗಳ ಆದ್ಯತಾವಲಯವಾಗಬೇಕು. ಸದಸ್ಯರು ತಾವು ಸದಸ್ಯತ್ವ ಪಡೆದಿರುವ ಸಹಕಾರಿ ಸಂಸ್ಥೆಗಳ ಕಾರ್ಯಚಟುವಟಿಕೆಗಳ ಬಗ್ಗೆ ಪೂರ್ಣ ಮಾಹಿತಿಯನ್ನು ಹೊಂದುವಂತಾಗಬೇಕಾದರೆ "ಸದಸ್ಯ ಶಿಕ್ಷಣ ಅಭಿಯಾನ" (Member Education Campaign) ಕಾರ್ಯಕ್ರಮವನ್ನು ಎಲ್ಲ ಸಹಕಾರಿ ಸಂಸ್ಥೆಗಳು ಹಮ್ಮಿಕೊಳ್ಳುವುದು ಅಗತ್ಯ.

ಸಂಯುಕ್ತ ಸಹಕಾರಿಯ ವತಿಯಿಂದ ಈ ನಿಟ್ಟಿನಲ್ಲಿ ಕ್ರಮವಿಡಲಾಗುತ್ತಿದೆ. ಎಲ್ಲ ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಗಳ ಪೂರ್ವದಲ್ಲಿ ಅಥವಾ ಸಾಮಾನ್ಯ ಸಭೆಗಳ ನಂತರದಲ್ಲಿ ಸಹಕಾರಿ ಆಡಳಿತ ವ್ಯವಸ್ಥೆ, ಸೌಹಾರ್ದ ಸಹಕಾರಿ ಕಾನೂನುಗಳ ಮುಖ್ಯಾಂಶಗಳು, ನಿಯಮಗಳು, ಬೈಲಾಗಳ ಪ್ರಮುಖ ವಿಷಯಗಳು ಆಡಳಿತ ಮಂಡಳಿಯ ಕರ್ತವ್ಯ ಹಾಗೂ ಜವಾಬ್ದಾರಿಗಳು ಸದಸ್ಯರ ಕರ್ತವ್ಯ ಹಾಗೂ ಜವಾಬ್ದಾರಿಗಳು ಸದಸ್ಯರು ಈ ಸಹಕಾರಿಯಲ್ಲಿ ಸಕ್ರೀಯವಾಗಿ ಭಾಗವಹಿಸುವುದರಿಂದ ಸಹಕಾರಿಯ ಬೆಳವಣಿಗೆ ಹಾಗೂ ಅವರ ವೈಯಕ್ತಿಕ ಬೆಳವಣಿಗೆಗೆ ಪೂರಕವಾಗುವ ವಿಷಯಗಳ ಬಗ್ಗೆ ಸೌಹಾರ್ದ ಸಹಕಾರಿ ಅಧಿಕಾರಿಗಳಿಂದ, ರಾಜ್ಯದ ಬೇರೆ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಂದ ಹಾಗೂ ಸ್ಥಳೀಯ ತಜ್ಞರಿಂದ ಶಿಕ್ಷಣ ನೀಡುವ ವ್ಯವಸ್ಥೆ ಮಾಡುತ್ತಿರುವುದು ಸ್ವಾಗತಾರ್ಹ. ಈ ಯೋಜನೆಯ ಪ್ರಯೋಜನ ಎಲ್ಲ ಸೌಹಾರ್ದ ಸಹಕಾರಿಗಳು ಪಡೆಯುವಂತಾಗಲಿ ಎಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆಯಾಗಿದೆ. ಆದ್ದರಿಂದ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಸಂಯುಕ್ತ ಸಹಕಾರಿಯ ಈ ಸದಸ್ಯ ಸಹಕಾರಿ ಶಿಕ್ಷಣ ಯೋಜನೆಯ ಪ್ರಯೋಜನ ಪಡೆದು ಸೌಹಾರ್ದ ಸಹಕಾರಿಯ ಅಭಿವೃದ್ಧಿಯಲ್ಲಿ ಪಾಲುದಾರರಾಗುವಲ್ಲಿ ಎಲ್ಲರೂ ಶ್ರಮವಹಿಸುತ್ತಾರೆಂದು ಆಶಿಸಲಾಗಿದೆ.

**ಅರಿತ ಸದಸ್ಯ ನುರಿತ ಆಡಳಿತ ಮಂಡಳಿ ಪ್ರಾಮಾಣಿಕ ಹಾಗೂ ದಕ್ಷ ಸಿಬ್ಬಂದಿ ಸಹಕಾರಿಯ ಪ್ರಗತಿಗೆ ಬುನಾದಿ.**



# ಜ್ಞಾನ ಜ್ಯೋತಿ

– ಶ್ರೀ ಸಿದ್ಧೇಶ್ವರ ಸ್ವಾಮೀಜಿ. ವಿಜಯಪುರ
ಪ್ರವಚನ ಸಂಗ್ರಹ : ಶ್ರೀಮತಿ ಸವಿತ ಎನ್. ಇ.

## "ಉದ್ದೇಶ ಸರಿಯಿರದಿದ್ದರೆ ಗಳಿಸಿದ್ದೆಲ್ಲವೂ ವ್ಯರ್ಥ"

ಒಬ್ಬ ಹತ್ತು ಹನ್ನೆರಡು ವರ್ಷದ ಬಾಲ. ರೈಲ್ವೆ ನಿಲ್ದಾಣದಲ್ಲಿ ಕುಳಿತು ಕೈಯಲ್ಲಿ ಒಂದು ವಾದ್ಯವನ್ನು ಹಿಡಿದು ಅದನ್ನು ನುಡಿಸಲು ಪ್ರಯತ್ನಿಸುತ್ತಿದ್ದ. ಎದುರಿಗೆ ಒಂದು ತಟ್ಟೆಯನ್ನಿಟ್ಟುಕೊಂಡಿದ್ದ. ಆದರೆ ವಾದ್ಯವನ್ನು ನುಡಿಸಲು ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಸರಿಯಾಗಿ ಸಂಗೀತ ಹೊರಹೊಮ್ಮುತ್ತಿರಲಿಲ್ಲ. ಹೀಗಾಗಿ ಯಾರೂ ಅವನತ್ತ ಗಮನಿಸಲಿಲ್ಲ. ಅದೇ ಸಮಯಕ್ಕೆ ಒಬ್ಬ ಸುಪ್ರಸಿದ್ಧ ಸಂಗೀತಗಾರರು ಆಗಮಿಸಿದರು. ಆಹುಡುಗನ ಹತ್ತಿರ ಹೋಗಿ ಅವನಿಗೆ ಆತ್ಮೀಯವಾಗಿ ಮಾತನಾಡಿಸಿದರು.

**ಸಂಗೀತಗಾರ ಈ ವಾದ್ಯ ಯಾರದು?**

**ಬಾಲಕ – ತೀರಿ ಹೋದ ತಮ್ಮ ತಂದೆಯವರದು.**

**ಸಂಗೀತಗಾರ – ಇಲ್ಲಿ ಏಕೆ ಕುಳಿತಿರುವಿ?**

**ಬಾಲಕ** – ನಮ್ಮ ತಾಯಿಗೆ ಕಾಯಿಲೆಯಾಗಿದೆ. ಔಷಧ ತರಲು ಹಣವಿಲ್ಲ. ಈ ವಾದ್ಯವನ್ನು ಬಾರಿಸಿ ಹಣವನ್ನು ತರಲು ಹೇಳಿದ್ದಾಳೆ. **ಸಂಗೀತಗಾರ** – ನಿಮ್ಮ ತಾಯಿಯ ಔಷಧಿಗೆ ನಾನೇ ಹಣ ಕೊಡುತ್ತೇನೆ ತೆಗೆದುಕೋ. **ಬಾಲಕ** – ನೀವು ಹಾಗೇ ಹಣ ಕೊಟ್ಟರೆ ಅದು ಭಿಕ್ಷೆಯಾಗುತ್ತದೆ. ಅದು ನನಗೆ ಬೇಡ. **ಸಂಗೀತಗಾರ** – ಹಾಗಾದರೆ ನಿನ್ನ ಪರವಾಗಿ ನಾನು ಈ ವಾದ್ಯವನ್ನು ನುಡಿಸಬಹುದೇ? ಬಾಲಕ– ಓಹೋ ಆಗಬಹುದು.

ಆ ಸಂಗೀತಗಾರರು ವಾದ್ಯವನ್ನು ತೆಗೆದುಕೊಂಡು ಮೈ ಮರೆತು ನುಡಿದರು. ಅದು ದಿಲ್‌ರುಬಾ ಬಾದ್ಯ. ಅವರ ಸುಶ್ರಾವ್ಯ ಸಂಗೀತ ಕೇಳಲು ಜನ ಜಾತ್ರೆ ನೆರೆಯಿತು. ಅಲ್ಲಿ ಹಣದ ರಾಶಿಯೇ ಬಿದ್ದಿತು. ಅದರಲ್ಲಿಯ ಒಂದೇ ಒಂದು ದುಡ್ಡನ್ನೂ ಮುಟ್ಟದೆ ಆಹಣವನ್ನೆಲ್ಲ ಬಾಲಕನಿಗೆ ಒಪ್ಪಿಸಿದರು. ನಿನಗೆ ಮತ್ತೆ ತೊಂದರೆಯಾದರೆ ಹೇಳು, ನಾನು ನಿನ್ನ ಪರವಾಗಿ ಈ ವಾದ್ಯ ನುಡಿಸುತ್ತೇನೆ. ಇಲ್ಲೇ ಪಕ್ಕದಲೇ ನನ್ನ ಸಂಗೀತ ಶಾಲೆಯಿದೆ. ನಿನಗೆ ಬಿಡುವಾದಾಗ ಅಲ್ಲಿಗೆ ಬಾ ! ಈ ವಾದ್ಯವನ್ನು ನುಡಿಸುವುದನ್ನು ಕಲಿಸಿಕೊಡುತ್ತೇನೆ. ನೀನು ಸ್ವಾತಂತ್ರ್ಯಕ್ಕಾಗಿ ಬದುಕು ಎಂದು ಹೇಳಿ ಆ ಸಂಗೀತಗಾರರು ತಾವು ಯಾರೆಂಬುದನ್ನು ಕೂಡ ತಿಳಿಸದೆ ಹೋದರು. ಅವರೇ ಶ್ರೀ ಠಾಕೂರರು. ಸತ್ಕರ್ಮಕ್ಕೆ ಇದಕ್ಕಿಂತ ಸುಂದರವಾದ ಉದಾಹರಣೆ ಇನ್ನಾವುದಿರಲು ಸಾಧ್ಯ? ಈಕರ್ಮದಿಂದ ಆಬಾಲಕ ಸಂಗೀತಗಾರನ ಬೆಳಕಿನಲ್ಲಿ ಆನಂದದ ಬೆಳಕು ಬಿದ್ದಿತು. ವಿದ್ಯಾಂಸರು ಹೇಳುವಂತೆ ಕಲಿಯದ ಮನುಷ್ಯ ಒಂದು ಸಣ್ಣಮೊಳೆಯನ್ನು ಕದಿಯುತ್ತಾನೆ. ಕಲಿತವನು ಒಂದು ಕೀ ರೈಲ್ವೆ ಹಳಿಯನ್ನೇ ಕದಿಯುತ್ತಾನೆ. ಹಳ್ಳಿಯ ಮನುಷ್ಯ ಸಿಟ್ಟಿಗೆ ಬಂದರೆ ಹೊರೋಷಿಮಾ, ನಾಗಾಸಾಕಿಯಂಥ ಪಟ್ಟಣಗಳೇ ಉರಿದು ಹೋಗುತ್ತವೆ. ಉತ್ತಮ ಅಭ್ಯಾಸಗಳನ್ನು ರೂಢಿಸಿಕೊಳ್ಳಿ ಎಂದು ಕೆಲವು ವಿದ್ಯಾವಂತರು ತಾಸು ತಾಸು ಉಪನ್ಯಾಸ ಮಾಡುತ್ತಾರೆ. ಆದರೆ ಉಪನ್ಯಾಸ ಮುಗಿದಕೂಡಲೇ ತಾವು ಅದೇ ಮಾಗದಲ್ಲಿ ಸಾಗಿದರೆ ಉಪನ್ಯಾಸಕ್ಕೆ ವಿದ್ಯೆಗೆ ಏನು ಬೆಲೆ? ಈ ವಿದ್ಯಾವಂತರ ವಿಚಿತ್ರ ಜೀವನವನ್ನು ಬಸವಣ್ಣನವರು ತಮ್ಮ ಒಂದು ವಚನದಲ್ಲಿ ತುಂಬಾ ಸೊಗಸಾಗಿ ಚಿತ್ರಿಸಿದಾರೆ.

ನೂರನೋಡಿ ನೂರ ಕೇಳಿದಡೇನು?
ಆಸೆ ಹರಿಯದು, ರೋಷ ಬಿಡದು,
ಮಜ್ಜನಕ್ಕೇರೆದು ಫಲವೇನು?
ಮಾತಿನಂತೆ ಮನವಿಲ್ಲದ ಜಾತಿ ಡೊಂಬರ ನೋಡಿ,
ನಗುವ ನಮ್ಮ ಕೂಡಲಸಂಗಮದೇವ.

ನಾವು ಎಷ್ಟು ಓದಿದರೇನು ಕಲಿತರೇನು, ವಿದ್ಯಾವಂತರಾಗಿದ್ದರೇನು? ನಾವು ಗಳಿಸುವ, ಬಳಸುವ ವಿದ್ಯೆಯ ಹಿಂದಿನ ಉದ್ದೇಶ, ಸರಿಯಾಗಿ ಇರದಿದ್ದರೆ ಅವರು ಗಳಿಸಿದ ವಿದ್ಯೆಯೆಲ್ಲವೂ ವ್ಯರ್ಥವಾಗುತ್ತದೆ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 23,761 ಆಗಿರುತ್ತದೆ. ಇವುಗಳ ಪೈಕಿ 13,374 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 10,387.

**ಅಗಸ್ಟ್ ತಿಂಗಳ ಪ್ರಕರಣಗಳು :** ದಾವಾಪ್ರಕರಣ 960 ಇತ್ಯರ್ಥಗೊಂಡ ಪ್ರಕರಣಗಳು 140.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 5,109 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 767 ಪ್ರಕರಣಗಳು ಇತ್ಯರ್ಥಗೊಂಡಿದ್ದು, 4342 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 1023 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 581 ಪ್ರಕರಣಗಳು ಇತ್ಯರ್ಥಗೊಂಡಿದ್ದು 442 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಅಗಸ್ಟ್ ತಿಂಗಳಿನಲ್ಲಿ 54 ಅಮಲ್ಜಾರಿ ಪ್ರಕರಣ ದಾಖಲಾಗಿರುತ್ತವೆ.

# ಸಂಯುಕ್ತ ಸಹಕಾರಿಯ 21ನೇ ವಾರ್ಷಿಕ ಸಾಮಾನ್ಯ ಸಭೆ
# 19ನೇ ಸೆಪ್ಟೆಂಬರ್ 2022

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ 21ನೇ ವಾರ್ಷಿಕ ಸಾಮಾನ್ಯ ಸಭೆಯನ್ನು **ದಿನಾಂಕ 19 ಸೆಪ್ಟೆಂಬರ್ 2022, ಸೋಮವಾರದಂದು ಕಿಂಗ್ಸ್ ಕೋರ್ಟ್, ಅರಮನೆ ಆವರಣ, ಗೇಟ್ ಸಂಖ್ಯೆ 5, ಬಳ್ಳಾರಿ ರಸ್ತೆ, ಬೆಂಗಳೂರು–560080 ಇಲ್ಲಿ ಬೆಳಿಗ್ಗೆ 10:00 ಗಂಟೆಗೆ** ಕರೆಯಲಾಗಿದೆ. ಸಭೆಯ ನೋಟೀಸನ್ನು ಅಜೆಂಡಾ ಮತ್ತು ವಿವರವಾದ ಟಿಪ್ಪಣಿಗಳೊಂದಿಗೆ ಎಲ್ಲಾ ಅರ್ಹ ಸದಸ್ಯರಿಗೆ ನೋಂದಾಯಿತ ಪಾರ್ಸಲ್ ಮೂಲಕ ಕಳುಹಿಸಲಾಗಿದೆ. ಸಭೆಯ ಅಜೆಂಡಾ. ಟಿಪ್ಪಣಿಗಳು ಮತ್ತು ಅರ್ಹ ಸದಸ್ಯರ ಪಟ್ಟಿಯು ಸಂಯುಕ್ತ ಸಹಕಾರಿಯ ವೆಬ್‌ಸೈಟ್ www.souharda.coop ನಲ್ಲಿ ಲಭ್ಯವಿರುತ್ತದೆ. ರಾಜ್ಯದ ಸೌಹಾರ್ದ ಸಹಕಾರಿಗಳು ಗಮನಿಸಲು ಕೋರಿದೆ.

## 21ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸು
## ದಿನಾಂಕ 19 ಸೆಪ್ಟೆಂಬರ್ 2022, ಸೋಮವಾರ

**ಮಾನ್ಯರೇ,**

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ 21ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ 19 ಸೆಪ್ಟೆಂಬರ್ 2022, ಸೋಮವಾರದಂದು ಕಿಂಗ್ಸ್ ಕೋರ್ಟ್, ಅರಮನೆ ಆವರಣ, ಗೇಟ್ ಸಂಖ್ಯೆ 5, ಬಳ್ಳಾರಿ ರಸ್ತೆ, ಬೆಂಗಳೂರು–560080 ಇಲ್ಲಿ ಬೆಳಿಗ್ಗೆ 10:00 ಗಂಟೆಗೆ ಕರೆಯಲಾಗಿದೆ. ಈ ಸಭೆಗೆ ತಾವು ಆಗಮಿಸಬೇಕಾಗಿ ಕೋರಲಾಗಿದೆ.

**ಸಭೆಯಲ್ಲಿ ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಗುವುದು:**

1. 21ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸನ್ನು ಓದಿ ದಾಖಲು ಮಾಡುವುದು.
2. 20ನೇ ವಾರ್ಷಿಕ ಸಾಮಾನ್ಯ ಸಭೆಯ ನಿರ್ಣಯಗಳನ್ನು ಓದಿ ದೃಢೀಕರಿಸುವುದು ಹಾಗೂ ಕೈಗೊಂಡ ಕ್ರಮಗಳನ್ನು ಅನುಮೋದಿಸುವುದು.
3. 2021–22ನೇ ಸಾಲಿನ ವಾರ್ಷಿಕ ವರದಿಯನ್ನು ಅನುಮೋದಿಸುವುದು.
4. 2021–22ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಮತ್ತು ಲೆಕ್ಕಪರಿಶೋಧಿತ ಆರ್ಥಿಕ ತಃಖ್ತೆಗಳನ್ನು ಪರಿಗಣಿಸುವುದು.
5. 2021–22ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಅನುಪಾಲನಾ ವರದಿಯನ್ನು ಅನುಮೋದಿಸುವುದು.
6. 2021–22ನೇ ಸಾಲಿನಲ್ಲಿ ಆದ ಮುಂಗಡ ಪತ್ರಕ್ಕಿಂತ ಹೆಚ್ಚುವರಿ ಖರ್ಚುಗಳನ್ನು ಅನುಮೋದಿಸುವುದು.
7. 2022–23ನೇ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರನ್ನು ನೇಮಿಸುವುದು ಮತ್ತು ಅವರ ಸಂಭಾವನೆಯನ್ನು ನಿಗದಿಪಡಿಸುವುದು.
8. 2023–24ನೇ ಸಾಲಿಗೆ ಆಂತರಿಕ ಲೆಕ್ಕಪರಿಶೋಧಕರನ್ನು ನೇಮಿಸುವುದು ಮತ್ತು ಅವರ ಸಂಭಾವನೆಯನ್ನು ನಿಗದಿಪಡಿಸುವುದು.
9. 2022–23ನೇ ಸಾಲಿನ ಪರಿಷ್ಕೃತ ವಾರ್ಷಿಕ ಕ್ರಿಯಾ ಯೋಜನೆಯನ್ನು ಅನುಮೋದಿಸುವುದು.
10. 2022–23ನೇ ಸಾಲಿನ ಪರಿಷ್ಕೃತ ಮುಂಗಡ ಪತ್ರವನ್ನು ಅನುಮೋದಿಸುವುದು.
11. 2023–24ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯನ್ನು ಅನುಮೋದಿಸುವುದು.
12. 2023–24ನೇ ಸಾಲಿನ ಮುಂಗಡ ಪತ್ರವನ್ನು ಅನುಮೋದಿಸುವುದು.
13. ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ಚುನಾವಣೆ ನಡೆದಿರುವ ಕುರಿತು.
14. ತರಬೇತಿ ಮತ್ತು ಶಿಕ್ಷಣ ಚಟುವಟಿಕೆಗಳ ಸಲುವಾಗಿ ರಾಜ್ಯದ ಪ್ರತಿಷ್ಠಿತ ವಿಶ್ವವಿದ್ಯಾಲಯದೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಕುರಿತು.
15. ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ (ಡಿಸಿಬಿಎಂ) 6 ತಿಂಗಳ ಕೋರ್ಸಿನ 5ನೇ ತಂಡವನ್ನು ಪ್ರಾರಂಭಿಸುವ ಕುರಿತು.
16. ಸದಸ್ಯ ಸಹಕಾರಿಗಳಿಗೆ ವೆಬ್ ಆಧಾರಿತ ಕಾಮನ್ ಸಾಫ್ಟ್‌ವೇರ್ ಪೂರೈಸುವ ಕುರಿತು.
17. ಡಿಐಸಿಜಿಸಿ ಮಾದರಿಯಲ್ಲಿ ಸೌಹಾರ್ದ ಸಹಕಾರಿಗಳಿಗೆ ಠೇವಣಿ ಸುರಕ್ಷಾ ಯೋಜನೆಯನ್ನು ರೂಪಿಸುವ ಕುರಿತು.
18. ಸದಸ್ಯ ಸಹಕಾರಿಗಳಿಗೆ ಗೋಡೆ ಗಡಿಯಾರ (ವಾಲ್ ಕ್ಲಾಕ್) ನೀಡುವ ಕುರಿತು.

19 ಸಂಯುಕ್ತ ಸಹಕಾರಿಯು ಇತರೆ ಸಹಕಾರಿಗಳೊಂದಿಗೆ ಹೊಂದಿರುವ ಸದಸ್ಯತ್ವದ ಕುರಿತು.

20. ಹಿಂದಿನ ಸಹಕಾರ ವರ್ಷದಲ್ಲಿ ಸದಸ್ಯರನ್ನು ಸೇರಿಸಿಕೊಂಡ ಮತ್ತು ತೆಗೆದು ಹಾಕಿದ ಬಗೆಗಿನ ಸಂಕ್ಷಿಪ್ತ ವರದಿ.

21. 14, 15 ಮತ್ತು 16ನೇ ಪ್ರಕರಣಗಳ ಅಡಿಯಲ್ಲಿ ಸೃಜಿಸಲಾದ ಯಾವುದೇ ಸಂಸ್ಥೆ ಇದ್ದಲ್ಲಿ ಅದರ ವಾರ್ಷಿಕ ವರದಿಯ ಮತ್ತು ಲೆಕ್ಕಗಳ ಪುನರವಲೋಕನ. ಸಹಕಾರ ಅಭಿವೃದ್ಧಿ ಪ್ರತಿಷ್ಠಾನ (ಸ್ಯಾಪ್-ಕೆ) ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳ ಪರಿಗಣನೆ.

22. ಸೌಹಾರ್ದ ಸಹಕಾರಿಗಳಲ್ಲಿನ ಸಮಸ್ಯಾತ್ಮಕ ಸೌಹಾರ್ದ ಸಹಕಾರಿಗಳ ಮೇಲೆ ನಿರಂತರ ಕ್ರಮ ವಹಿಸಲು ಟಾಸ್ಕ್‌ಫೋರ್ಸ್ ರಚನೆ ಮಾಡಿರುವ ಕುರಿತು.

23. ಸೌಹಾರ್ದ ಸಹಕಾರಿಗಳಿಗೆ ವಿವಿಧ ಸೇವೆಗಳನ್ನು ಒದಗಿಸಲು ಇನ್ಸೂರೆನ್ಸ್/ ಬ್ರೋಕರೇಜ್/ ಸೇವಾ ಪೂರೈಕೆದಾರ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಳ್ಳುವ ಕುರಿತು.

24. ಹಿಂದಿನ ಸಹಕಾರಿ ವರ್ಷದ ಹೆಚ್ಚುವರಿ ಅಥವಾ ನಿವ್ವಳ ಲಾಭದ ವಿಲೇವಾರಿ.

25. ಕಾರ್ಯಾಚರಣೆಯ ಕೊರತೆ ಏನಾದರೂ ಇದ್ದಲ್ಲಿ ಅದರ ಪುನರವಲೋಕನ.

26. ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ನಿರ್ದಿಷ್ಟ ಮೀಸಲು ಮತ್ತು ಇತರ ನಿಧಿಗಳ ಸೃಜನೆ.

27. ಮೀಸಲು ಮತ್ತು ಇತರ ನಿಧಿಗಳ ವಾಸ್ತವಿಕ ಬಳಕೆಯ ಪುನರಲೋಕನ.

28. ಮಂಡಲಿಯ ಸದಸ್ಯರಿಂದ ಸಂಯುಕ್ತ ಸಹಕಾರಿಯ ಸೇವೆಗಳ ಉಪಯೋಗದ ಅವಲೋಕನ.

29. ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಕರಿಗೆ ನೀಡಿದ ಸಾಲಗಳು ಮತ್ತು ಮುಂಗಡಗಳು ಮತ್ತು ಸುಸ್ಥಿ ಸಾಲಗಳು ಯಾವುದಾದರೂ ಇದ್ದಲ್ಲಿ, ಸುಸ್ಥಿ ಸಾಲಗಳ ವಸೂಲಾತಿಗೆ ತೆಗೆದುಕೊಂಡ ಕ್ರಮದ ಪರಿಶೀಲನೆ.

30. ಒಟ್ಟುಗೂಡಿಸುವಿಕೆ, ವಿಭಜನೆ, ವಿಲೀನತೆ ಮತ್ತು ಸ್ವತ್ತುಗಳ ಮತ್ತು ಹೊಣೆಗಾರಿಕೆಗಳ ವರ್ಗಾವಣೆ.

31. ವಸೂಲಾಗದೆಂದು ಪರಿಗಣಿತವಾದ ಸುಸ್ಥಿ ಸಾಲಗಳ ಬಗ್ಗೆ ತೀರ್ಮಾನ.

32. ಮಂಡಲಿಯ ನಿರ್ದೇಶಕರುಗಳನ್ನು ತೆಗೆದುಹಾಕುವುದು.

33. 65ನೇ ಪ್ರಕರಣದ ಅಡಿಯಲ್ಲಿ ವಿಚಾರಣಾ ವರದಿ ಯಾವುದಾದರೂ ಇದ್ದಲ್ಲಿ, ಅದರ ಬಗ್ಗೆ ಕೈಗೊಂಡ ಕ್ರಮಗಳ ವರದಿ.

34. ಮಂಡಲಿಯಿಂದ ಯಾವ ವ್ಯಕ್ತಿಯ ಸದಸ್ಯತ್ವದ ಅರ್ಜಿಯನ್ನು ನಿರಾಕರಿಸಲಾಗಿದೆಯೋ ಆ ವ್ಯಕ್ತಿಯು ಸಲ್ಲಿಸಿದ ಅಪೀಲು ಯಾವುದಾದರೂ ಇದ್ದಲ್ಲಿ ಅದರ ಪರಿಗಣನೆ.

35. ನಿರ್ದೇಶಕರುಗಳ ಅಥವಾ ಮುಖ್ಯಕಾರ್ಯನಿರ್ವಾಹಕನ ಸಂಬಂಧಿಗಳನ್ನು ನೇಮಕ ಮಾಡಿಕೊಂಡಿರುವಲ್ಲಿ ಆ ನೌಕರರ ಪಟ್ಟಿಯ ಪರಿಗಣನೆ.

36. ಉಪವಿಧಿ ತಿದ್ದುಪಡಿ.

37. ನಿರ್ದೇಶಕರ ಮತ್ತು ಪದಾಧಿಕಾರಿಗಳ ನಡತೆ ಸಂಹಿತೆಯ ರಚನೆ.

38. ಸಂಯುಕ್ತ ಸಹಕಾರಿಯ ಸಮಾಪನೆ.

39. ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಅಂಥ ಇತರ ಪ್ರಕ್ರಿಯೆಗಳು.

40. ಅಧ್ಯಕ್ಷರ ಒಪ್ಪಿಗೆ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳು.

**ಆಡಳಿತ ಮಂಡಲಿಯ ಅಪ್ಪಣೆಯ ಮೇರೆಗೆ,**
**ವಂದನೆಗಳೊಂದಿಗೆ,**

Karnataka State Souharda Federal Cooperative Ltd. Reg. No. RSR / SOU / ACT / 136 Regn. 051 / 2001-02 dated : 04-01-2002 Bangalore

**ಇಂತಿ ತಮ್ಮ ವಿಶ್ವಾಸಿ**
**(ಶರಣಗೌಡ ಜಿ. ಪಾಟೀಲ)**
**ವ್ಯವಸ್ಥಾಪಕ ನಿರ್ದೇಶಕ**

**ಸ್ಥಳ : ಬೆಂಗಳೂರು**
**ದಿನಾಂಕ : 29.08.2022**

## ಸಾಮಾನ್ಯ ಸಭೆಗೆ ಸಂಬಂಧಿಸಿದಂತೆ ವಿಶೇಷ ಮಾಹಿತಿ

- ಸಭೆಯ ನೋಟಿಸನ್ನು ಎಲ್ಲಾ ಅರ್ಹ ಸಹಕಾರಿಗಳಿಗೆ ದಿನಾಂಕ 29.08.2022 ರಂದು ನೋಂದಾಯಿತ ಅಂಚೆ ಮೂಲಕ ಕಳುಹಿಸಲಾಗಿದೆ. ಸಭೆಗೆ ಬರುವಾಗ ಸಭೆಯ ನೋಟೀಸನ್ನು ತಪ್ಪದೇ ತರುವುದು.
- ಎಲ್ಲಾ ಸೌಹಾರ್ದ ಸಹಕಾರಿಗಳೂ ಕೂಡ ಸಂಯುಕ್ತ ಸಹಕಾರಿಯ ಸದಸ್ಯರು. ಪ್ರತಿವರ್ಷ ನಡೆಯುವ ಸಾಮಾನ್ಯ ಸಭೆಯಲ್ಲಿ ನಡೆಯುವ ಚರ್ಚೆ, ತೆಗೆದುಕೊಳ್ಳುವ ನಿರ್ಣಯಗಳು ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಅನ್ವಯವಾಗುತ್ತವೆ. ಈ ಮಹತ್ವದ ಸಭೆಯಲ್ಲಿ ಭಾಗವಹಿಸುವ ಮೊದಲು, ಎಲ್ಲಾ ಅರ್ಹ ಸಹಕಾರಿಗಳ ಡೆಲಿಗೇಟುಗಳು ಸಭೆಯ ಅಜೆಂಡಾ ಮತ್ತು ಟಿಪ್ಪಣಿಗಳನ್ನು ಅಧ್ಯಯನ ಮಾಡಿಕೊಂಡು ಬರುವ ಮೂಲಕ ಸಭೆಯನ್ನು ಯಶಸ್ವಿಗೊಳಿಸಲು ಕೋರಿದೆ.
- ಅಧಿಕೃತ ಡೆಲಿಗೇಟುಗಳನ್ನು ಹೊರತುಪಡಿಸಿ, ಯಾವುದೇ ವೀಕ್ಷಕರಿಗೂ ಹಾಗೂ ಡೆಲಿಗೇಟುಗಳೊಂದಿಗೆ ಬರುವ ಯಾವುದೇ ಸದಸ್ಯರಿಗೂ ಸಭೆಯ ಕಾರ್ಯ-ಕಲಾಪಗಳಲ್ಲಿ ಪಾಲ್ಗೊಳ್ಳಲು ಅವಕಾಶ ಇರುವುದಿಲ್ಲ. ಸಾಮಾನ್ಯ ಸಭೆಯ ಅಧಿಕೃತ ಕಾರ್ಯ- ಕಲಾಪ ಮುಕ್ತಾಯವಾದ ನಂತರದ ಕಾರ್ಯಕ್ರಮಗಳಲ್ಲಿ ವೀಕ್ಷಕರು ಹಾಗೂ ಇತರೆ ಸಹಕಾರಿಗಳು ಭಾಗವಹಿಸಲು ಮುಕ್ತ ಅವಕಾಶ ಇರುತ್ತದೆ.
- ಸಭೆಯಲ್ಲಿ ಪ್ರಶ್ನೆ ಕೇಳಬಯಸುವ ಸದಸ್ಯರು ದಿನಾಂಕ 12.09.2022ರೊಳಗೆ ಲಿಖಿತವಾಗಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಿಗೆ ತಮ್ಮ ಪ್ರಶ್ನೆಯನ್ನು ನೀಡಬಹುದು ಅಥವಾ kssfcladmin@souharda.coop ಇ-ಮೇಲ್‌ಗೆ ಕಳುಹಿಸಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಸಾಮಾನ್ಯ ಸಭೆ ನಡೆಸುವ ನಿಯಮಾವಳಿಗಳನ್ನು ಗಮನಿಸುವುದು.
- ವಾರ್ಷಿಕ ವರದಿ ಪುಸ್ತಕದ ಕೊನೆಯಲ್ಲಿ ಸಭೆ ನಡೆಸುವ ರೀತಿ, ನೀತಿ ಮತ್ತು ನಡವಳಿಗಳನ್ನು ಮುದ್ರಿಸಲಾಗಿದೆ. ಅದನ್ನು ಗಮನಿಸಿ ಮತ್ತು ಪಾಲಿಸುವ ಮೂಲಕ, ಸಂಯುಕ್ತ ಸಹಕಾರಿಯ ಸಾಮಾನ್ಯ ಸಭೆಯನ್ನು ಸುಗಮವಾಗಿ, ವ್ಯವಸ್ಥಿತವಾಗಿ, ಹೆಚ್ಚು ಅರ್ಥ ಪೂರ್ಣವಾಗಿ ಮತ್ತು ಯಶಸ್ವಿಯಾಗಿ ನಡೆಸಲು ಸಹಕರಿಸಲು ಕೋರಿದೆ.

## ಸಾಮಾನ್ಯ ಸಭೆಯ ದಿನದ ಕಾರ್ಯಕ್ರಮಗಳು

- **ಊಟೋಪಚಾರ :** ಬೆಳಿಗ್ಗೆ ಉಪಹಾರ (ಬೆಳಿಗ್ಗೆ 8.00 ಗಂಟೆಯಿಂದ 11.00 ಗಂಟೆಯವರೆಗೆ), ಭೋಜನ (ಮಧ್ಯಾಹ್ನ 12.30 ಗಂಟೆಯಿಂದ 3 ಗಂಟೆಯ ರವರೆಗೆ) ಮತ್ತು ಸಾಯಂಕಾಲ 4 ಗಂಟೆಗೆ ಲಘು ಉಪಹಾರ, ಚಹಾ/ಕಾಫಿ ವ್ಯವಸ್ಥೆ ಇರುತ್ತದೆ.
- **ಪ್ರಶಸ್ತಿ ವಿತರಣಾ ಕಾರ್ಯಕ್ರಮ :** ಸಾಮಾನ್ಯ ಸಭೆಯ ಅಧೀಕೃತ ಕಾರ್ಯ ಕಲಾಪಗಳು ಮುಗಿದ ನಂತರ, ರಾಜ್ಯದ ಉತ್ತಮ ಸೌಹಾರ್ದ ಸಹಕಾರಿ ಸಂಘ ಹಾಗೂ ಶ್ರೇಷ್ಠ ಸಹಕಾರಿಗಳಿಗೆ ಪ್ರಶಸ್ತಿ ವಿತರಣಾ ಕಾರ್ಯಕ್ರಮ ನಡೆಯಲಿದೆ.
- **ತಂತ್ರಜ್ಞಾನ ಮೇಳ :** ಸಾಮಾನ್ಯ ಸಭೆಯ ಸ್ಥಳದ ಆವರಣದಲ್ಲಿ ತಂತ್ರಾಂಶ (software) ಪೂರೈಕೆದಾರರು, ವಿಮಾ ಉತ್ಪನ್ನ ಅಥವಾ ಬಡ್ಡಿಯೇತರ ಆದಾಯಗಳಿಗೆ ಸಂಬಂಧಿಸಿದ ಸೇವಾ ಪೂರೈಕೆದಾರರು, ತಂತ್ರಜ್ಞಾನ (Technology) ಹಾಗೂ ಸುರಕ್ಷತಾ (security) ಉಪಕರಣಗಳ ಪೂರೈಕೆದಾರರು ತಮ್ಮ ಸೇವೆ/ಉಪಕರಣಗಳ ಮಾಹಿತಿ ಮಳಿಗೆಗಳನ್ನು ತೆರೆಯಲಿದ್ದು ಸಹಕಾರಿಗಳು ಸದರಿ ಮಳಿಗೆಗಳಿಗೆ ಭೇಟಿ ನೀಡುವ ಮೂಲಕ ಅಗತ್ಯ ಮಾಹಿತಿಗಳನ್ನು ಪಡೆಯಬಹುದಾಗಿದೆ.
- **ಪ್ರಕಟಣೆಗಳ ಬಿಡುಗಡೆ ಹಾಗೂ ಮಾರಾಟ ಮಳಿಗೆ :** ಸಾಮಾನ್ಯ ಸಭೆಯ ಸ್ಥಳದ ಆವರಣದಲ್ಲಿ ಸಂಯುಕ್ತ ಸಹಕಾರಿಯ ಎಲ್ಲ ಪ್ರಕಟಣೆಗಳ ಮಾರಾಟ ಮಳಿಗೆಯ ವ್ಯವಸ್ಥೆ ಇರುತ್ತದೆ. ಹಾಗೂ ಸಾಮಾನ್ಯ ಸಭೆಯ ಅಧೀಕೃತ ಕಾರ್ಯ ಕಲಾಪಗಳು ಮುಗಿದ ನಂತರ ನೂತನ ಪ್ರಕಟಣೆಗಳ ಬಿಡುಗಡೆ ಮಾಡಲಾಗುವುದು.

**ಸೌಹಾರ್ದ ಸಹಕಾರಿ ಪ್ರತಿನಿಧಿಗಳು ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಬಿಡುವು ಮಾಡಿಕೊಂಡು, ಸಾಮಾನ್ಯ ಸಭೆಯ ಕಲಾಪದ ಜೊತೆಗೆ ದಿನದ ಎಲ್ಲಾ ಕಾರ್ಯಕ್ರಮಗಳಲ್ಲೂ ಭಾಗವಹಿಸಿ ಎಲ್ಲಾ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ಕೋರಿದೆ.**

## ಸಂಯುಕ್ತ ಸಹಕಾರಿಯ 21ನೇ ಸಾಮಾನ್ಯ ಸಭೆಯ ಕಾರ್ಯಕಲಾಪಗಳ ವಿವರ

- ಬೆಳಿಗ್ಗೆ 8.00 ರಿಂದ 11.00 ರವರೆಗೆ — ಉಪಹಾರ
- ಬೆಳಿಗ್ಗೆ 9.00 ರಿಂದ 10.00 ವರೆಗೆ — ಸುಗಮ ಸಂಗೀತ

  ಧ್ವಜಾರೋಹಣ – ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಿಂದ
- ಬೆಳಿಗ್ಗೆ 10.00 ರಿಂದ — ಸಾಮಾನ್ಯ ಸಭೆ ಕಲಾಪಗಳು
- ಮಧ್ಯಾಹ್ನ 12.30 ರಿಂದ 2.30 ರವರೆಗೆ — ತಾಂತ್ರಿಕ ಮೇಳ ಉದ್ಘಾಟನೆ – ಮಾನ್ಯ ಸಚಿವರಾದ ಡಾ. ಸಿ ಎನ್ ಅಶ್ವತ್ಥನಾರಾಯಣ ಇವರಿಂದ

  ಪ್ರಶಸ್ತಿ ಪ್ರಧಾನ ಸಮಾರಂಭ

  1. ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನೆ.
  2. ಶ್ರೇಷ್ಠ ಸಹಕಾರ ಮತ್ತು ಉತ್ತಮ ಸೌಹಾರ್ದ ಸಹಕಾರಿ ಪ್ರಶಸ್ತಿ ವಿತರಣೆ
     – ಶ್ರೀ ಅರಗ ಜ್ಞಾನೇಂದ್ರ, ಮಾನ್ಯ ಗೃಹ ಸಚಿವರು, ಕರ್ನಾಟಕ ಸರ್ಕಾರ,
     – ಶ್ರೀ ಸುನೀಲ್ ಕುಮಾರ್, ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ಇಂಧನ ಸಚಿವರು, ಕರ್ನಾಟಕ ಸರ್ಕಾರ
     – ಶ್ರೀ ಉಮಾಶಂಕರ್, ಐಎಎಸ್, ಮಾನ್ಯ ಪ್ರಧಾನ ಕಾರ್ಯದರ್ಶಿಗಳು
     – ಶ್ರೀ ಕ್ಯಾಪ್ಟನ್ ರಾಜೇಂದ್ರ ಐಎಎಸ್, ಮಾನ್ಯ ಸಹಕಾರಿಗಳ ನಿಬಂಧಕರು, ಇವರುಗಳಿಂದ
  3. ಪ್ರಕಟಣೆಗಳ ಬಿಡುಗಡೆ
- ಮಧ್ಯಾಹ್ನ 12.30 ರಿಂದ 3.00 ರವರೆಗೆ — ಭೋಜನ ವ್ಯವಸ್ಥೆ
- ಮಧ್ಯಾಹ್ನ 3.00 ರಿಂದ 4.30 ರವರೆಗೆ — ಉಪನ್ಯಾಸ ಕಾರ್ಯಕ್ರಮ

  – ಸರ್ಫೇಸಿ ಆಕ್ಟ್ ಸಹಕಾರ ಸಂಘಗಳಿಗೆ ಅನ್ವಯಿಸುವುದೇ?

ವಿಶೇಷ ಸನ್ಮಾನ : – ಶ್ರೀ ಎಸ್ ಎಸ್ ಪಾಟೀಲ, ಮಾನ್ಯ ಮಾಜಿ ಸಹಕಾರ & ಅರಣ್ಯ ಸಚಿವರು.

– ಶ್ರೀ ಸಿ ಎನ್ ಪರಶಿವಮೂರ್ತಿ, ಮಾನ್ಯ ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರು.

## ವಿಷಯಾಧಾರಿತ ತರಬೇತಿ ಕಾರ್ಯಕ್ರಮಗಳು




**ಹಾಸನ** : ದಿನಾಂಕ: 12.08.2022ರಂದು ಹಾಸನ ಜಿಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಸಿಇಓಗಳಿಗೆ "ವಿಷಯಾಧಾರಿತ ತರಬೇತಿ" ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಎಸ್. ಶಂಕರ್, ಮಾನ್ಯ ಉಪ ನಿಬಂಧಕರು, ಹಾಸನ ಜಿಲ್ಲೆ ಇವರು ನೆರೆವೇರಿಸಿದರು. ಈ ಸಂದರ್ಭದಲ್ಲಿ ವೇದಿಕೆ ಮೇಲೆ ಶ್ರೀ ಮಂಜುನಾಥ ರವರು, ಮಾನ್ಯ ಪ್ರಾಂತೀಯ ನಿರ್ದೇಶಕರು, ಸಂಯುಕ್ತ ಸಹಕಾರಿ, ಬೆಂಗಳೂರು ಇವರು, ಶ್ರೀ ಖಾಲೀದ್ ಅಹಮ್ಮದ್ ರವರು, ಸಹಾಯಕ ನಿಬಂಧಕರು, ಸಕಲೇಶಪುರ ಉಪವಿಭಾಗ, ಇವರು, ಶ್ರೀ ಶಿವಕುಮಾರ ಬಿರಾದರ, ಪ್ರಾಂತೀಯ ವ್ಯವಸ್ಥಾಪಕರು ಉಪಸ್ಥಿತರಿದ್ದರು.

ಅವಧಿ– 1 "ಸಂವಹನ ಕಲೆ" ವಿಷಯದ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಶ್ರೀನಿವಾಸ ಕುಮಾರ್, ಪ್ರಾಂಶುಪಾಲರು, ಶ್ರವಣಬೆಳಗೊಳ ಇವರು ನಡೆಸಿಕೊಟ್ಟರು.

ಅವಧಿ – 2 "ಜಿಲ್ಲಾ ಸಹಕಾರಿಗಳ ಒಕ್ಕೂಟದ ಷೇರು ಸಂಗ್ರಹದ ಕಾರ್ಯ ಮತ್ತು ನೋಂದಣಿ ಕಾರ್ಯಚಟುವಟಿಕೆಗಳ" ವಿಷಯದ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಜಗದೀಶ ಹೆಬ್ಬಾರ್ ರವರು ನಡೆಸಿಕೊಟ್ಟರು.

ತರಬೇತಿಯ ಪ್ರಾರಂಭದಲ್ಲಿ ಇತ್ತೀಚೆಗೆ ನಿಧನರಾದ ದಿ. ಶ್ರೀ ಶ್ಯಾಮ್ ಸುಂದರ್, ಅಧ್ಯಕ್ಷರು, ಸಾಯಿ ಸಿರಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಹಾಸನ ಇವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಸ್ವಾಗತ & ಪರಿಚಯ – ಶ್ರೀಮತಿ ಮಮತಾ, ಸಿಇಓ, ಹಾಸನಾಂಬ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಹಾಸನ ಇವರು, ಪ್ರಾರ್ಥನೆ– ಶ್ರೀಮತಿ ಪುಷ್ಪಾವತಿ, ಸಿಇಓ, ಹಾಸನ ವರ್ತಕರ ಸೌಹಾರ್ದ ಪತ್ತಿನ ಸಹಕಾರಿ ನಿ., ಹಾಸನ ಇವರು, ಪ್ರಾಸ್ತಾವಿಕ ನುಡಿ– ಶ್ರೀ ಶಿವಕುಮಾರ ಬಿರಾದರ, ಪ್ರಾಂತೀಯ ವ್ಯವಸ್ಥಾಪಕರು, ಮೈಸೂರು ಇವರು ನಿರೂಪಣೆ– ಶ್ರೀ ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು, ಹಾಗೂ ವಂದನಾರ್ಪಣೆ ಶ್ರೀ ದೇವರಾಜು, ಸಿಇಓ, ಶ್ರೀ ಪುಷ್ಪಗಿರಿ ಸೌಹಾರ್ದ ಸಹಕಾರಿ ನಿ., ಹಾಸನ ಇವರು ಮಾಡಿದರು. ತರಬೇತಿಯಲ್ಲಿ 27 ಸಹಕಾರಿಗಳಿಂದ 45 ಪ್ರತಿನಿಧಿಗಳು ಮತ್ತು ಇತರೇ 10 ಜನರು ಸೇರಿ ಒಟ್ಟು 55 ಪ್ರತಿನಿಧಿಗಳು ಹಾಜರಿದ್ದರು. ತರಬೇತಿಯ ಕೊನೆಯಲ್ಲಿ ಪ್ರಾಂತೀಯ ನಿರ್ದೇಶಕರು, ಉಪ ನಿಬಂಧಕರು ಹಾಗೂ ಸಹಾಯಕ ನಿಬಂಧಕರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.




**ಚಾಮರಾಜನಗರ :** ದಿನಾಂಕ: 13.08.2022ರಂದು ಚಾಮರಾಜನಗರ ಜಿಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಸಿಇಓಗಳಿಗೆ "ವಿಷಯಾಧಾರಿತ ತರಬೇತಿ" ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಮಂಜುನಾಥ ರವರು, ಮಾನ್ಯ ಪ್ರಾಂತೀಯ ನಿರ್ದೇಶಕರು, ಸಂಯುಕ್ತ ಸಹಕಾರಿ, ಬೆಂಗಳೂರು ಇವರು ನೇರವೇರಿಸಿದರು. ಈ ಸಂದರ್ಭದಲ್ಲಿ ವೇದಿಕೆ ಮೇಲೆ ಇವರು, ಶ್ರೀ ಜಗದೀಶ್ ಹೆಬ್ಬಾರ್ ರವರು, ಸಂಪನ್ಮೂಲ ವ್ಯಕ್ತಿ, ಮೈಸೂರು ಇವರು, ಶ್ರೀ ಶಿವಕುಮಾರ ಬಿರಾದರ, ಪ್ರಾಂತೀಯ ವ್ಯವಸ್ಥಾಪಕರು, ಮೈಸೂರು ಇವರು ಹಾಗೂ ಶ್ರೀ ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು ಇವರುಗಳು ಉಪಸ್ಥಿತರಿದ್ದರು.

ಅವಧಿ – 1 "ಜಿಲ್ಲಾ ಸಹಕಾರಿಗಳ ಒಕ್ಕೂಟದ ಷೇರು ಸಂಗ್ರಹದ ಕಾರ್ಯ ಮತ್ತು ನೋಂದಣಿ ಕಾರ್ಯಚಟುವಟಿಕೆಗಳ" ವಿಷಯದ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಜಗದೀಶ ಹೆಬ್ಬಾರ್ ರವರು ನಡೆಸಿಕೊಟ್ಟರು.

ಅವಧಿ – 2 "ಕೆಲಸದ ಸಂದರ್ಭದಲ್ಲಿ ಉದ್ಯೋಗಿಗಳು ಡಿಜಿಟಲ್ ಮತ್ತು ಮಿಲೇನಿಯಲ್ ವ್ಯವಸ್ಥೆ ಬಳಕೆ ಹಾಗೂ ಸಂಬಂಧಗಳು" (Transformation of Employee Relations in Digital and Millennial Workplace.) ವಿಷಯದ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಸದ್ಗುರು ಸ್ವಾಮಿ, ಹಿರಿಯ ವ್ಯವಸ್ಥಾಪಕರು, ಮಾನವ ಸಂಪನ್ಮೂಲ ವಿಭಾಗ, ಟಿ.ವಿ.ಎಸ್ ಮೋಟಾರ್ ಕಂಪನಿ., ಕಡಕೊಳ, ಮೈಸೂರು ಇವರು ನಡೆಸಿಕೊಟ್ಟರು.

ಸ್ವಾಗತ & ಪರಿಚಯ – ಶ್ರೀ ವಲ್ಲಭದಾಸ್, ಸಿಇಓ, ಮಾರ್ಟಳ್ಳಿ ಸೌಹಾರ್ದ ಸಹಕಾರಿ ನಿ., ಹನೂರು ತಾ. ಇವರು, ಪ್ರಾರ್ಥನೆ–ಶ್ರೀ ಕೆ.ಎಸ್ ಮಹದೇವಸ್ವಾಮಿ, ಸಿಇಓ, ಸಿರಿ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಇವರು, ಪ್ರಾಸ್ತಾವಿಕ ನುಡಿ– ಶ್ರೀ ಶಿವಕುಮಾರ ಬಿರಾದರ, ಪ್ರಾಂತೀಯ ವ್ಯವಸ್ಥಾಪಕರು, ಮೈಸೂರು ಇವರು ನಿರೂಪಣೆ ಶ್ರೀ ಶಿವಕುಮಾರ್, ಸಿಇಓ, ನವ್ಯಕರ್ನಾಟಕ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ, ಹಾಗೂ ವಂದನಾರ್ಪಣೆ ಶ್ರೀ ಚಂದ್ರಶೇಖರ್ ಪಾಟೀಲ, ಸಿಇಓ, ಶ್ರೀ ಸ್ನೇಹಜ್ಯೋತಿ ಮಹಿಳಾ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಇವರು ಮಾಡಿದರು.

ತರಬೇತಿಯಲ್ಲಿ 21 ಸಹಕಾರಿಗಳಿಂದ 39 ಪ್ರತಿನಿಧಿಗಳು ಮತ್ತು ಇತರೇ 5 ಜನರು ಸೇರಿ ಒಟ್ಟು 44 ಪ್ರತಿನಿಧಿಗಳು ಹಾಜರಿದ್ದರು. ತರಬೇತಿಯ ಕೊನೆಯಲ್ಲಿ ಪ್ರಾಂತೀಯ ನಿರ್ದೇಶಕರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.



**ಬಳ್ಳಾರಿ ಮತ್ತು ವಿಜಯನಗರ :** ದಿನಾಂಕ 25.08.2022 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಆಯೋಜಿಸಿದ್ದ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ಉಪಾಧ್ಯಕ್ಷರು/ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಸಂಪರ್ಕಸಭೆ ಮತ್ತು ವಿಷಯಾಧಾರಿತ ತರಬೇತಿಯನ್ನು ಹೋಟೆಲ್ ಮಲ್ಲಿಗೆ, ಲಕ್ಷ್ಮೀ ಸರಸ್ವತಿ ಚಿತ್ರಮಂದಿರ ಹತ್ತಿರ, ಹೊಸಪೇಟೆ, ಇಲ್ಲಿ ಆಯೋಜಿಸಲಾಗಿತ್ತು. ಮೊದಲಿಗೆ ಸಂಪರ್ಕ ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್ ಪ್ರಸನ್ನಕುಮಾರ ನೇರವೇರಿಸಿದರು. ಸಂಪರ್ಕ ಸಭೆಯಲ್ಲಿ ಸಂಯುಕ್ತ ಮಾನ್ಯ ಅಧ್ಯಕ್ಷರಾದ ಶ್ರೀ ಜಿ.ನಂಜನಗೌಡರವರು ಸಹಕಾರಿಗಳು ಕೇಳಲಾದ ಅನೇಕ ಪ್ರಶ್ನೆಗಳಿಗೆ ಸಮಂಜಸವಾದ ಮಾಹಿತಿ ನೀಡಿದರು. ಸಂಯುಕ್ತ ಸಹಕಾರಿಯ ಸಾಮಾನ್ಯ ಸಭೆಯ ಬಗ್ಗೆಯು ಮಾಹಿತಿ ನೀಡಿದರು. ಅದೇ ರೀತಿ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಹೆಚ್. ಕೃಷ್ಣಾರೆಡ್ಡಿಯವರು, ಆರ್ ತಿಮ್ಮಯ್ಯಶೆಟ್ಟಿಯವರು, ಶ್ರೀ ಹನುಮಂತಯ್ಯಶೆಟ್ಟಿಯವರು ಭಾಗವಹಿಸಿದ್ದರು. ಪ್ರಾಸ್ತಾವಿಕ ನುಡಿಯನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್ ರವರು ಸ್ವಾಗತವನ್ನು ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಹಿರಿಯ ವ್ಯವಸ್ಥಾಪಕರು ಮಾಡಿದರು. ಕಾರ್ಯಕ್ರಮದ ನಿರೂಪಣೆ ಮತ್ತು ವಂದನಾರ್ಪಣೆಯನ್ನು ಶ್ರೀ ರವಿಕುಮಾರ ಕೆ.ಆರ್ ನಿರ್ವಹಿಸಿದರು. ಈ ಕಾರ್ಯಕ್ರಮದಲ್ಲಿ ವಿಜಯನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಂದ ಸಂಯುಕ್ತ ಸಹಕಾ–ರಿಯ ಮಾನ್ಯ ಅಧ್ಯಕ್ಷರಿಗೆ, ಉಪಾಧ್ಯಕ್ಷರಿಗೆ, ನಿರ್ದೇಶಕರಿಗೆ ಹಾಗೂ ಅತಿಥಿಗಳಿಗೆ ಸನ್ಮಾನ ಮಾಡಿದರು. ಮಧ್ಯಾಹ್ನದ ಅವಧಿಯಲ್ಲಿ ವಿಷಯಾಧಾ–ರಿತ ತರಬೇತಿಯನ್ನು ಆಯೋಜಿಸಲಾಗಿತ್ತು. ಮೊದಲಿಗೆ ಕಾಯ್ದೆ ತಿದ್ದುಪಡಿಯ ಕುರಿತು ಶ್ರೀ ಶ್ರೀಕಾಂತ ಬರುವೆ, ಉಪಪ್ರಧಾನ ವ್ಯವಸ್ಥಾಪಕರು ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಉಪನ್ಯಾಸ ನೀಡಿದರು. ನಂತರ ಆಡಳಿತ ಮಂಡಳಿ ಸದಸ್ಯರ ಶಾಸನಬದ್ಧ ಹಕ್ಕು ಮತ್ತು ಕರ್ತವ್ಯಗಳು ಎಂಬ ವಿಷಯದ ಕುರಿತು ಶ್ರೀ ಹೆಚ್.ಎಸ್ ನಾಗರಾಜಯ್ಯನವರು, ಮಾನ್ಯ ಅಪರ ನಿಬಂಧಕರು (ನಿವೃತ್ತ) ಇವರು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ 98 ಸಹಕಾರಿಗಳಿಂದ 186 ಪ್ರತಿನಿಧಿಗಳು ಭಾಗವಹಿಸಿದ್ದರು.




**ಕೊಪ್ಪಳ :** ದಿನಾಂಕ 25.08.2022 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಆಯೋಜಿಸಿದ್ದ ಕೊಪ್ಪಳ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು / ಉಪಾಧ್ಯಕ್ಷರು / ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ಸಂಪರ್ಕಸಭೆ ಮತ್ತು ವಿಷಯಾಧಾರಿತ ತರಬೇತಿಯನ್ನು ಜಿಲ್ಲಾ ಗಾಣಿಗರ ಸಮುದಾಯ ಭವನ, ಕುಷ್ಟಗಿ ರಸ್ತೆ, ರೈಲ್ವೆ ಗೇಟ್ ಹತ್ತಿರ, ಕೊಪ್ಪಳ ಇಲ್ಲಿ ಆಯೋಜಿಸಲಾಗಿತ್ತು. ಸಂಪರ್ಕ ಸಭೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್ ಪ್ರಸನ್ನಕುಮಾರ, ಮಾನ್ಯ ನಿರ್ದೇಶಕರಾದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿಯವರು, ಆರ್ ತಿಮ್ಮಯ್ಯಶೆಟ್ಟಿಯವರು, ಶ್ರೀ ಹನುಮಂತಯ್ಯಶೆಟ್ಟಿಯವರು ಹಾಗೂ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ.ಪಾಟೀಲರವರು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್‌ರವರು ಕೊಪ್ಪಳ ಜಿಲ್ಲಾ ಒಕ್ಕೂಟದ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಪತ್ತಾರವರು ಮತ್ತು ನಿರ್ದೇಶಕರು ಉಪಸ್ಥಿತರಿದ್ದರು. ಪ್ರಾಸ್ತಾವಿಕ ನುಡಿಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲರವರು ನುಡಿದರು. ಸ್ವಾಗತವನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ ರವರು ಮಾಡಿದರು. ನಿರೂಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ವೆಂಕಟೇಶ ರಾಠೋಡರವರು ನೆರವೇರಿಸಿದರು. ಈ ಕಾರ್ಯಕ್ರಮದಲ್ಲಿ ಕೊಪ್ಪಳ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಂದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಿಗೆ, ಉಪಾಧ್ಯಕ್ಷರಿಗೆ, ನಿರ್ದೇಶಕರಿಗೆ ಹಾಗೂ ಅತಿಥಿಗಳಿಗೆ ಸನ್ಮಾನ ಮಾಡಿದರು. ಬೆಳಗಿನ ಅವಧಿಯಲ್ಲಿ ವಿಷಯಾಧಾರಿತ ತರಬೇತಿಯಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರ ತಿದ್ದಪಡಿಗಳ ಕುರಿತು ಉಪನ್ಯಾಸ ನೀಡಿದರು. ನಂತರ ಆಡಳಿತ ಮಂಡಳಿ ಸದಸ್ಯರ ಶಾಸನಬದ್ಧ ಹಕ್ಕು ಮತ್ತು ಕರ್ತವ್ಯಗಳು ಎಂಬ ವಿಷಯದ ಕುರಿತು ಶ್ರೀ ಹೆಚ್.ಎಸ್ ನಾಗರಾಜಯ್ಯನವರು ಮಾನ್ಯ ಅಪರ ನಿಬಂಧಕರು (ನಿವೃತ್ತ) ಇವರು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ 160 ಪ್ರತಿನಿಧಿಗಳು ಭಾಗವಹಿಸಿದ್ದರು.



**ಚಿಕ್ಕೋಡಿ :** ದಿನಾಂಕ 23 ಆಗಸ್ಟ್ 2022 ರಂದು ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಸಭಾಭವನ, ಚಿಕ್ಕೋಡಿ ಇಲ್ಲಿ ಅಥಣಿ, ಕಾಗವಾಡ, ರಾಯಬಾಗ, ನಿಪ್ಪಾಣಿ ಮತ್ತು ಚಿಕ್ಕೋಡಿ ತಾಲೂಕಿನ ಎಲ್ಲ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಮತ್ತು ಸಿಬ್ಬಂದಿಗಳಿಗಾಗಿ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠ ಇವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಮಾನ್ಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆ ಇವರು ಪ್ರಾಸ್ತಾವಿಕ ನುಡಿಯನ್ನು ಮಾತನಾಡಿದರು.

ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿ ಮಾನ್ಯ ಹಿರಿಯ ಸಹಕಾರಿಗಳು ಇವರು ಆಡಳಿತ ಮಂಡಲಿ ಸಭೆ ಹಾಗೂ ಸಾಮಾನ್ಯ ಸಭೆ ಜರುಗಿಸುವ ವಿಧಾನಗಳ ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು. ಇನ್ನೊರ್ವ ಸಂಪನ್ಮೂಲ ವ್ಯಕ್ತಿಗಳಾದ ಹಾಗೂ ಸಂಯುಕ್ತ ಸಹಕಾರಿಯ ಸಿಬ್ಬಂದಿಯಾದ ಶ್ರೀ ಗಂಗಾರಾಮ ಕೋಳಾಪ್ಪೆ ಇವರು ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ಕುರಿತು ಉಪನ್ಯಾಸ ನೀಡಿದರು.

ಚಿಕ್ಕೋಡಿ ತಾಲೂಕಿನ ಜಿಲ್ಲಾ ಸಂಯೋಜಕರಾದ ಶ್ರೀ ಜವಾಹಾರ ಮುಗ್ಗನವರ ರವರು ಕಾರ್ಯಕ್ರಮ ನಡೆಸಿಕೊಟ್ಟರು, ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 143 ಪ್ರತಿನಿಧಿಗಳು ಉಪಸ್ಥಿತರಿದ್ದರು.



**ವಿಜಯಪುರ** : ದಿನಾಂಕ 24 ಆಗಸ್ಟ್ 2022 ರಂದು ವಿಜಯಪುರ ಜಿಲ್ಲೆಯ ಶ್ರೀ ಗುರುದತ್ತ ಮಂಗಲ ಕಾರ್ಯಾಲಯ, ಸ್ಟೇಷನ್ ರಸ್ತೆ, ವಿಜಯಪುರ ಇಲ್ಲಿ ವಿಜಯಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ಹಾಗೂ ಸಿಬ್ಬಂದಿಗಳಿಗಾಗಿ ವಿಷಯಾಧಾರಿತ ತರಬೇತಿಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ರಾಮನಗೌಡ ಬ. ಪಾಟೀಲ (ಯತ್ನಾಳ), ಇವರು ವಹಿಸಿದ್ದರು. ಉದ್ಘಾಟನೆಯನ್ನು ಶ್ರೀ ಎಸ್.ಜಿ.ಕುಂಬಾರ, ಮಾನ್ಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ವಿಜಯಪುರ ಇವರು ನೆರವೇರಿಸಿದರು.

ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ವಿ.ಜಿ.ಕುಲಕರ್ಣಿ ಇವರು ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿ ಕುರಿತು ಹಾಗೂ ಶ್ರೀ ಎ.ಎಸ್. ಚಂದಾವಲೆ ಮಾನ್ಯ ನಿವೃತ್ತ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಇವರು ಆಡಳಿತ ಮಂಡಳಿ ಸಭೆ ಹಾಗೂ ಸಾಮಾನ್ಯ ಸಭೆ ಜರುಗಿಸುವ ವಿಧಾನಗಳ ಕುರಿತು ಉಪನ್ಯಾಸ ನೀಡಿದರು.

ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಹಾಗೂ ಕಾರ್ಯಕ್ರಮದ ನಿರೂಪಣೆಯನ್ನು, ವಿಜಯಪುರ ಜಿಲ್ಲಾ ಸಂಯೋಜಕ ಶ್ರೀ ಪ್ರಭಯ್ಯಾ ಹಿರೇಮಠ ಇವರು ನಡೆಸಿಕೊಟ್ಟರು. ಶ್ರೀ ಶಿವಕಾಂತ ಎನ್ ಇವರು ಸ್ವಾಗತ ಹಾಗೂ ವಂದಿಸಿದರು. ಸಭೆಯಲ್ಲಿ ವಿಜಯಪುರ ಜಿಲ್ಲೆಯ 163 ಸೌಹಾರ್ದ ಸಹಕಾರಿಗಳಿಂದ 247 ಪ್ರತಿನಿಧಿಗಳು ಉಪಸ್ಥಿತರಿದ್ದರು.



**ಬೆಳಗಾವಿ** : ದಿನಾಂಕ 24 ಆಗಸ್ಟ್ 2022ರ ಬುಧವಾರದಂದು ಮಹಾಂತ ಭವನ ಮಹಾಂತೇಶ ನಗರ ಬೆಳಗಾವಿ, ಖಾನಾಪೂರ, ಚನ್ನಮ್ಮನ ಕಿತ್ತೂರು ಹಾಗೂ ಬೈಲಹೊಂಗಲ ತಾಲೂಕುಗಳ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳು ಹಾಗೂ ಸಿಬ್ಬಂದಿಗಳಿಗಾಗಿ ವಿಷಯಾಧಾರಿತ ತರಬೇತಿಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಭಾಸ್ಕರ್ ಹೆಗಡೆ ಕಾಗೇರಿ ಮಾನ್ಯ ಹಿರಿಯ ಸಹಕಾರಿಗಳು ಇವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಮಾನ್ಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಇವರುಗಳು ಉಪಸ್ಥಿತ–ರಿದ್ದರು.

ಸದರಿ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಭಾಸ್ಕರ್ ಹೆಗಡೆ ಕಾಗೇರಿ ಮಾನ್ಯ ಹಿರಿಯ ಸಹಕಾರಿಗಳು ಇವರು ಆಡಳಿತ ಮಂಡಲಿ ಸಭೆ ಹಾಗೂ ಸಾಮಾನ್ಯ ಸಭೆ ಜರುಗಿಸುವ ವಿಧಾನಗಳು ಹಾಗೂ ಶ್ರೀ ರಾಚಯ್ಯ ಹಿರೇಮಠ, ದಾವಾ ಪಂಚಾಯತ್ ನ್ಯಾಯಾಲಯ ಬೆಳಗಾವಿ ಪ್ರಾಂತದ ಸಿಬ್ಬಂದಿ ಇವರು ದಾವಾ ದಾಖಲಾತಿ ಹಾಗೂ ಸಾಲ ವಸೂಲಾತಿ ಕುರಿತು ಉಪನ್ಯಾಸವನ್ನು ನೀಡಿರುತ್ತಾರೆ.

ಜಿಲ್ಲಾ ಸಂಯೋಜಕರಾದ ಶ್ರೀ ಗಂಗಾರಾಮ ಕೋಳಾಪ್ಪೆ ಇವರು ಸ್ವಾಗತಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಮಲ್ಲಮ್ಮ ದೇಗಾಂವ, ವಂದನಾರ್ಪಣೆಯನ್ನು ಶ್ರೀಮತಿ ಪ್ರತಿಭಾ ಮಠ ಇವರು ಮಾಡಿದರು. ಕಾರ್ಯಕ್ರಮದಲ್ಲಿ ಸೌಹಾರ್ದ ಸಹಕಾರಿಗಳ ಒಟ್ಟು 110 ಪ್ರತಿನಿಧಿಗಳು ಉಪಸ್ಥಿತರಿದ್ದರು.



**ಬೆಳಗಾವಿ** : ದಿನಾಂಕ 25 ಆಗಸ್ಟ್ 2022ರ ಗುರುವಾರದಂದು ರೋಟರಿ ಸಂಸ್ಥೆಯ ಶ್ರೀಮತಿ ಮಂಗಲಾದೇವಿ ಗಂಗಾಧರ ತಾವಂಶಿ ಸಭಾಭವನ ಗೋಕಾಕ ಇಲ್ಲಿ ಗೋಕಾಕ, ಮೂಡಲಗಿ, ಯರಗಟ್ಟಿ, ಮುನವಳ್ಳಿ, ರಾಮದುರ್ಗ ಹಾಗೂ ಸವದತ್ತಿ ತಾಲೂಕುಗಳ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳು ಹಾಗೂ ಸಿಬ್ಬಂದಿಗಳಿಗಾಗಿ ವಿಷಯಾಧಾರಿತ ತರಬೇತಿಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಭಾಸ್ಕರ್ ಹೆಗಡೆ ಕಾಗೇರಿ ಮಾನ್ಯ ಹಿರಿಯ ಸಹಕಾರಿಗಳು ಇವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಇವರುಗಳು ಉಪಸ್ಥಿತರಿದ್ದರು.

ಸದರಿ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಭಾಸ್ಕರ್ ಹೆಗಡೆ ಕಾಗೇರಿ ಮಾನ್ಯ ಹಿರಿಯ ಸಹಕಾರಿಗಳು ಇವರು ಆಡಳಿತ ಮಂಡಲಿ ಸಭೆ ಹಾಗೂ ಸಾಮಾನ್ಯ ಸಭೆ ಜರುಗಿಸುವ ವಿಧಾನಗಳು ಹಾಗೂ ಶ್ರೀ ಗಂಗಾರಾಮ ಕೋಳಾಪ್ಪೆ, ವ್ಯವಸ್ಥಾಪಕರು ಇವರು ದಾವಾ ದಾಖಲಾತಿ ಹಾಗೂ ಸಾಲ ವಸೂಲಾತಿ ಕುರಿತು ಉಪನ್ಯಾಸವನ್ನು ನೀಡಿದರು.

ಜಿಲ್ಲಾ ಸಂಯೋಜಕರಾದ ಶ್ರೀ ಸುಜಯ ಬೆಳವಿ ಇವರು ಕಾರ್ಯಕ್ರಮ ನಡೆಸಿಕೊಟ್ಟರು, ಕಾರ್ಯಕ್ರಮದಲ್ಲಿ ಸೌಹಾರ್ದ ಸಹಕಾರಿಗಳ ಒಟ್ಟು 186 ಪ್ರತಿನಿಧಿಗಳು ಉಪಸ್ಥಿತರಿದ್ದರು.



**ಬೆಳಗಾವಿ :** ದಿನಾಂಕ 26 ಆಗಸ್ಟ್ 2022ರ ಶುಕ್ರವಾರದಂದು ನೇಸರಗಿ ಗಾರ್ಡನ್ ಡಿಲಕ್ಸ ಸಂಕೇಶ್ವರ ಇಲ್ಲಿ ಹುಕ್ಕೇರಿ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳು ಹಾಗೂ ಸಿಬ್ಬಂದಿಗಳಿಗಾಗಿ ವಿಷಯಾಧಾರಿತ ತರಬೇತಿಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಭಾಸ್ಕರ್ ಹೆಗಡೆ ಕಾಗೆರಿ ಮಾನ್ಯ ಹಿರಿಯ ಸಹಕಾರಿಗಳು ಇವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಇವರು ಉಪಸ್ಥಿತರಿದ್ದರು.

ಸದರಿ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಭಾಸ್ಕರ್ ಹೆಗಡೆ ಕಾಗೇರಿ ಇವರು ಆಡಳಿತ ಮಂಡಲಿ ಸಭೆ ಹಾಗೂ ಸಾಮಾನ್ಯ ಸಭೆ ಜರುಗಿಸುವ ವಿಧಾನಗಳು ಹಾಗೂ ಶ್ರೀ ರಾಚಯ್ಯ ಹಿರೇಮಠ, ದಾವಾ ಪಂಚಾಯತ್ ನ್ಯಾಯಾಲಯ ಬೆಳಗಾವಿ ಪ್ರಾಂತದ ಸಿಬ್ಬಂದಿ ಇವರು ದಾವಾ ದಾಖಲಾತಿ ಹಾಗೂ ಸಾಲ ವಸೂಲಾತಿ ವಿಷಯದ ಕುರಿತು ಉಪನ್ಯಾಸವನ್ನು ನೀಡಿದರು.

ಕಾರ್ಯಕ್ರಮದಲ್ಲಿ ಬೆಳಗಾವಿ ಜಿಲ್ಲೆಯ ಜಿಲ್ಲಾ ಸಂಯೋಜಕರುಗಳಾದ ಶ್ರೀ ಜವಾಹಾರ ಮುಗ್ಗನವರವರು ಕಾರ್ಯಕ್ರಮದ ನಿರೂಪಣೆ ಹಾಗೂ ಶ್ರೀ ವೃಷಭನಾಥ ಪರಪ್ಪನವರ ಸ್ವಾಗತವನ್ನು ಮಾಡಿದರು. ಕಾರ್ಯಕ್ರಮದಲ್ಲಿ ಸೌಹಾರ್ದ ಸಹಕಾರಿಗಳ ಒಟ್ಟು 188 ಪ್ರತಿನಿಧಿಗಳು ಉಪಸ್ಥಿತರಿದ್ದರು.

---

**ಮೈಸೂರು :** ಮೈಸೂರು ಪ್ರಾಂತದ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ ಸೌಹಾರ್ದ ಸಹಕಾರಿಗಳ ಉಪವಿಧಿ ತಿದ್ದುಪಡಿಯ ಕುರಿತು ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ದಿನಾಂಕ: 29.08.2022 ಸೋಮವಾರ ಬೆಳಿಗ್ಗೆ 11:00 ಗಂಟೆಗೆ ವೀಡಿಯೋ ಕಾನ್ಫರೆನ್ಸ್ ಮೂಲಕ ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರರವರು ನೆರವೇರಿಸಿದರು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥರವರು ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು, ಶ್ರೀ ಶ್ರೀಕಾಂತ್ ಬರುವೆ, ಉಪಪ್ರಧಾನ ವ್ಯವಸ್ಥಾಪಕರು, ಇವರು ಸೌಹಾರ್ದ ಸಹಕಾರಿಗಳ ಉಪವಿಧಿ ತಿದ್ದುಪಡಿಯ ಕುರಿತು ಉಪನ್ಯಾಸ ನೀಡಿದರು. ಸದರಿ ತರಬೇತಿ ಕಾರ್ಯಕ್ರಮದಲ್ಲಿ 190 ಸೌಹಾರ್ದ ಸಹಕಾರಿಗಳಿಂದ 230 ಪ್ರತಿನಿಧಿಗಳು ಭಾಗವಹಿಸಿದ್ದರು.

---

## ಆಡಳಿತ ಪರಿಣಿತಿ ತರಬೇತಿ ಕಾರ್ಯಕ್ರಮ



**ಮೈಸೂರು ಮತ್ತು ಕೊಡಗು :** ಮೈಸೂರು ಮತ್ತು ಕೊಡಗು ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಮಾನ್ಯ ಅಧ್ಯಕ್ಷರು/ಉಪಾಧ್ಯಕ್ಷರು /ನಿರ್ದೇಶಕರಿಗಾಗಿ ಆಡಳಿತ ಪರಿಣಿತಿ ತರಬೇತಿ ಕಾರ್ಯಕ್ರಮವನ್ನು ದಿನಾಂಕ: 18.08.2022 ಗುರುವಾರ ಬೆಳಿಗ್ಗೆ 10:00 ಗಂಟೆಗೆ ಗ್ರೀನ್ ಹೆರಿಟೇಜ್ ಹೋಟೆಲ್ ಸಭಾಂಗಣ, ನಂ. 316/ಡಿ5, ದಿವಾನ್ಸ್ ರಸ್ತೆ, ಮೈಸೂರಿನಲ್ಲಿ ಆಯೋಜಿಸಲಾಗಿತ್ತು.

ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ವೇದಿಕೆಯ ಮೇಲೆ ಉಪಸ್ಥಿತರಿದ್ದ ಗಣ್ಯರೊಂದಿಗೆ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥರವರು, ಮಾನ್ಯ ನಿಕಟಪೂರ್ವ ನಿರ್ದೇಶಕರಾದ ಶ್ರೀ ಹೆಚ್ ವಿ ರಾಜೀವ್‌ರವರು, ಮಾನ್ಯ ಸಹಕಾರ ಸಂಘಗಳ ಉಪ ನಿಬಂಧಕರಾದ ಶ್ರೀ ಜಿ.ಆರ್. ವಿಜಯಕುಮಾರ್‌ರವರು ಉದ್ಘಾಟಿಸಿದ್ದರು. ಸದರಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ನಿವೃತ್ತ ಸಹಕಾರ ಸಂಘಗಳ ಅಪರ ನಿಬಂಧಕರಾದ ಶ್ರೀ ಹೆಚ್.ಎಸ್. ನಾಗರಾಜಯ್ಯ ರವರು, ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ಎಸ್.ಆರ್. ನಾರಾಯಣ ರಾವ್ ರವರು ಭಾಗವಹಿಸಿದ್ದರು. ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರರವರು ಮತ್ತು ಜಿಲ್ಲಾ ಸಂಯೋಜಕರಾದ ಶ್ರೀ ಸುರೇಶ ಆರ್ ಎಸ್ ರವರು ಉಪಸ್ಥಿತರಿದ್ದರು. ನಂತರ ಶ್ರೀ ಹೆಚ್.ಎಸ್. ನಾಗರಾಜಯ್ಯ, ನಿವೃತ್ತ ಸಹಕಾರ ಸಂಘಗಳ ಅಪರ ನಿಬಂಧಕರು ಇವರು ನಿರ್ದೇಶಕರ ಹಕ್ಕುಗಳು ಮತ್ತು ಕರ್ತವ್ಯಗಳು ಕುರಿತು ಉಪನ್ಯಾಸ ನೀಡಿದರು. ಹಾಗೂ ಶ್ರೀ ಕೆ. ಕೇಶವ ಡೋಂಗ್ರೆ, ಸನ್ನದು ಲೆಕ್ಕಪರಿಶೋಧಕರು ಇವರು ಲೆಕ್ಕಪರಿಶೋಧನಾ ವರದಿ ಸಿದ್ಧತೆಯಲ್ಲಿ ನಿರ್ದೇಶಕರ ಪಾತ್ರ ಕುರಿತು ಉಪನ್ಯಾಸ ನೀಡಿದರು. ಸದರಿ ಕಾರ್ಯಕ್ರಮದಲ್ಲಿ 58 ಸೌಹಾರ್ದ ಸಹಕಾರಿಗಳಿಂದ 85 ಪ್ರತಿನಿಧಿಗಳು ಭಾಗವಹಿಸಿದ್ದರು.

# ಸಹಕಾರ ಹಾಗೂ ಬ್ಯಾಂಕಿಂಗ್ ಮೆನೆಜ್‌ಮೆಂಟ್ ಡಿಪ್ಲೋಮಾ ಕೋರ್ಸ್‌ನ ನಾಲ್ಕನೇ ತಂಡದ ಪರೀಕ್ಷೆಯ ಫಲಿತಾಂಶ

# 4th Batch Diploma in Cooperation and Banking Management Examination Result

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ದಿನಾಂಕ 25 & 26ನೇ ಜೂನ್ 2022 ಮತ್ತು 03 ಜುಲೈ 2022 ರಂದು ಸಹಕಾರ ಹಾಗು ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸಿನ 4ನೇ ತಂಡದ ಪರೀಕ್ಷೆಯನ್ನು ನಡೆಸಲಾಗಿತ್ತು.

## ಕೇಂದ್ರವಾರು ಮೊದಲನೇ ಸ್ಥಾನ ಪಡೆದ ಅಭ್ಯರ್ಥಿಗಳು

| ಕೇಂದ್ರ | ಅಭ್ಯರ್ಥಿಯ ಹೆಸರು | ಪಡೆದ ಅಂಕಗಳು |
|---|---|---|
| ಬೆಂಗಳೂರು | ದಿವ್ಯ ಟಿ | 574 |
| ಶಿವಮೊಗ್ಗ | ಮಾಧವಿ ಎಸ್ | 555 |
| ಪುತ್ತೂರು | ಪ್ರವೀಣ ಎನ್ | 579 |
| ಕಾರವಾರ | ಶ್ರೀನಿವಾಸ ನಾಯಕ್ | 537 |
| ಚಿಕ್ಕೋಡಿ | ಅಶ್ವಿನಿ ಕಮ್ಮಾರ್ | 578 |
| ಮುಧೋಳ | ಭೌರಮ್ಮ ಹಂಗರಗಿ | 590 |
| ಹೊಸಪೇಟೆ | ಚನ್ನವೀರಗೌಡ ಎಂ | 542 |
| ಬಳ್ಳಾರಿ | ಸುಷ್ಮಾ ಬಿ ಕೆ | 556 |

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ವತಿಯಿಂದ ನಡೆಸಿದ ನಾಲ್ಕನೇ ತಂಡದ ಸಹಕಾರ ಹಾಗು ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸಿನ ಪರೀಕ್ಷೆಯ ಫಲಿತಾಂಶದ ವಿವರಗಳು.

## ಉನ್ನತ ಶ್ರೇಣಿ (Distinction)

| Roll No | Marks | Roll No | Marks | Roll No | Marks |
|---|---|---|---|---|---|
| B4-415 | 590 | B4-561 | 565 | B4-816 | 577 |
| B4-449 | 581 | B4-681 | 563 | B4-818 | 564 |
| B4-466 | 563 | B4-682 | 565 | B4-822 | 566 |
| B4-472 | 573 | B4-711 | 562 | B4-841 | 575 |
| B4-474 | 574 | B4-728 | 561 | B4-880 | 577 |
| B4-486 | 560 | B4-729 | 567 | B4-882 | 561 |
| B4-489 | 564 | B4-737 | 574 | B4-912 | 574 |
| B4-497 | 567 | B4-769 | 570 | B4-924 | 566 |
| B4-502 | 582 | B4-770 | 570 | B4-925 | 569 |
| B4-508 | 572 | B4-784 | 575 | B4-926 | 578 |
| B4-525 | 578 | B4-785 | 579 | | |

## –: ಪ್ರಥಮ ಶ್ರೇಣಿ :– (First Class)

| Roll No | Marks | Roll No | Marks | Roll No | Marks | Roll No | Marks | Roll No | Marks |
|---|---|---|---|---|---|---|---|---|---|
| B4-407 | 503 | B4-443 | 467 | B4-487 | 516 | B4-531 | 547 | B4-568 | 490 |
| B4-408 | 466 | B4-444 | 455 | B4-488 | 519 | B4-532 | 439 | B4-569 | 465 |
| B4-411 | 475 | B4-445 | 554 | B4-490 | 438 | B4-533 | 477 | B4-570 | 508 |
| B4-412 | 472 | B4-446 | 500 | B4-491 | 508 | B4-534 | 523 | B4-571 | 450 |
| B4-413 | 424 | B4-447 | 486 | B4-492 | 439 | B4-535 | 529 | B4-572 | 509 |
| B4-414 | 423 | B4-448 | 493 | B4-494 | 457 | B4-536 | 466 | B4-573 | 519 |
| B4-416 | 506 | B4-450 | 495 | B4-496 | 551 | B4-537 | 500 | B4-574 | 537 |
| B4-417 | 506 | B4-451 | 422 | B4-498 | 529 | B4-539 | 450 | B4-575 | 447 |
| B4-418 | 485 | B4-452 | 455 | B4-499 | 491 | B4-540 | 499 | B4-577 | 474 |
| B4-419 | 472 | B4-453 | 487 | B4-500 | 442 | B4-541 | 531 | B4-581 | 500 |
| B4-420 | 459 | B4-456 | 481 | B4-504 | 437 | B4-542 | 493 | B4-582 | 462 |
| B4-422 | 424 | B4-457 | 431 | B4-506 | 464 | B4-543 | 539 | B4-583 | 526 |
| B4-423 | 425 | B4-460 | 449 | B4-507 | 555 | B4-544 | 545 | B4-584 | 474 |
| B4-424 | 456 | B4-464 | 455 | B4-509 | 530 | B4-545 | 545 | B4-585 | 501 |
| B4-425 | 484 | B4-465 | 462 | B4-510 | 557 | B4-546 | 459 | B4-586 | 445 |
| B4-426 | 490 | B4-467 | 474 | B4-511 | 547 | B4-547 | 511 | B4-588 | 485 |
| B4-427 | 486 | B4-468 | 556 | B4-512 | 535 | B4-548 | 551 | B4-590 | 478 |
| B4-428 | 515 | B4-469 | 439 | B4-513 | 511 | B4-550 | 548 | B4-591 | 482 |
| B4-429 | 513 | B4-470 | 444 | B4-514 | 541 | B4-551 | 429 | B4-592 | 535 |
| B4-431 | 481 | B4-471 | 493 | B4-515 | 540 | B4-552 | 450 | B4-594 | 492 |
| B4-432 | 504 | B4-473 | 541 | B4-516 | 522 | B4-554 | 440 | B4-595 | 462 |
| B4-433 | 493 | B4-477 | 428 | B4-519 | 531 | B4-555 | 540 | B4-596 | 520 |
| B4-434 | 455 | B4-478 | 476 | B4-520 | 506 | B4-556 | 556 | B4-597 | 469 |
| B4-436 | 555 | B4-479 | 426 | B4-521 | 542 | B4-559 | 477 | B4-598 | 434 |
| B4-437 | 476 | B4-480 | 507 | B4-524 | 554 | B4-563 | 468 | B4-599 | 444 |
| B4-438 | 456 | B4-481 | 447 | B4-527 | 471 | B4-564 | 493 | B4-600 | 426 |
| B4-439 | 519 | B4-483 | 527 | B4-528 | 474 | B4-565 | 523 | B4-601 | 511 |
| B4-440 | 444 | B4-484 | 494 | B4-529 | 517 | B4-566 | 533 | B4-602 | 466 |
| B4-441 | 488 | B4-485 | 449 | B4-530 | 542 | B4-567 | 526 | B4-604 | 473 |

| Roll No | Marks | Roll No | Marks | Roll No | Marks | Roll No | Marks | Roll No | Marks |
|---|---|---|---|---|---|---|---|---|---|
| B4-605 | 431 | B4-646 | 513 | B4-700 | 471 | B4-738 | 506 | B4-768 | 469 |
| B4-606 | 475 | B4-647 | 494 | B4-702 | 529 | B4-739 | 464 | B4-771 | 510 |
| B4-607 | 556 | B4-651 | 536 | B4-703 | 552 | B4-740 | 452 | B4-772 | 507 |
| B4-608 | 468 | B4-653 | 512 | B4-704 | 503 | B4-741 | 482 | B4-773 | 495 |
| B4-610 | 443 | B4-654 | 422 | B4-705 | 554 | B4-742 | 502 | B4-774 | 523 |
| B4-611 | 503 | B4-655 | 530 | B4-706 | 544 | B4-743 | 512 | B4-775 | 492 |
| B4-612 | 469 | B4-656 | 442 | B4-707 | 506 | B4-744 | 536 | B4-776 | 542 |
| B4-613 | 452 | B4-658 | 495 | B4-709 | 491 | B4-745 | 518 | B4-777 | 524 |
| B4-615 | 421 | B4-660 | 454 | B4-710 | 526 | B4-746 | 463 | B4-778 | 555 |
| B4-616 | 468 | B4-661 | 439 | B4-712 | 527 | B4-747 | 535 | B4-779 | 487 |
| B4-617 | 482 | B4-662 | 537 | B4-713 | 507 | B4-748 | 502 | B4-780 | 508 |
| B4-618 | 486 | B4-663 | 487 | B4-715 | 513 | B4-749 | 486 | B4-781 | 524 |
| B4-619 | 540 | B4-664 | 428 | B4-716 | 521 | B4-750 | 524 | B4-783 | 533 |
| B4-620 | 493 | B4-665 | 480 | B4-717 | 491 | B4-751 | 531 | B4-786 | 496 |
| B4-621 | 450 | B4-666 | 422 | B4-718 | 546 | B4-752 | 471 | B4-787 | 534 |
| B4-626 | 473 | B4-667 | 528 | B4-719 | 532 | B4-753 | 451 | B4-788 | 547 |
| B4-627 | 520 | B4-668 | 537 | B4-720 | 522 | B4-754 | 496 | B4-789 | 430 |
| B4-628 | 430 | B4-669 | 446 | B4-721 | 514 | B4-755 | 467 | B4-790 | 530 |
| B4-629 | 503 | B4-673 | 532 | B4-722 | 515 | B4-756 | 459 | B4-791 | 513 |
| B4-630 | 531 | B4-675 | 541 | B4-723 | 540 | B4-757 | 520 | B4-792 | 505 |
| B4-632 | 498 | B4-683 | 484 | B4-724 | 558 | B4-758 | 507 | B4-793 | 530 |
| B4-633 | 452 | B4-684 | 456 | B4-725 | 491 | B4-759 | 505 | B4-794 | 527 |
| B4-634 | 447 | B4-690 | 465 | B4-726 | 491 | B4-760 | 484 | B4-795 | 550 |
| B4-635 | 497 | B4-691 | 493 | B4-727 | 510 | B4-761 | 496 | B4-796 | 520 |
| B4-636 | 469 | B4-692 | 544 | B4-730 | 507 | /B4-762 | 494 | B4-797 | 529 |
| B4-637 | 458 | B4-693 | 454 | B4-731 | 478 | /B4-763 | 461 | B4-798 | 537 |
| B4-638 | 454 | B4-694 | 513 | B4-732 | 486 | /B4-764 | 461 | B4-799 | 545 |
| B4-639 | 420 | B4-697 | 529 | B4-733 | 458 | B4-765 | 456 | B4-800 | 509 |
| B4-640 | 475 | B4-698 | 482 | B4-735 | 507 | B4-766 | 484 | B4-801 | 536 |
| B4-641 | 506 | B4-699 | 448 | B4-736 | 445 | B4-767 | 494 | B4-802 | 531 |

| Roll No | Marks | Roll No | Marks | Roll No | Marks | Roll No | Marks | Roll No | Marks |
|---|---|---|---|---|---|---|---|---|---|
| B4-804 | 472 | B4-838 | 559 | B4-875 | 532 | B4-914 | 512 | B4-901 | 459 |
| B4-806 | 499 | B4-839 | 552 | B4-876 | 553 | B4-915 | 422 | B4-902 | 508 |
| B4-807 | 504 | B4-840 | 469 | B4-877 | 535 | B4-916 | 514 | B4-903 | 441 |
| B4-808 | 531 | B4-842 | 474 | B4-878 | 470 | B4-917 | 525 | B4-904 | 487 |
| B4-809 | 508 | B4-843 | 424 | B4-879 | 500 | B4-918 | 540 | B4-905 | 442 |
| B4-810 | 523 | /B4-844 | 504 | B4-881 | 449 | B4-919 | 476 | B4-906 | 426 |
| B4-811 | 447 | /B4-847 | 537 | B4-883 | 551 | B4-920 | 508 | B4-907 | 525 |
| B4-812 | 521 | B4-848 | 538 | B4-884 | 550 | B4-921 | 505 | B4-908 | 426 |
| B4-813 | 527 | B4-849 | 553 | B4-885 | 496 | B4-922 | 503 | B4-909 | 509 |
| B4-814 | 523 | B4-850 | 539 | B4-886 | 528 | B4-927 | 556 | B4-910 | 535 |
| B4-815 | 541 | B4-854 | 442 | B4-887 | 557 | B4-928 | 433 | B4-911 | 461 |
| B4-817 | 531 | B4-856 | 500 | B4-889 | 470 | B4-929 | 481 | B4-913 | 465 |
| B4-819 | 514 | B4-857 | 420 | B4-891 | 523 | B4-931 | 499 | B4-937 | 513 |
| B4-820 | 530 | B4-858 | 521 | B4-894 | 522 | B4-932 | 512 | B4-938 | 474 |
| B4-821 | 548 | B4-859 | 528 | /B4-895 | 519 | B4-933 | 482 | B4-939 | 469 |
| B4-823 | 514 | B4-860 | 474 | B4-898 | 445 | B4-934 | 425 | B3-634 | 493 |
| B4-824 | 553 | B4-861 | 536 | B4-899 | 519 | B4-935 | 449 | B4-832 | 504 |
| B4-825 | 494 | B4-862 | 502 | B4-900 | 496 | /B4-936 | 522 | B4-833 | 529 |
| B4-826 | 519 | B4-863 | 519 | B4-829 | 486 | B4-866 | 511 | B4-834 | 497 |
| B4-827 | 495 | B4-864 | 504 | B4-830 | 451 | B4-867 | 472 | B4-835 | 494 |
| B4-828 | 440 | B4-865 | 478 | B4-831 | 436 | B4-868 | 513 | B4-836 | 545 |
| B4-837 | 532 | B4-869 | 521 | B4-870 | 536 | B4-871 | 484 | B4-872 | 514 |
| B4-873 | 518 | B4-874 | 505 | B4-645 | 503 | B4-642 | 436 | | |

## –: ದ್ವಿತೀಯ ಶ್ರೇಣಿ :– (Second Class)

| Roll No | Marks | Roll No | Marks | Roll No | Marks | Roll No | Marks | Roll No | Marks |
|---|---|---|---|---|---|---|---|---|---|
| B4-409 | 359 | B4-475 | 399 | B4-557 | 417 | B4-458 | 394 | B4-517 | 419 |
| B4-410 | 393 | B4-476 | 405 | B4-578 | 388 | B4-459 | 388 | B4-518 | 410 |
| B4-435 | 393 | B4-482 | 416 | B4-580 | 382 | B4-461 | 387 | B4-522 | 368 |
| B4-454 | 406 | B4-495 | 384 | B4-589 | 389 | B4-462 | 383 | B4-523 | 393 |
| B4-455 | 416 | B4-503 | 397 | B4-593 | 386 | B4-463 | 412 | B4-526 | 387 |

| Roll No | Marks | Roll No | Marks | Roll No | Marks | Roll No | Marks | Roll No | Marks |
|---|---|---|---|---|---|---|---|---|---|
| B4-603 | 407 | B4-643 | 414 | B4-677 | 382 | B4-671 | 358 | B4-659 | 386 |
| B4-609 | 414 | B4-649 | 407 | B4-679 | 395 | B4-672 | 392 | B4-930 | 412 |
| B4-622 | 413 | B4-650 | 407 | B4-685 | 407 | B4-676 | 394 | B4-625 | 409 |
| B4-623 | 419 | B4-652 | 416 | B4-696 | 409 | B4-782 | 366 | B4-657 | 417 |
| B4-855 | 370 | B4-734 | 372 | | | | | | |

–: ಉತ್ತೀರ್ಣ ಶ್ರೇಣಿ :- (Pass)

| Admission Number | Marks |
|---|---|
| B4-644 | 343 |

## ಬಳ್ಳಾರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟದಿಂದ ಸನ್ಮಾನ ಕಾರ್ಯಕ್ರಮ



**ಬಳ್ಳಾರಿ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೂತನ ಆಡಳಿತ ಮಂಡಳಿಗೆ ಜುಲೈ 24ರಂದು ಚುನಾವಣೆ ನಡೆದು ಕಲುಬುರಗಿ ಪ್ರಾಂತದ 6 ಜನ ನಿರ್ದೇಶಕರು ಆಯ್ಕೆಯಾಗಿದ್ದು ಹಾಗೂ ವಿಜಯನಗರ ಜಿಲ್ಲೆಯಿಂದ ಪ್ರತಿನಿದಿಸಿದ್ದ ಶ್ರೀ ನಂಜನಗೌಡರವರು ಸಂಯುಕ್ತ ಸಹಕಾರಿಯ ನೂತನ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಆಯ್ಕೆಯಾದರು. ನೂತನ ಆಡಳಿತ ಮಂಡಳಿಯ ಕಲುಬುರಗಿ ಪ್ರಾಂತದ ನಿರ್ದೇಶಕರಿಗೆ ಹಾಗೂ ಮಾನ್ಯ ಅಧ್ಯಕ್ಷರಿಗೆ 08 ಆಗಸ್ಟ್ 2022ರ ಸೋಮವಾರದಂದ್ದು ಬಳ್ಳಾರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟದಿಂದ ಸನ್ಮಾನ ಕಾರ್ಯಕ್ರಮವನ್ನು ಬಳ್ಳಾರಿ ನಗರದ ರಾಯಲ್ ಪೋರ್ಟ್ ಹೋಟೇಲ್‌ನಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಪ್ರಸ್ತಾವಿಕ ನುಡಿಯನ್ನು ಬಳ್ಳಾರಿ ಜಿಲ್ಲೆಯ ನಿರ್ದೇಶಕರಾದ ಶ್ರೀ ಹನುಮಂತಯ್ಯಶೆಟ್ಟಿರವರು ನಡೆಸಿದರು ಸಂಯುಕ್ತ ಸಹಕಾರಿಯ ಕಾರ್ಯನಿರ್ವಾಹಣೆ ಹಾಗೂ ತರಬೇತಿಗೆ ಹೆಚ್ಚಿನ ಆದ್ಯತೆಯನ್ನು ಕೊಡುತ್ತ ಗುಣಮಟ್ಟದ ಸಹಕಾರಿಯಾಗಿ ಮಾಡುವಲ್ಲಿ ನೂತನ ಆಡಳಿತ ಮಂಡಳಿ ಪ್ರಯತ್ನ ಮಾಡುವುದಾಗಿ ತಿಳಿಸಿದರು. ಕಾರ್ಯಕ್ರಮದ ಉದ್ಘಾಟನೆಯನ್ನು ವಿಕಾಸ್ ಸೌಹಾರ್ದ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ವಿಶ್ವನಾಥ ಚ ಹಿರೇಮಠರವರು ನೆರವೇರಿಸಿದರು. ಅವರು ಮಾತನಾಡುತ್ತಾ ಪ್ರಸ್ತುತ ಆಡಳಿತ ಮಂಡಳಿಗೆ ಅನೇಕ ಸವಾಲುಗಳು ಇದ್ದು ಸಮಸ್ಯೆಗಳನ್ನು ಬಗೆಹರಿಸುವ ಕೆಲಸದಲ್ಲಿ ಪಾಲ್ಗೊಳ್ಳುವುದರ ಜೊತೆಯಲ್ಲಿ ಎಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಮೇಲೆ ಸಂಯುಕ್ತ ಸಹಕರಿಯು ನಿಯಂತ್ರಣ ಮಾಡಬೇಕು ಹಾಗೂ ಅವಶ್ಯಕ ಸಂದರ್ಭದಲ್ಲಿ ಕಠಿಣ ಕ್ರಮವನ್ನು ತೆಗೆದುಕೊಳ್ಳುವುದರ ಮೂಲಕ ರಾಜ್ಯದಲ್ಲಿ ಉತ್ತಮ ಕಾರ್ಯನಿರ್ವಹಿಸಬೇಕೆಂದು ತಿಳಿಸಿದರು.

ನೂತನ ಆಡಳಿತ ಮಂಡಳಿಯ ಅಧ್ಯಕ್ಷರಾದ ಶ್ರೀ ನಂಜನಗೌಡ, ನಿರ್ದೇಶಕರುಗಳಾದ ಶ್ರೀ ತಿಮ್ಮಯ್ಯಶೆಟ್ಟಿ, ಶ್ರೀ ಶ್ರೀಧರ್, ಶ್ರೀ ಶೈಲಜಾ ತಪಲಿ, ಶ್ರೀ ಹನುಮಂತಯ್ಯಶೆಟ್ಟಿ ಹಾಗೂ ವಿಕಾಸ್ ಬ್ಯಾಂಕ್‌ನ ಅಧ್ಯಕ್ಷರಾದ ಶ್ರೀ ವಿಶ್ವನಾಥ ಚ ಹಿರೇಮಠರವರಿಗೆ ಬಳ್ಳಾರಿ ಜಿಲ್ಲೆಯ ಎಲ್ಲಾ ಸೌಹಾರ್ದ ಸಹಕಾರಿಗಳ ಪರವಾಗಿ ಸನ್ಮಾನಿಸಲಾಯಿತು, ಕಾರ್ಯಕ್ರಮದ ಅಧ್ಯಕ್ಷತೆ ಹಾಗೂ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ನಂಜನಗೌಡರವರು ಮಾತನಾಡುತ್ತಾ ಸಂಯುಕ್ತ ಸಹಕಾರಿಯ ಸಿಬ್ಬಂದಿಗಳು ಹಾಗೂ ಆಡಳಿತ ಮಂಡಳಿ ಶಾಸನಾತ್ಮಕ ಕರ್ತವ್ಯಗಳನ್ನು ನಿರ್ವಹಿಸದ ಸಹಕಾರಿಗಳ ಮೇಲೆ ಕ್ರಮ ಕೈಗೊಳ್ಳುವುದಲ್ಲದೇ, ನೂತನ ತರಬೇತಿಯ ಮೂಲಕ ಸಹಕಾರಿಗಳ ಬೆಳವಣಿಗೆಗೆ ಪ್ರಯತ್ನ ಮಾಡಲಾಗುವುದು ಹಿಂದಿನ ಆಡಳಿತ ಮಂಡಳಿ ಮೂರು ಪ್ರಾಂತಗಳಲ್ಲಿ ನೂತನ ಕಟ್ಟಡಗಳನ್ನು ನಿರ್ಮಿಸಿದ್ದು ಮೈಸೂರು ಪ್ರಾಂತದಲ್ಲಿ ನೂತನ ಕಟ್ಟಡವನ್ನು ಮುಂದಿನ ದಿನಗಳಲ್ಲಿ ಕಟ್ಟಲಾಗುವುದು ಇವತ್ತು ಮಾಡಿರುವ ಸನ್ಮಾನ ನಮ್ಮ ಜವಾಬ್ದಾರಿಯನ್ನು ಹೆಚ್ಚಿಸಿದ್ದು ತಾವು ಕೇಳುವ ಕಾರ್ಯಗಳನ್ನು ಹಾಗೂ ಸಂಯುಕ್ತ ಸಹಕಾರಿಯ ಬೆಳವಣಿಗೆಯಲ್ಲಿ ಪೂರಕ ಕೆಲಸವನ್ನು ಮಾಡುವುದಾಗಿ ತಿಳಿಸಿದರು.

ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಮೃತ್ಯುಂಜಯ ಸ್ವಾಮಿ, ವಕೀಲರು ನಡೆಸಿದರು ನವೀನ್ ಸ್ವಾಗತಿಸಿದರು, ಶ್ರೀ ಸತ್ಯನಾರಾಯಣ ರಾವ್ ಅಧ್ಯಕ್ಷರು ಮೇಘ ಸೌಹಾರ್ದ ಸಹಕಾರಿ ವಂದಿಸಿದರು ಕಾರ್ಯಕ್ರಮದಲ್ಲಿ ಕೊಪ್ಪಳ ಜಿಲ್ಲಾ ಒಕ್ಕೂಟದ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಪತ್ತಾರ್, ಪ್ರಾಂತೀಯ ಅಧಿಕಾ–ರಿಯಾದ ಶ್ರೀ ರಾಜಶೇಖರ ಹೂಗಾರ, ಕಾರ್ಯಕ್ರಮದ ಉಸ್ತುವಾರಿಗಳಾದ ಸುಷ್ಮಾ ಸೌಹಾರ್ದ ಅಧ್ಯಕ್ಷರಾದ ಶ್ರೀ ಸುರೇಂದ್ರ, ವಿ.ಎಸ್.ಆರ್ ಸೌಹಾರ್ದ ಅಧ್ಯಕ್ಷರಾದ ಶ್ರೀ ರಾಘವೇಂದ್ರ, ಮೇಘ ಸೌಹಾರ್ದ ನಿರ್ದೇಶಕರಾದ ಶ್ರೀ ಲಕ್ಷ್ಮೀದೇವಿ, ಸಿರುಗುಪ್ಪ ಸೌಹಾರ್ದ ಅಧ್ಯಕ್ಷರಾದ ಶ್ರೀ ಚೌದ್ರಿ, ಭೂಪಾಲ್ ಸೌಹಾರ್ದ ಸಿಇಓ ಶ್ರೀ ಬಸವರಾಜ್ ಬಳ್ಳಾರಿ ಜಿಲ್ಲೆಯ ಎಲ್ಲಾ ತಾಲೂಕುಗಳ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿಗಳು ಭಾಗವಹಿಸಿದ್ದರು.

## ನೂತನ ರಾಷ್ಟ್ರೀಯ ಸಹಕಾರ ನೀತಿ ಕರಡು ಸಮಿತಿ ರಚನೆ

ನೂತನ ರಾಷ್ಟ್ರೀಯ ಸಹಕಾರ ನೀತಿ ಸಮಿತಿ ಸದಸ್ಯರಾಗಿ ರಾಜ್ಯದ ಡಾ. ವೈ. ಯಶವಂತ ಡೋಂಗ್ರೆ, ಉಪಕುಲಪತಿ, ಚಾಣಕ್ಯ ವಿಶ್ವವಿದ್ಯಾಲಯ, ಬೆಂಗಳೂರು, ಕರ್ನಾಟಕ, ಅಧ್ಯಕ್ಷರು, ತೋಟಗಾರಿಕಾ ಉತ್ಪಾದಕರ ಸಹಕಾರ ಮಾರುಕಟ್ಟೆ ಮತ್ತು ಸಂಸ್ಕರಣಾ ಸೊಸೈಟಿ (HOPCOMS), ಕರ್ನಾಟಕ, ಪ್ರಧಾನ ಕಾರ್ಯದರ್ಶಿ, ಐ.ಎ.ಎಸ್, ಸಹಕಾರ ಇಲಾಖೆ, ಕರ್ನಾಟಕ ಸರ್ಕಾರ ಇವರು ಆಯ್ಕೆಯಾಗಿರುತ್ತಾರೆ. ಇವರಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಪರವಾಗಿ ಹಾಗೂ ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಹಾರ್ದಿಕ ಅಭಿನಂದನೆಗಳು. ಸದರಿ ಸುತ್ತೋಲೆಯನ್ನು ಸಂಯುಕ್ತ ಸಹಕಾರಿಯ ವೆಬ್‌ಸೈಟ್ www.souharda.coop ನಲ್ಲಿ ಲಭ್ಯವಿರುತ್ತದೆ.

## ನೂತನ ರಾಷ್ಟ್ರೀಯ ಸಹಕಾರಿ ನೀತಿ ರಚಿಸಲು ಸಂವಿಧಾನ ರಾಷ್ಟ್ರೀಯ ಮಟ್ಟದ ಸಮಿತಿ ಸ್ಥಾಪನೆ ಕುರಿತು - ಕೇಂದ್ರದ ಸುತ್ತೋಲೆ

S-11016/14/2021-CPC (PT - 1) (115688)
Government of India
Ministry of Cooperation
Atal Akshay Urja Bhawan, New Delhi

Dated: 2nd September, 2022

**OFFICE ORDER**

**Subject: Constitution of a National Level Committee for drafting the new National Cooperation Policy Document – reg.**

A National level Committee under the Chairmanship of Sh. Suresh Prabhakar Prabhu, comprising experts of the cooperative sector; representatives of National / State / District & Primary Cooperative Societies; Secretaries (Cooperation) & Registrars of Cooperative Societies of States / UTs; and Officers from Central Ministries / Departments, is hereby constituted to draft the new National Cooperation Policy Document. The list of members is enclosed at **Annexure**. Ministry of Cooperation will be represented by Additional Secretary (Cooperation).

2. The Committee shall be responsible for drafting the new National Cooperation Policy Document in line with the co-operative principles to provide an enabling framework to realise the vision of 'Sahakar se Samriddhi', strengthen the cooperative movement in the country and promote cooperative-based economic development model. The committee shall submit the final draft within 3 months from the date of its first meeting.

3. VAMNICOM, Pune shall render necessary secretarial assistance, logistical and technical support to the Committee.

4. This issues with the approval of competent authority.

Encl: As above

2.9.2022

(Sucheta Sharma)
Deputy Director (Cooperation)

# ಸಹಕಾರ ಸಂಘಗಳ/ಬ್ಯಾಂಕುಗಳ ಹಾಗೂ ಸೌಹಾರ್ದ ಸಹಕಾರಿಗಳ 2021-22ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಭೌತಿಕವಾಗಿ/ virtual meeting ಮೂಲಕ ನಡೆಸುವ ಕುರಿತು ಸರ್ಕಾರದ ಆದೇಶ

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:-** ಸಹಕಾರ ಸಂಘಗಳ/ಬ್ಯಾಂಕುಗಳ ಹಾಗೂ ಸೌಹಾರ್ದ ಸಹಕಾರಿಗಳ 2021-22ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಭೌತಿಕವಾಗಿ/ Virtual Meeting ಮೂಲಕ ನಡೆಸಲು ಅನುಮತಿ ನೀಡುವ ಕುರಿತು.

**ಓದಲಾಗಿದೆ:-** ಸಹಕಾರ ಸಂಘಗಳ ನಿಬಂಧಕರ ಪತ್ರ ಸಂಖ್ಯೆ: ಯುಬಿಸಿ-2/19/ವಾರ್ಷಿಕ ಮಹಾಸಭೆ/2022-23 ದಿನಾಂಕ: 19.08.2022.

*****

**ಪ್ರಸ್ತಾವನೆ:**

ಮೇಲೆ ಓದಲಾದ ಪ್ರಸ್ತಾವನೆಯಲ್ಲಿ, ಕೋವಿಡ್ -19ರ ಸಾಂಕ್ರಾಮಿಕ ರೋಗವು ಹರಡುತ್ತಿರುವ ಕಾರಣ ಹಾಗೂ ಹಲವಾರು ಸಹಕಾರ ಸಂಘಗಳ/ಬ್ಯಾಂಕುಗಳ ಹಾಗೂ ಸೌಹಾರ್ದ ಸಹಕಾರಿಗಳಲ್ಲಿ ಅನೇಕ ಸದಸ್ಯರು ಹಿರಿಯ ನಾಗರೀಕರಾಗಿದ್ದು, ಇವರುಗಳ ಆರೋಗ್ಯದ ಹಿತದೃಷ್ಟಿಯಿಂದ 2021-22ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು Virtual Meeting ಮೂಲಕ ನಡೆಸಲು ಅನುಮತಿ ನೀಡುವ ಸಂಬಂಧ ಹಲವು ಸಹಕಾರ ಸಂಘಗಳಿಂದ ಮನವಿ / ಕೋರಿಕೆಗಳು ಸ್ವೀಕೃತವಾಗಿರುವುದರಿಂದ ಸಹಕಾರ ಸಂಘ / ಬ್ಯಾಂಕುಗಳ ಹಾಗೂ ಸೌಹಾರ್ದ ಸಹಕಾರಿಗಳ 2021-22ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಗಳನ್ನು Virtual Meeting ಮೂಲಕ ನಡೆಸಲು ಅನುಮತಿ ನೀಡುವ ಕುರಿತು ನಿಬಂಧಕರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮುಂದುವರೆದು, 2021-22ನೇ ಸಾಲಿನ ವಾರ್ಷಿಕ ಮಹಾಸಭೆಗಳನ್ನು Virtual Meeting ಮೂಲಕ ನಡೆಸಲು ಅನುಮತಿ ನೀಡುವ ಸಂಬಂಧ ಸರ್ಕಾರಕ್ಕೂ ಸಹ ಗಣ್ಯ ವ್ಯಕ್ತಿಗಳಿಂದ ಹಾಗೂ ಸಹಕಾರಿಗಳಿಂದ ಮನವಿಗಳು ಸ್ವೀಕೃತವಾಗಿರುತ್ತವೆ.

ಪರಿಶೀಲಿಸಲಾಗಿ ಸಹಕಾರ ಸಂಘ/ ಬ್ಯಾಂಕುಗಳು ಹಾಗೂ ಸೌಹಾರ್ದ ಸಹಕಾರಿಗಳಲ್ಲಿ ಅನೇಕ ಹಿರಿಯ ನಾಗರೀಕರಿದ್ದು, ಇವರುಗಳ ಆರೋಗ್ಯದ ಹಿತದೃಷ್ಟಿಯಿಂದ ಹಾಗೂ ರಾಜ್ಯದಲ್ಲಿ ಕೋವಿಡ್-19 ಪ್ರಕರಣಗಳು ಪ್ರಸ್ತುತ ಏರಿಕೆಯಾಗುತ್ತಿರುವುದರಿಂದ ಮುನ್ನೆಚ್ಚರಿಕೆ ವಹಿಸುವುದು ಸೂಕ್ತವೆಂದು ಹಾಗೂ Virtual Meeting ನಲ್ಲಿ ಹೆಚ್ಚಿನ ಸದಸ್ಯರು ಭಾಗವಹಿಸಲು ಅವಕಾಶವಾಗುವುದನ್ನು ಮನಗಂಡು ಈ ಕೆಳಕಂಡಂತೆ ಆದೇಶಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಇ 69 ಸಿಎಲ್ಎಮ್ 2022 (ಇ),**
**ಬೆಂಗಳೂರು, ದಿನಾಂಕ: 25.08.2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 121ರಡಿ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 70ರಡಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರದನ್ವಯ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಒಂದು ಸಾವಿರಕ್ಕಿಂತ ಕಡಿಮೆ ಸದಸ್ಯರನ್ನು ಹೊಂದಿರುವ ಸಹಕಾರ ಸಂಘಗಳು/ಬ್ಯಾಂಕುಗಳು ಹಾಗೂ ಸೌಹಾರ್ದ ಸಹಕಾರಿಗಳು 2021-22ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು**ಕಡ್ಡಾಯವಾಗಿ ಭೌತಿಕ ಹಾಜರಾತಿಯೊಂದಿಗೆ ನಡೆಸಲು ಸೂಚಿಸಿದೆ.**

ಮುಂದುವರೆದು, ಒಂದು ಸಾವಿರಕ್ಕಿಂತ ಹೆಚ್ಚಿನ ಸದಸ್ಯರನ್ನು ಹೊಂದಿರುವ ಸಹಕಾರ ಸಂಘಗಳು/ ಬ್ಯಾಂಕುಗಳು ಹಾಗೂ ಸೌಹಾರ್ದ ಸಹಕಾರಿಗಳು ಸರ್ವ ಸದಸ್ಯರ ವಾರ್ಷಿಕ ಮಹಾ ಸಭೆಯನ್ನು ಭೌತಿಕವಾಗಿ ನಡೆಸಲು ಸಾಧ್ಯವಾಗದಿದ್ದ ಪಕ್ಷದಲ್ಲಿ **Virtual Meeting ವಿಧಾನವನ್ನು ಅನುಸರಿಸಿ ಈ ಕೆಳಕಂಡ ನಿಬಂಧನೆಗೊಳಪಟ್ಟು ನಡೆಸಲು ಅನುಮತಿ ನೀಡಿ ಆದೇಶಿಸಿದೆ.**

- ಸರ್ವ ಸದಸ್ಯರ ಸಭೆ ನಡೆಯುವ ದಿನಾಂಕ ಮತ್ತು ವೇಳೆಯನ್ನು ದಿನಪತ್ರಿಕೆಯಲ್ಲಿ ಪ್ರಕಟಿಸುವುದು.

- ಸಭೆಯ ನೋಟೀಸು ಹಾಗೂ ಇನ್ನಿತರೆ ದಾಖಲಾತಿಗಳನ್ನು ಸಂಘದ ವೆಬ್‌ಸೈಟ್ ಮೂಲಕ ಪ್ರಚುರಗೊಳಿಸುವುದು ಹಾಗೂ ಹಾಲಿ ಅನುಸರಿಸುತ್ತಿರುವ ಪದ್ಧತಿಯಂತೆ ನೋಟೀಸುಗಳನ್ನು ಅಂಚೆಯ ಮೂಲಕ ರವಾನಿಸಲು ಸಹ ಕ್ರಮವಿಡತಕ್ಕದ್ದು.
- ಇಂತಹ ಸಭೆಯ ನಡವಳಿಗಳನ್ನು ಅಧಿಕೃತವಾಗಿ ರೆಕಾರ್ಡ್ ಮಾಡಿ ದಾಖಲಿಸುವ ತಂತ್ರಜ್ಞಾನ ಅಳವಡಿಸಿಕೊಳ್ಳತಕ್ಕದ್ದು.
- ಸರ್ವ ಸದಸ್ಯರ ಸಭೆ ನಡೆಸುವ ಸ್ಥಳದಲ್ಲಿ ಕೋವಿಡ್-19ರ ನಿಯಮಾವಳಿಗಳಿಗೆ ಒಳಪಟ್ಟು ಹಾಜರಾತಿಯನ್ನು ನಿರ್ವಹಿಸಿ ಸಹಕಾರ ಸಂಘಗಳ/ಸೌಹಾರ್ದ ಸಹಕಾರಿಗಳ ಅಧಿನಿಯಮಗಳನ್ವಯ ನಮೂದಿಸಿರುವ ಅಂಶಗಳನ್ನು ಕಾರ್ಯಸೂಚಿಯಲ್ಲಿ ಅಳವಡಿಸಿಕೊಂಡು ಹಾಲಿ ಪದ್ಧತಿಯಂತೆ ನಡೆಸಲು ಕ್ರಮವಹಿಸತಕ್ಕದ್ದು.
- ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ/ಹೊರಡಿಸಿರುವ ಕೋವಿಡ್-19 ಮಾರ್ಗಸೂಚಿಗಳನ್ನು ಮತ್ತು ಆದೇಶಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

25/8/22

**(ಎ. ಸಿ. ದಿವಾಕರ್)**
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ,
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

## ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ, ಉಪಾಧ್ಯಕ್ಷರಾದ ಶ್ರೀ ಎ. ಆರ್ ಪ್ರಸನ್ನಕುಮಾರ ಹಾಗೂ ನಿರ್ದೇಶಕರುಗಳು ವಿವಿಧ ಸೌಹಾರ್ದ ಸಹಕಾರಿಗಳಿಗೆ ಭೇಟಿ ನೀಡಿ ಸಮಾಲೋಚನೆ ಹಾಗೂ ಅವರಿಂದ ಅಭಿನಂದನೆ ಸ್ವೀಕರಿಸಿದರು.



**ದಾವಣಗೆರೆ :** ದಿನಾಂಕ 20.08.2022 ರಂದು ದಿ ವೆಜಿಟೆವಲ್ ಪ್ಲಾಂಟ್ ಸೌಹಾರ್ದ ಸಹಕಾರಿ ನಿ., ದಾವಣಗೆರೆ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ನಂಜನಗೌಡ ರವರು, ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ್ ರವರು, ಬೆಂಗಳೂರು ನಗರ ಜಿಲ್ಲೆಯ ನಿರ್ದೇಶಕರಾದ ಶ್ರೀ ಬಿ.ಎಸ್ ಗುಂಡೂರಾವ್ ರವರು ಹಾಗೂ ದಾವಣಗೆರೆ ಜಿಲ್ಲೆಯ ನಿರ್ದೇಶಕರಾದ ಶ್ರೀ ಎಂ.ಆರ್ ಪ್ರಭುದೇವ್ ರವರು ಭೇಟಿ ನೀಡಿ ಸಹಕಾರಿಯ ಅಭಿವೃದ್ಧಿಯ ದೃಷ್ಟಿಯಿಂದ ಸಲಹೆಗಳನ್ನು ನೀಡಿದರು. ಬಳಿಕ ಶ್ರೀಯುತರುಗಳಿಗೆ ಸಹಕಾರಿಯ ವತಿಯಿಂದ ಸನ್ಮಾನಿಸಲಾಯಿತು.



**ಗದಗ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯಕ್ತ ಸಹಕಾರಿ ನಿ., ಬೆಂಗಳೂರು ಇದರ ನೂತನವಾಗಿ ಆಯ್ಕೆಗೊಂಡ ಗದಗ ಜಿಲ್ಲೆಯ ನಿರ್ದೇಶಕರಾದ ಶ್ರೀ ನಾಗರಾಜ ಆರ್ ದೇಶಪಾಂಡೆ ಇವರಿಗೆ ಭಾಗ್ಯಲಕ್ಷ್ಮೀ ವಿವಿದೋದ್ದೇಶಗಳ ಸೌಹಾರ್ದ ಪತ್ತಿನ ಸಹಕಾರಿ ನಿ ಗದಗ ಇದರ ಅಧ್ಯಕ್ಷರು ಕೆ ಎಸ್ ಹೊಸಮಠ ಹಾಗೂ ನೆರವು ಸೌಹಾರ್ದ ಪತ್ತಿನ ಸಹಕಾರಿ ನಿ., ಗದಗ ಇವರಿಂದ ಸನ್ಮಾನಿಸಲಾಯಿತು.



**ಶಿವಮೊಗ್ಗ :** ಶ್ರೀ ಮಹಾದೇಶ್ವರ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಇಂದಿರಾ ನಗರ, ಮತ್ತೂರು ಅಂಚೆ, ಶಿವಮೊಗ್ಗ ಇದರ ಸಾಮಾನ್ಯ ಸಭೆಯು ದಿನಾಂಕ 6-8-2022 ರಂದು ಜರುಗಿತು. ಈ ಸಾಮಾನ್ಯ ಸಭೆಯಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಅಯ್ಯಪ್ಪ ಆರ್ ರವರು ಮತ್ತು ಆಡಳಿತ ಮಂಡಳಿ ಸದಸ್ಯರು, ಮುಖ್ಯಕಾರ್ಯನಿರ್ವಾಹಕರು ಸೇರಿ ಸಂಯುಕ್ತ ಸಹಕಾರಿಯ ನೂತನ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡ ರವರಿಗೆ ಸನ್ಮಾನ ಮಾಡಿ ಅಭಿನಂದನೆಗಳನ್ನು ಸಲ್ಲಿಸಿದರು.

ಈ ಸಮಯದಲ್ಲಿ ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇದರ ನೂತನ ಉಪಾಧ್ಯಕ್ಷರಾದ ಶ್ರೀ ಎ ಆರ್ ಪ್ರಸನ್ನಕುಮಾರ್ ರವರು ಉಪಸ್ಥಿತರಿದ್ದರು.



**ಶಿವಮೊಗ್ಗ :** ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕಿನ ಸೌಹಾರ್ದ ಸಹಕಾರಿ ಸಂಘಗಳ ಪರವಾಗಿ ದಿನಾಂಕ 22-8-2022 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ನೂತನವಾಗಿ ಉಪಾಧ್ಯಕ್ಷರಾಗಿ ಆಯ್ಕೆಯಾದ ಶ್ರೀ ಎ ಆರ್ ಪ್ರಸನ್ನಕುಮಾರ್ ರವರಿಗೆ ಅಭಿನಂದನೆಗಳನ್ನು ಸಲ್ಲಿಸಿದರು.

ಈ ಸಮಯದಲ್ಲಿ ಹೊಸನಗರ ತಾಲೂಕಿನ 8 ಸೌಹಾರ್ದ ಸಹಕಾರಿಗಳಿಂದ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು, ಮತ್ತು ಸಿಬ್ಬಂದಿಗಳು ಸೇರಿದಂತೆ 26 ಜನರು ಭಾಗವಹಿಸಿದ್ದರು. ಹೊಸನಗರ ತಾಲೂಕಿನ ಸೌಹಾರ್ದ ಸಹಕಾರಿಗಳಿಂದ ಸಂಯುಕ್ತ ಸಹಕಾರಿಯ ನೂತನ ಉಪಾಧ್ಯಕ್ಷರಾದ ಎ ಆರ್ ಪ್ರಸನ್ನಕುಮಾರ್ ರವರಿಗೆ ನೆನಪಿನ ಕಾಣಿಕೆ ನೀಡಿ, ಸನ್ಮಾನ ಮಾಡಿ ಅಭಿನಂದನೆಗಳನ್ನು ಸಲ್ಲಿಸಿದರು.

ಕೊಡಚಾದ್ರಿ ಅಡಿಕೆ ಸೌಹಾರ್ದದ ಅಧ್ಯಕ್ಷರಾದ ಶ್ರೀ ರಾಘವೇಂದ್ರ ರವರು, ಸುಮೇಧಾ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಪ್ರದೀಪ್ ರವರು, ತುಂಗಾ ಅಡಿಕೆ ಸೌಹಾರ್ದ ದ ಅಧ್ಯಕ್ಷರಾದ ಶ್ರೀ ವಿನಯ್ ಕುಮಾರ್, ಮಲೆನಾಡು ನಾರಾಯಣ ಗುರು ಸೌಹಾರ್ದ ದ ಅಧ್ಯಕ್ಷರಾದ ಶ್ರೀ ಮುರಳಿಯವರು, ಸಿರಿ ಸೌಹಾರ್ದ ದ ಅಧ್ಯಕ್ಷರಾದ ಶ್ರೀ ಸತೀಶ್ ರವರು, ಶಾರದ ಸೌಹಾರ್ದ ದ ಉಪಾಧ್ಯಕ್ಷರಾದ ಶ್ರೀ ರಮಾಕಾಂತ್ ರವರು ಅಭಿನಂದನಾ ನುಡಿಗಳನ್ನು ತಿಳಿಸಿದರು.



**ಶಿವಮೊಗ್ಗ :** ದಿನಾಂಕ 10.08.2022 ರಂದು ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕಿನ ಗರ್ತಿಕೆರೆ ಗ್ರಾಮದ ಅಮೃತ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಇವರ ವತಿಯಿಂದ ಸಂಯುಕ್ತ ಸಹಕಾರಿಗೆ ನೂತನ ಉಪಾಧ್ಯಕ್ಷರಾಗಿ ಆಯ್ಕೆಯಾದ ಶ್ರಿ ಎ.ಆರ್. ಪ್ರಸನ್ನಕುಮಾರ್ ಇವರಿಗೆ ಅಭಿನಂದನೆಗಳನ್ನು ಸಲ್ಲಿಸಿದರು.



**ಶಿವಮೊಗ್ಗ :** ದಿನಾಂಕ 10-8-2022 ರಂದು ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಎಲ್ಲಾ ಸೌಹಾರ್ದ ಸಹಕಾರಿಗಳು ಸೇರಿ ಸಂಯುಕ್ತ ಸಹಕಾರಿಗೆ ನೂತನವಾಗಿ ಉಪಾಧ್ಯಕ್ಷರಾಗಿ ಆಯ್ಕೆಯಾದ ಶ್ರೀ ಎ ಆರ್ ಪ್ರಸನ್ನ ಕುಮಾರ್ ರವರಿಗೆ ಸನ್ಮಾನಿಸಿ ಅಭಿನಂದನೆಯನ್ನು ಸಲ್ಲಿಸಿದರು.



ದಿನಾಂಕ 25.08.2022 ರಂದು ಚಳ್ಳಕೆರೆ ನಗರದಲ್ಲಿರುವ ಚಿಂದನೂರು ವೈಶ್ಯ ಸೌಹಾರ್ದ ಪತ್ತಿನ ಸಹಕಾರಿ., ಇದರ 25ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಚಿತ್ರದುರ್ಗ ಜಿಲ್ಲಾ ನಿರ್ದೇಶಕರಾದ ಶ್ರೀ ರಘುರಾಮರೆಡ್ಡಿ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಸಹಕಾರಿಯಲ್ಲಿ ಸದಸ್ಯರ ಕರ್ತವ್ಯ ಮತ್ತು ಜವಾಬ್ದಾರಿಗಳ ಕುರಿತು ಮಾಹಿತಿ ನೀಡಿದರು. ಇದೇ ಸಂದರ್ಭದಲ್ಲಿ ಮಾನ್ಯ ನಿರ್ದೇಶಕರನ್ನು ಸದರಿ ಸಹಕಾರಿಯ ಆಡಳಿತ ಮಂಡಲಿ ವತಿಯಿಂದ ಸನ್ಮಾನಿಸಲಾಯಿತು.



**ಕೊಪ್ಪಳ :** ಶ್ರೀ ಸೌಭಾಗ್ಯಲಕ್ಷ್ಮೀ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಕೊಪ್ಪಳ ಸಹಕಾರಿಗೆ ದಿನಾಂಕ 25.08.2022 ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ.ನಂಜನಗೌಡ,ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್.ಪ್ರಸನ್ನಕುಮಾರ, ಮಾನ್ಯ ನಿರ್ದೇಶಕರಾದ ಶ್ರೀ ಜಿ.ಶ್ರೀಧರ ರವರು ಭೇಟಿ ನೀಡಿ ಸಹಕಾರಿಯ ಶಾಖೆಗಳು ಮತ್ತು ಅದರ ಅಭಿವೃದ್ದಿ ಕುರಿತು ಚರ್ಚಿಸಿ ಸೂಕ್ತ ಮಾರ್ಗದರ್ಶನವನ್ನು ನೀಡಿದರು.ಈ ಸಂದರ್ಭದಲ್ಲಿ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಪ್ರಾಣೇಶರಾವ ದೇಸಾಯಿ, ಮಾನ್ಯ ಉಪಾಧ್ಯಕ್ಷರು ಮತ್ತು ಆಡಳಿತ ಮಂಡಳಿಯ ಸದಸ್ಯರು, ಕೊಪ್ಪಳ ಜಿಲ್ಲಾ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ.ಬಿ.ಪತ್ತಾರ,ಆರ್.ಡಿ.ಸಿ.ಸಿ ಬ್ಯಾಂಕಿನ ಮಾನ್ಯ ನಿರ್ದೇಶಕರಾದ ಶ್ರೀ ಶರಣಪ್ಪ ಹ್ಯಾಟಿ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್,ಒಕ್ಕೂಟದ ಮಾನ್ಯ ನಿರ್ದೇಶಕರಾದ ಶ್ರೀ ಕುಮಾರೆಪ್ಪ ಸಿಂಗನಾಳ,ಜಿಲ್ಲಾ ಸಂಯೋಜಕರಾದ ಶ್ರೀ ಪವನ.ಎಮ್. ಆರ್, ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಚಂದ್ರಶೇಖರ ಮುದ್ದಾಪೂರ ಮತ್ತು ಸಹಕಾರಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು. ಸಹಕಾ-ರಿಯ ವತಿಯಿಂದ ಗಣ್ಯರಿಗೆ ಸನ್ಮಾನಿಸಲಾಯಿತು.



**ಕೊಪ್ಪಳ :** ಗಂಗಾ ಯಮುನಾ ಪತ್ತಿನ ಸೌಹಾರ್ದ ಸಹಕಾರಿ ನಿ., ಕೊಪ್ಪಳ ಸಹಕಾರಿಯ ಕುಕನೂರು ಶಾಖೆಗೆ ದಿನಾಂಕ 25.08.2022 ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ.ನಂಜನಗೌಡ, ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್.ಪ್ರಸನ್ನಕುಮಾರ, ಮಾನ್ಯ ನಿರ್ದೇಶಕರಾದ ಶ್ರೀ ಜಿ.ಶ್ರೀಧರ ರವರು ಭೇಟಿ ನೀಡಿ ಸಹಕಾರಿಯ ಅಭಿವೃದ್ದಿ ಕುರಿತು ಚರ್ಚಿಸಿ ಸೂಕ್ತ ಮಾರ್ಗದರ್ಶನವನ್ನು ನೀಡಿದರು.ಈ ಸಂದರ್ಭದಲ್ಲಿ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಗವಿಸಿದ್ದಯ್ಯ ಲಿಂಗಬಸಯ್ಯನಮಠ, ಮಾನ್ಯ ಉಪಾಧ್ಯಕ್ಷರಾದ ಶ್ರೀ ರಮೇಶ ಕವಲೂರು ಮತ್ತು ಆಡಳಿತ ಮಂಡಳಿಯ ಸದಸ್ಯರು, ಕೊಪ್ಪಳ ಜಿಲ್ಲಾ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ.ಬಿ.ಪತ್ತಾರ,ಆರ್.ಡಿ.ಸಿ.ಸಿ ಬ್ಯಾಂಕಿನ ಮಾನ್ಯ ನಿರ್ದೇಶಕರಾದ ಶ್ರೀ ಶರಣಪ್ಪ ಹ್ಯಾಟಿ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್,ಒಕ್ಕೂಟದ ಮಾನ್ಯ ನಿರ್ದೇಶಕರಾದ ಶ್ರೀ ಕುಮಾರೆಪ್ಪ ಸಿಂಗನಾಳ,ಜಿಲ್ಲಾ ಸಂಯೋಜಕರಾದ ಶ್ರೀ ಪವನ.ಎಮ್.ಆರ್, ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಶಶಿಕುಮಾರ ಗಡ್ಡಿ ಮತ್ತು ಸಹಕಾರಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು. ಸಹಕಾರಿಯ ವತಿಯಿಂದ ಗಣ್ಯರನ್ನು ಸನ್ಮಾನಿಸಲಾಯಿತು.



**ಮೈಸೂರು :** ದಿನಾಂಕ: 22-08-2022ರಂದು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಮೈಸೂರು ಜಿಲ್ಲಾ ಛಾಯಾ ಸ್ನೇಹ ಸೌಹಾರ್ದ ಸಹಕಾರಿ ನಿ., ನೇಗಿಲಯೋಗಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಆದ್ಯ ಸೌಹಾರ್ದ ಸಹಕಾರಿ ನಿ., ಹಾಗೂ ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾ-ರಿಗಳ ಒಕ್ಕೂಟ ನಿ., ಸಹಕಾರಿಗಳಿಗೆ ಭೇಟಿ ನೀಡಲಾಯಿತು. ಸದರಿ ಸಹಕಾ-ರಿಗಳ ಕಾರ್ಯಚಟುವಟಿಕೆಗಳು ಕುರಿತು ಮಾಹಿತಿ ಪಡೆದು, ಸಹಕಾರಿಯ ಅಭಿವೃದ್ಧಿಯ ಕುರಿತು ಸಹಕಾರಿಯ ಆಡಳಿತ ಮಂಡಲಿ ಸದಸ್ಯರಿಗೆ ಮಾರ್ಗದರ್ಶನ ಮಾಡಿದರು. ಮೈಸೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರವರು ಮತ್ತು ಜಿಲ್ಲಾ ಸಂಯೋಜಕರಾದ ಶ್ರೀ ಸುರೇಶ ಆರ್ ಎಸ್ ರವರು ಉಪಸ್ಥಿತರಿದ್ದರು.



**ಮೈಸೂರು :** ಮೈಸೂರು ನಗರದಲ್ಲಿ ನೂತನ ಸೌಹಾರ್ದ ಸಹಕಾರಿಯನ್ನು ಪ್ರಾರಂಭಿಸುವ ದೃಷ್ಠಿಯಿಂದ ದಿನಾಂಕ 22-08-2022ರಂದು ಕರ್ನಾಟಕ ರಾಜ್ಯ ರೈತ ಸಂಘದ ಮುಖಂಡರ ಸಭೆಯನ್ನು ಆಯೋಜಿಸಲಾಗಿತ್ತು. ಸದರಿ ಸಭೆಯಲ್ಲಿ ಸಂಯುಕ್ತ ಸಹಕಾ-ರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಸೌಹಾರ್ದ ಸಹಕಾರಿಯ ಚಳುವಳಿ ಮತ್ತು ಹೊಸ ಸೌಹಾರ್ದ ಸಹಕಾರಿಯ ಸ್ಥಾಪನೆಯ ಕುರಿತು ಮಾಹಿತಿಯನ್ನು ನೀಡಿದರು. ಸದರಿ ಸಭೆಯಲ್ಲಿ ಮೈಸೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರವರು ಮತ್ತು ಜಿಲ್ಲಾ ಸಂಯೋಜಕರಾದ ಶ್ರೀ ಸುರೇಶ ಆರ್ ಎಸ್ ರವರು ಉಪಸ್ಥಿತರಿದ್ದರು.

## ಅಭಿನಂದನೆ

ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಇದರ ನೂತನ ಆಡಳಿತ ಮಂಡಳಿಗೆ ಬೆಳಗಾವಿ ಜಿಲ್ಲೆಯಿಂದ ಎರಡನೇ ಬಾರಿಗೆ ನಿರ್ದೇಶಕರಾಗಿ ಆಯ್ಕೆಯಾಗಿರುವ ಶ್ರೀ ಜಗದೀಶ ಕವಟಗಿಮಠ, ಬಾಗಲಕೋಟೆ ಜಿಲ್ಲೆಯಿಂದ ಮೂರನೇ ಬಾರಿಗೆ ನಿರ್ದೇಶಕರಾಗಿ ಆಯ್ಕೆಯಾಗಿರುವ ಶ್ರೀ ಜಿ.ಎನ್.ಪಾಟೀಲ, ಹಾವೇರಿ ಜಿಲ್ಲೆಯಿಂದ ನೂತನವಾಗಿ ಆಯ್ಕೆಯಾಗಿರುವ ನಿರ್ದೇಶಕರು ಶ್ರೀ ಕೆ ಶಿವಲಿಂಗಪ್ಪ, ಗದಗ ಜಿಲ್ಲೆಯಿಂದ ನಿರ್ದೇಶಕರಾಗಿ ಆಯ್ಕೆಯಾಗಿರುವ ಶ್ರೀ ನಾಗರಾಜ ದೇಶಪಾಂಡೆ, ಧಾರವಾಡ ಜಿಲ್ಲೆಯಿಂದ ನಿರ್ದೇಶಕರಾಗಿ ಆಯ್ಕೆಯಾಗಿರುವ ಶ್ರೀ ಮಲ್ಲಿಕಾರ್ಜುನ ಅಜ್ಜಪ್ಪ ಹೊರಕೇರಿ, ,ವಿಜಯಪುರ ಜಿಲ್ಲೆಯಿಂದ ನೂತನವಾಗಿ ಆಯ್ಕೆಯಾಗಿರುವ ನಿರ್ದೇಶಕರು ಶ್ರೀ ರಾಮನಗೌಡ ಬ.ಪಾಟೀಲ, ಹಾಗೂ ಉತ್ತರ ಕನ್ನಡ ಜಿಲ್ಲೆಯಿಂದ ನೂತನವಾಗಿ ಆಯ್ಕೆಯಾಗಿರುವ ನಿರ್ದೇಶಕರಾದ ಶ್ರೀ ಮೋಹನ ನಾಯ್ಕ ಇವರುಗಳಿಗೆ ಸಂಯುಕ್ತ ಸಹಕಾರಿ ವತಿಯಿಂದ ಅಭಿನಂದನೆ ಸಲ್ಲಿಸಲಾಯಿತು.













**ಬೆಂಗಳೂರು :** ದಿನಾಂಕ 25.08.2022 ರಂದು ನವದೆಹಲಿಯ ವಿವಿಧ ಸಹಕಾರ ಸಂಘ ಸಂಸ್ಥೆಗಳಿಂದ ಸುಮಾರು 19 ಜನ ಪ್ರತಿನಿಧಿಗಳು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಭೇಟಿ ನೀಡಿ ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ಅಧ್ಯಯನ ನಡೆಸಿದರು. ಈ ಒಂದು ವ್ಯವಸ್ಥೆ ಕರ್ನಾಟಕದಲ್ಲಿ ಅತ್ಯಂತ್ಯ ಪರಿಣಾಮಕಾರಿಯಾಗಿ ನಿರ್ವಹಣೆ ಯಾಗುತ್ತಿರುವುದರಿಂದ ಬೇರೆ ಎಲ್ಲಾ ರಾಜ್ಯಗಳಲ್ಲಿಯೂ ಕೂಡ ಒಂದು ವ್ಯವಸ್ಥೆ ಜಾರಿಯಾಗಬೇಕೆಂದು ಅಪೇಕ್ಷಿಸಿದ್ದರು.



## ಸುಕೋ ಬ್ಯಾಂಕ್ ಷೇರುದಾರರಿಗೆ ಶೇ. 9 ರ ಡಿವಿಡೆಂಡ್ ಘೋಷಣೆ



**ಬಳ್ಳಾರಿ** : ಸುಕೋ ಬ್ಯಾಂಕಿನ 29ನೇ ಸರ್ವ ಸದಸ್ಯರ ವಾರ್ಷಿಕ ಸಭೆಯಲ್ಲಿ ಬ್ಯಾಂಕಿನ ಷೇರುದಾರರಿಗೆ ಶೇ. 9 ರಷ್ಟು ಡಿವಿಡೆಂಡ್ ಅನ್ನು ಘೋಷಣೆ ಮಾಡಲಾಗಿದೆ ಎಂದು ಬ್ಯಾಂಕಿನ ಅಧ್ಯಕ್ಷ ಮೋಹಿತ್ ಮಸ್ಕಿ ಅವರು ತಿಳಿಸಿದ್ದಾರೆ.

ಶನಿವಾರ ನಡೆದ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಬ್ಯಾಂಕು ಒಟ್ಟು 25,015 ಷೇರುದಾರರನ್ನು ಹೊಂದಿದೆ. ಬ್ಯಾಂಕು 2021-22ರ ಆರ್ಥಿಕ ಸಾಲಿನಲ್ಲಿ ಒಟ್ಟು 1264 ಕೋಟಿ ರೂಪಾಯಿ ವ್ಯವಹಾರ ನಡೆಸಿ ಒಟ್ಟು 3 ಕೋಟಿ 27 ಲಕ್ಷ ರೂಪಾಯಿ ಆದಾಯ ತೆರಿಗೆಯನ್ನು ಪಾವತಿಸಿ ಒಟ್ಟು 4 ಕೋಟಿ 84 ಲಕ್ಷ ರೂಪಾಯಿ ನಿವ್ವಳ ಲಾಭ ಗಳಿಕೆ ಮಾಡಿದ್ದು, ಈ ಅವಧಿಯಲ್ಲಿ ಬ್ಯಾಂಕು ಶೂನ್ಯ ಎನ್‌ಪಿಎ ಸಾಧಿಸಿದ್ದು, ಸಹಕಾರಿ ಬ್ಯಾಂಕಿನ ವ್ಯವಹಾರದಲ್ಲಿ ಇದು ದೊಡ್ಡ ಸಾಧನೆ ಎಂದರು. 2022 – 2023ರ ಆರ್ಥಿಕ ಸಾಲಿನಲ್ಲಿ ಆರ್‌ಬಿಐನ ಅನುಮತಿ ಮೇರೆಗೆ 10 ಹೊಸ ಶಾಖೆಗಳನ್ನು ತೆರೆಯಲು, 25 ಬ್ಯುಸಿನೆಸ್ ಕರೆಸ್ಪಾಂಡೆಟ್‌ಗಳನ್ನು ನೇಮಕ ಮಾಡಿಕೊಳ್ಳಲು ನಿರ್ಧ-ರಿಸಲಾಗಿದೆ. ಸುಕೋ ಬ್ಯಾಂಕಿನ ಸಂಸ್ಥಾಪಕ ಅಧ್ಯಕ್ಷರು, ನಿರ್ದೇಶಕರು ಆಗಿರುವ ಮನೋಹರ ಮಸ್ಕಿ ಅವರು ಸುಕೋ ಬ್ಯಾಂಕಿನ ನಡೆದುಬಂದ ದಾರಿ, ಸಾಧನೆಗಳು ಮತ್ತು ಪ್ರಥಮಗಳ ಕುರಿತು ಸಭೆಗೆ ವಿವರಿಸಿದರು.

## 36.81 ಲಕ್ಷ ನಿವ್ವಳ ಲಾಭ ಗಳಿಸಿದ ಶ್ರೀ ವಿನಾಯಕ ಸೌಹಾರ್ದ ಸಹಕಾರಿ ನಿ. ಸಿದ್ದಾಪುರ



ಸಿದ್ದಾಪುರ ಪ್ರತಿಷ್ಠಿತ ಸಹಕಾರಿ ಸಂಸ್ಥೆ ಶ್ರೀ ವಿನಾಯಕ ಸೌಹಾರ್ದ ಕ್ರೆಡಿಟ್ ಕೋ-ಆಪ್ ಲಿ ಇದು 2021-22 ನೇ ಸಾಲಿನಲ್ಲಿ 36.81 ಲಕ್ಷ ರೂ.ಗಳ ನಿವ್ವಳ ಲಾಭ ಗಳಿಸಿ ಉತ್ತಮ ಪ್ರಗತಿಯನ್ನು ಸಾಧಿಸಿದೆ. ವರ್ಷಾಂತ್ಯಕ್ಕೆ 16936 ಸದಸ್ಯರನ್ನು ಹೊಂದಿದ್ದು, ವರದಿ ಸಾಲಿನಲ್ಲಿ 40.35 ಕೋಟಿ ದುಡಿಯುವ ಬಂಡವಾಳವನ್ನು ಕ್ರೋಢೀಕರಿಸಿಕೊಂಡು ಸಮಾನ ಮನಸ್ಕ ನಿರ್ದೇಶಕ ಮಂಡಳಿ ಮತ್ತು ನಿಷ್ಠಾವಂತ ಸಿಬ್ಬಂದಿಗಳ ಸಹಯೋಗದೊಂದಿಗೆ ಸಂಸ್ಥೆ ಉತ್ತಮ ಸೇವೆ ನೀಡುತ್ತಾ ಬಂದಿರುತ್ತದೆ.

ಸಭೆಯಲ್ಲಿ ಉಪಸ್ಥಿತರಿದ್ದ ಲೆಕ್ಕಪರಿಶೋಧಕರಾದ ಶ್ರೀ ಬಿ.ವಿ.ರವೀಂದ್ರನಾಥ ಸಾಗರ ಇವರು ಸಂಸ್ಥೆಯ ಸಾಮರ್ಥ್ಯ, ಪ್ರಗತಿಯ ಲಕ್ಷಣಗಳು ಹಾಗೂ ವ್ಯವಸ್ಥಿತ ನಿರ್ವಹಣೆ ಇವುಗಳ ಬಗ್ಗೆ ಶ್ಲಾಘಿಸಿದರು ಹಾಗೂ ಆರ್ಥಿಕ ಶಿಸ್ತಿನ ಕುರಿತು ತಿಳಿಸಿದರು.

**ಬೆಂಗಳೂರು** : ದಿನಾಂಕ 23.08.2022 ರಂದು ಸಂಯುಕ್ತ ಸಹಕಾ-ರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ್ ರವರು ಬೆಂಗಳೂರು ಪ್ರಾಂತದ ಜಂಟಿ ನಿಬಂಧಕರಾದ ಶ್ರೀಯುತ ಅಶ್ವತ್ ನಾರಾಯಣ ರವರನ್ನು ಭೇಟಿ ಮಾಡಿ ಸೌಹಾರ್ದ ಸಹಕಾರಿಗಳ ಬಗ್ಗೆ ಕುಶಲೋಪರಿ ನಡೆಸಿದರು.

ದಿನಾಂಕ 23.08.2022 ರಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಸಹಕಾರಿ ಸಂಘಗಳ/ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನೆ ಪ್ರಗತಿ ಕುರಿತಂತೆ ಮಾನ್ಯ ನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ, ಬೆಂಗಳೂರು, ಇವರ ಅಧ್ಯಕ್ಷತೆಯಲ್ಲಿ ಸಭೆಯು ಜರುಗಿರುತ್ತದೆ. ಸದರಿ ಸಭೆಯಲ್ಲಿ ಕಿರಿಯ ವ್ಯವಸ್ಥಾಪಕರುಗಳಾದ ಶ್ರೀ ಸಂತೋಷ ಬಸಣ್ಣವರ, ಹಾಗೂ ಶ್ರೀ ವೃಷಭನಾಥ ಪರಪ್ಪನವರ ಇವರುಗಳು ಭಾಗವಹಿಸಿದ್ದರು.



### ಅಭಿನಂದನೆ

**ಬಾಗಲಕೋಟೆ** : ದಿನಾಂಕ 26 ಜುಲೈ 2022 ರಂದು ಬಾಗಲಕೋಟೆ ಜಿಲ್ಲೆಯ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಜಂಟಿ ನಿರ್ದೇಶಕರಾಗಿ ಶ್ರೀ ಎಂ ಹೆಚ್ ಲಕ್ಷ್ಮಣ ರವರನ್ನು ಸಂಯುಕ್ತ ಸಹಕಾರಿ ವತಿಯಿಂದ ಅಭಿನಂದಿಸಲಾಯಿತು.



**ತುಮಕೂರು** : ದಿನಾಂಕ 27.08.2022 ರಂದು ಜಿಲ್ಲಾ ಸಂಯೋಜ–ಕರಾದ ಶ್ರೀ ಉಮೇಶ್ ಎ.ಎಸ್ ರವರು ಶ್ರೀ ಶ್ರೀ ಉದ್ಧಾನೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿ ಭಾಗವಹಿಸಿ ಸಹಕಾರಿಯಲ್ಲಿ ಉಂಟಾಗಿರುವ ಸಮಸ್ಯೆಗಳು ಹಾಗೂ ನಾಲ್ಕು ವರ್ಷಗಳ ಲೆಕ್ಕಪರಿಶೋಧನಾ ವರದಿ ಬಾಕಿ ಇರುವ ಕುರಿತು ವಿಚಾ–ರಿಸಿದರು. ಮುಂದುವರೆದು ಲೆಕ್ಕಪರಿಶೋಧನೆ, ಸಾಮಾನ್ಯ ಸಭೆ, ಉಪವಿಧಿ ತಿದ್ದುಪಡಿ ಕುರಿತು ಮಾಹಿತಿ ನೀಡಿದರು. ಸೌಹಾರ್ದ ಕಾಯ್ದೆ ಮತ್ತು ನಿಯಮಾನುಸಾರ ಕಾರ್ಯನಿರ್ವಹಿಸುವಂತೆ ಮಾರ್ಗದರ್ಶನ ನೀಡಿದರು.

## ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಆಯ್ಕೆ

**ಮಂಡ್ಯ ಜಿಲ್ಲಾ ಶ್ರೀ ಶ್ರೀ ಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಮಂಡ್ಯ**



ಶ್ರೀ ಎಸ್. ನಾಗರಾಜು
ಅಧ್ಯಕ್ಷರು




ಶ್ರೀ ಡಿ. ದ್ಯಾವಣ್ಣ
ಉಪಾಧ್ಯಕ್ಷರು

**ಶ್ರೀ ನಗರೇಶ್ವರ ಸೌಹಾರ್ದ ಪತ್ತಿನ ಸಹಕಾರ ಸಂಘ ನಿ.,**



ಹೆಚ್.ಎಸ್.ಬಸವರಾಜು
ಅಧ್ಯಕ್ಷರು



ಶ್ರೀ ಎಂ.ಬಸಪ್ಪ
ಉಪಾಧ್ಯಕ್ಷರು



**ಬೆಳಗಾವಿ** : ಶ್ರೀ ಸಾಯಿಶಾಮ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿಯಮಿತ ಇದರ ಆಡಳಿತ ಮಂಡಳಿ ಚುನಾವಣೆ ದಿನಾಂಕ 21.06.2022 ರಂದು ಜರುಗಿದ್ದು ಶ್ರೀಯುತ ಚಂದ್ರಕಾಮತ ತಮ್ಮಣ್ಣಾ ಮಜಗಿಯವರು ಅಧ್ಯಕ್ಷರಾಗಿ ಹಾಗೂ ಶ್ರೀಯುತ ಪ್ರವೀಣ ವಿಶ್ವನಾಥ ಹಿರೇಮಠ ಇವರು ಉಪಾಧ್ಯಕ್ಷರಾಗಿ ಆಯ್ಕೆಯಾಗಿರುತ್ತಾರೆ.




**ಬೈಂದೂರು** : ಶ್ರೀರಾಮ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ 2021–22ನೇ ಸಾಲಿನಲ್ಲಿ 37.86 ಲಕ್ಷ ರೂ. ಲಾಭಗಳಿಸಿ ಸದಸ್ಯರಿಗೆ ಶೇ.13 ಡಿವಿಡೆಂಟ್ ಘೋಷಿಸಿದೆ. ಗ್ರಾಹಕರ ಸಹಕಾರದಿಂದ ನಿಧಿಗಳ ಸಮರ್ಪಕ ನಿರ್ವಹಣೆ, ಸಾಲಗಳ ವಿತರಣೆ ಹಾಗೂ ಸಮಯೋಜಿತ ಹೂಡಿಕೆಗಳಿಂದಾಗಿ ಸಂಘವು ಉತ್ತಮ ಪ್ರಗತಿ ಸಾಧಿಸಿದೆ ಎಂದು ಸಂಘದ ಅಧ್ಯಕ್ಷ ಎಸ್. ರಾಜು ಪೂಜಾರಿ ಹೇಳಿದರು.

ಸಂಘದ ಪ್ರಧಾನ ಕಛೇರಿಯಲ್ಲಿ ಭಾನುವಾರ ಜರುಗಿದ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ ಸಹಕಾರಿಯು 2021–22ನೇ ಸಾಲಿನಲ್ಲಿ ರೂ. 30.19 ಕೋಟಿ ಠೇವಣಿ ಹೊಂದಿದ್ದು, 25.11 ಕೋಟಿ ಸಾಲ ನೀಡಿದೆ. ಕಳೆದ ಸಾಲಿನ ಕಾರ್ಯಯೋಜನೆಯಲ್ಲಿ ನಿಗದಿಪಡಿಸಿದ ಠೇವಣಿ, ಸಾಲ, ಅನುತ್ಪಾದಕ ಸಾಲ, ಸುಸ್ತಿ ಸಾಲ ಹಾಗೂ ಮುಂಗಡ ಲಾಭಗಳಿಕೆಯಲ್ಲಿ ನಿಗದಿತ ಗುರಿಯನ್ನು ಮೀರಿ ಸಂಸ್ಥೆ ಪ್ರಗತಿ ಸಾಧಿಸಿದೆ. ಜಿಲ್ಲೆಯಲ್ಲಿಯೇ ಮಾದರಿ ಸಂಸ್ಥೆಯಾಗಿ ರೂಪುಗೊಳ್ಳುತ್ತಿರುವ ಹಿಂದೆ ಗ್ರಾಹಕರ ಸಹಕಾರ ಹಾಗೂ ನೌಕರರ ಶ್ರಮವಿದೆ ಎಂದರು.

ನಿರ್ದೇಶಕರುಗಳಾದ ಮಂಜು ಪೂಜಾರಿ ನಾವುಂದ, ರಾಮಕೃಷ್ಣ ಖಾರ್ವಿ, ಮಂಜುನಾಥ ಪೂಜಾರಿ, ಅಣ್ಣಪ್ಪ ಪೂಜಾರಿ ಇದ್ದರು. ಸಂಘದ ಉಪಾಧ್ಯಕ್ಷ ಎಂ. ವಿನಾಯಕ ರಾವ್ ಸ್ವಾಗತಿಸಿದರು. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕಿಟ್ಟಣ್ಣ ರೈ ಕೆ. ವಾರ್ಷಿಕ ವರದಿ ವಾಚಿಸಿದರು.



# ಸಂಯುಕ್ತ ಸಹಕಾರಿ ಕೇಂದ್ರ ಕಛೇರಿ ಹಾಗೂ ಪ್ರಾಂತೀಯ ಕಛೇರಿಗಳಲ್ಲಿ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ

75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಧ್ವಜರೋಹಣವನ್ನು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ, ಬೆಂಗಳೂರು ವಿಭಾಗ ಹಾಗೂ ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ ಮತ್ತು ಬೆಳಗಾವಿ ವಿಭಾಗ, ಕಲಬುರಗಿ ವಿಭಾಗ, ಮೈಸೂರು ವಿಭಾಗದಲ್ಲಿ ಹಾಗೂ ಜಿಲ್ಲಾ ಸಂಪರ್ಕ ಕಛೇರಿಗಳಲ್ಲಿ ಆಚರಿಸಲಾಯಿತು.



**ಬೆಂಗಳೂರು :** 75ನೇಯ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ನೂತನ ಅಧ್ಯಕ್ಷರಾದ ಮಾನ್ಯ ಶ್ರೀ ಜಿ. ನಂಜನಗೌಡ ರವರು ನೆರವೇರಿಸದರು.

ಈ ಸಂದರ್ಭದಲ್ಲಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್, ಮಾನ್ಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ರಘುನಂದನ್ ಕೆ, ಬೆಂಗಳೂರು ಪ್ರಾಂತೀಯ ಮಾನ್ಯ ವ್ಯವಸ್ಥಾಪಕರಾದ (ಪ್ರಭಾರ) ಶ್ರೀ ಸಂಜಯ ಕೊರಟಕರ್, ದಾವಾ ಪಂಚಾಯತ ನ್ಯಾಯ್ಯಾಲಯದ ಮಾನ್ಯ ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಧರ್, ಹಾಗೂ ಎಲ್ಲಾ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಬೆಂಗಳೂರು :** 75ನೇಯ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಶೈಲಜಾ ವಿ ತಪಲಿ ರವರು ನೆರವೇರಿಸದರು. ಈ ಸಂದರ್ಭದಲ್ಲಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು,ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್. ಎಸ್ ಪಾಟೀಲ, ನಿರ್ದೇಶಕರು ಹಾಗೂ ಕಲಬುರಗಿ ನಗರದ ಸಹಕಾರಿಗಳು ಹಾಗೂ ಪ್ರಾಂತದ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಬೆಳಗಾವಿ :** ದಿನಾಂಕ 15 ಆಗಸ್ಟ್ 2022ರ ಸೋಮವಾರದಂದು 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಬೆಳಗಾವಿ ಪ್ರಾಂತೀಯ ಕಚೇರಿಯಲ್ಲಿ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ದಾವಾ ಪಂಚಾಯತ ನ್ಯಾಯಾಲಯದ ಮಾನ್ಯ ಪೀಠಾಧಿಕಾರಿಗಳು ಮತ್ತು ಸಹಕಾರಿ ಸಂಘಗಳ ನಿಬಂಧಕರಾದ ಶ್ರೀ ಜಿ.ಎಂ.ಪಾಟೀಲ ಇವರು ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿ ಸಂಘಗಳ ಮಾನ್ಯ ಉಪ ನಿಬಂಧಕರಾದ ಶ್ರೀ ಎಂ.ಎನ್.ಮಣಿ, ಸಹಾಯಕ ನಿಬಂಧಕರುಗಳಾದ ಶ್ರೀ ರವೀಂದ್ರ ಪಾಟೀಲ ಮತ್ತು ಶ್ರೀ ಅಜೀತ ಶಿರಹಟ್ಟಿ, ಸಂಯುಕ್ತ ಸಹಕಾರಿಯ ಮಾಜಿ ವೃತ್ತಿಪರ ನಿರ್ದೇಶಕರಾದ ಶ್ರೀ ಲಕ್ಷ್ಮಣ ಪವಾರ, ಮಾನ್ಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ, ಸ್ಥಳಿಯ ಸಹಕಾರಿಗಳ ಅಧ್ಯಕ್ಷರುಗಳು ಹಾಗೂ ಪ್ರಾಂತೀಯ ಕಛೇರಿಯ ಎಲ್ಲ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಮೈಸೂರು :** 75ನೇಯ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಧ್ವಜಾರೋಹಣವನ್ನು ಶ್ರೀ ಸುಬ್ರಮಣ್ಯ ಮತ್ತು ಶ್ರೀ ಕುಮಾರ್ ರವರು ನೆರವೇರಿಸದರು. ಈ ಸಂದರ್ಭದಲ್ಲಿ ಮೈಸೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು /ನಿರ್ದೇಶಕರು ಹಾಗೂ ಪ್ರಾಂತೀಯ ವ್ಯವಸ್ಥಾಪಕರು ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

# ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಲ್ಲಿ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ದಿನಾಚರಣೆ



**ಚಾಮರಾಜನಗರ** : ದಿನಾಂಕ 13.08.2022ರಂದು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ ರವರು ಮಾನ್ಯ ಪ್ರಧಾನ ಮಂತ್ರಿಗಳ ಕರೆಯ ಮೇರೆಗೆ "ಹರ್ ಘರ್ ತಿರಂಗ" ಅಂಗವಾಗಿ ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಇದರ ಕಛೇರಿಯಲ್ಲಿ ಧ್ವಜಾರೋಹಣ ನೆರವೇರಿಸಿದರು. ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಬಾಲಸುಬ್ರಮಣ್ಯ ರವರು ಸ್ವಾಗತ ಕೋರಿದರು.



**ಚಾಮರಾಜನಗರ** : ದಿನಾಂಕ: 13.08.2022ರಂದು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ ರವರು "ಹರ್ ಘರ್ ತಿರಂಗ" ಅಂಗವಾಗಿ ನವ್ಯ ಕರ್ನಾಟಕ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಇದರ ಕಛೇರಿಯಲ್ಲಿ ಧ್ವಜಾರೋಹಣ ನೆರವೇರಿಸದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ. ನಂಜುಂಡಸ್ವಾಮಿ ರವರು ಸ್ವಾಗತ ಕೋರಿದರು. ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಮಂಜು ಹರವೆ ರವರು ವಂದನಾರ್ಪಣೆ ಮಾಡಿದರು.



**ಉಡುಪಿ** ; ಸ್ವರ್ಣ ಸೌಹಾರ್ದ ಸಹಕಾರಿ ಸಂಘ ನಿ., ಇದರ ವತಿಯಿಂದ ಸಹಕಾರಿಯ ನಿರ್ದೇಶಕರ ಮಂಡಳಿ, ಸಿಬ್ಬಂದಿ ವರ್ಗ ಮತ್ತು ಸಹಕಾರಿಯ ಸದಸ್ಯರ ಸಮಕ್ಷಮದಲ್ಲಿ ದಿನಾಂಕ 09.08.2022 ಮಂಗಳವಾರದಂದು ಸಹಕಾರಿಯ ಪ್ರಧಾನ ಕಛೇರಿಯಲ್ಲಿ ಹರ್ ಘರ್ ತಿರಂಗ್ ಕಾರ್ಯಕ್ರಮವನ್ನು ನೆರವೇರಿಸಿಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಶೇಖರ ಕೆ ಕರ್ಕೇರ ಇವರು ಉಪಸ್ಥಿತರಿದ್ದರು.



**ತುಮಕೂರು** : ದಿನಾಂಕ 13.08.2022ರಂದು ತುಮಕೂರು ಜಿಲ್ಲಾ ಸಂಪರ್ಕ ಕಛೇರಿಯಲ್ಲಿ "ಹರ್ ಘರ್ ತಿರಂಗಾ" ಅಭಿಯಾನದ ಪ್ರಯುಕ್ತ ಧ್ವಜಾರೋಹಣ ಮಾಡುವುದರ ಮೂಲಕ ಆಚರಿಸಲಾಯಿತು. ಈ ಸಂದರ್ಭದಲ್ಲಿ ಶ್ರೀ ಶಿವಾಜಿ ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು ಸಹಕಾರಿಯ ಅಧ್ಯಕ್ಷರಾದ ಶ್ರೀ ಸುರೇಶ್ ರಾವ್ ರವರು, ಸಹಕಾರಿಯ ಆಡಳಿತ ಮಂಡಳಿ ಸದಸ್ಯರು, ಸಹಕಾರಿಯ ಸಿಬ್ಬಂದಿ ವರ್ಗದವರು ಹಾಗೂ ತುಮಕೂರು ಸೌಹಾರ್ದ ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್ ರವರು ಉಪಸ್ಥಿತರಿದ್ದರು.



**ಗೋಕಾಕ :** ಶ್ರೀ ಶಾಂಭವಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಗೋಕಾಕದ ಮುಖ್ಯ ಕಚೇರಿಯಲ್ಲಿ ದಿನಾಂಕ 15-08-2022 ಸೋಮವಾರ ಮುಂಜಾನೆ ಸ್ವಾತಂತ್ರೋತ್ಸವದ ನಿಮಿತ್ಯ ಧ್ವಜಾರೋಹಣ ನೆರವೇರಿಸಲಾಯಿತು ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಸುವರ್ಣ ಗುಂಡಿ, ಉಪಾಧ್ಯಕ್ಷರಾದ ಸಿದ್ಧಾರೂಢ ಬಾಣಕಾರಿ, ನಿರ್ದೇಶಕರಾದ ಮಹಾದೇವ ಗಿಡಬಳ್ಳಿ, ರಾಜು ಇಂಗಳೆ, ರುದ್ರಪ್ಪ ಕರೋಶಿ, ರಂಜನಾ ಗೋಕಾಕ, ಶ್ರೀಧರ ಪಿರಡಿ, ಸೂರಜ್ ಹಾಗೂ ಎಲ್ಲ ಸಿಬ್ಬಂದಿ ವರ್ಗದವರು ಹಾಜರಿದ್ದರು.



**ಬೀದರ :** ಇಡೀ ರಾಷ್ಟ್ರವು ಸ್ವಾತಂತ್ರ್ಯ ದಿನಾಚಾರಣೆಯ ಆಜಾದಿ ಕಾ ಅಮೃತ ಮಹೋತ್ಸವ ಆಚರಣೆಯಲ್ಲಿ ತೊಡಗಿರುವಾಗ ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟವು ಈ ಮೂರು ದಿನಗಳನ್ನು ವಿಶಿಷ್ಠ ರಿತಿಯಲ್ಲಿ ಆಚರಣೆಯಲ್ಲಿ ತೊಡಗಿದೆ. ಜಿಲ್ಲಾ ಒಕ್ಕೂಟದ ಅಧ್ಯಕ್ಷರು ಉಪಾಧ್ಯಕ್ಷರು ಹಾಗು ನಿರ್ದೇಶಕರು ಸೇರಿ ಭಾಲ್ಕಿ ನಗರದ ಲೊಕ ನಾಯಕ ಸ್ವತಂತ್ರ್ಯ ಹೊರಾಟಗಾರರಾದ ಶ್ರೀ ಭೀಮಣ್ಣ ಖಂಡ್ರೆ ಹಾಗೂ ಶ್ರೀ ಕೇಶವರಾವ ನಿಟ್ಟುರಕರ್ ಅವರ ನಿವಾಸಗಳಿಗೆ ತೆರಳಿ ಗೌರವ ಸನ್ಮಾನ ಮಾಡಲಾಯಿತ್ತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಭೀಮಣ್ಣ ಖಂಡ್ರೆ ರವರು ಸ್ವಾತಂತ್ರ ದಿನದ ದಿನಗಳ ಕುರಿತು ನೆನಪು ಮಾಡಿಕೊಂಡು ಅಂದಿನ ಹಿರಿಯರ ತ್ಯಾಗ ಮತ್ತು ಬಲಿದಾನವು ಇಂದಿನ ಸ್ವಾತಂತ್ರದ ಫಲವಾಗಿದೆ ಎಂದರು. ಅದೆ ರೀತಿ ಸ್ವಾತಂತ್ರ್ಯ ಹೊರಾಟಗಾರರಾದ ಶ್ರೀ ಕೇಶವರಾವ ನಿಟ್ಟುರಕಾರ ಅವರು ಮಾತನಾಡಿ ಸ್ವಾತಂತ್ರ್ಯ ಚಳುವಳಿಯಲ್ಲಿ ಗಾಂಧಿ ಜೀ ಪಾತ್ರ ಹಾಗೂ ಅಮೃತ ಮಹೊತ್ಸವ್ ಯಶಸ್ವಿಯಾಗ ಬೇಕಾದರೆ ಪ್ರತಿಯೊಬ್ಬರು ಭಾರತ ಸಂವಿಧಾನ ಅರ್ಥ ಮಾಡಿಕೊಂಡು ಎಲ್ಲರು ಗೌರವ ಕೊಡಬೇಕು ಹಾಗೂ ಮುಲಭುತ ಹಕ್ಕುಗಳನ್ನು ಹೇಗೆ ಅವಶ್ಯಕವು ಅದೇ ರೀತಿ ಪ್ರತಿಯೊಬ್ಬರು ಸಂವಿಧಾನದಲ್ಲಿನ ಕರ್ತವ್ಯಗಳನ್ನು ಪೂರೈಸಬೇಕು ಎಂದರು.ಅಧ್ಯಕ್ಷರಾದ ಗುರುನಾಥ ಜ್ಯಾಂತಿಕರ್ ಮಾತನಾಡಿ ಅಮೃತ ಮಹೊತ್ಸವದ ಸಂದರ್ಭದಲ್ಲಿ ಸ್ವಾತಂತ್ರ್ಯ ಸೇನಾನಿಗಳನ್ನು ಗೌರವಿಸುತ್ತಿರುವುದು ಹೆಮ್ಮೆಯ ವಿಷಯ ಎಂದರು. ಪ್ರಾಸ್ತಾವಿಕ ಮತ್ತು ಸ್ವಾಗತ ನಿರ್ದೇಶಕರಾದ ಜಗನಾಥ ಕರಂಜೆ, ಉಪಾಧ್ಯಕ್ಷರಾದ ಸಂಜೀವಕುಮಾರ ಪಾಟೀಲ್, ನಿರ್ದೇಶಕರಾದ ಶ್ರೀಕಾಂತ ಸ್ವಾಮಿ ಸೋಲಪುರ್, ಸಂಜ್ಯಯ ಕ್ಯಾಸಾ, ಹಿರಿಯ ಸಹಕಾರಿಗಳಾದ ನಾಗಶೆಟ್ಟಿ ಪಾಟೀಲ್ ಸುಂಕನಾಳ, ಬಸವರಾಜ ಹುಡ್ಗೆ, ಬಾಮುರಾವ ದೇಶಮುಖ, ಸತೀಷ ದೇಶಮುಖ, ವೀರಶಟ್ಟಿ ಖ್ಯಾಮಾ, ಸಚಿನ ಬಿರಾದರ, ಸಂಜೀವಕುಮಾರ ಸಜ್ಜನ್, ವಿಜಯಕುಮಾರ ಸಿಂದೆ, ಸಾಗರ, ಸಚಿನ ಮುಖ್ಯ ಕಾರ್ಯನಿರ್ವಾಹಕ ಅಮೃತ ಹೊಸಮನಿ, ಜಿಲ್ಲಾ ಸಂಯೋಜಕ ವೀರಶಟ್ಟಿ ಕಾಮಣ್ಣಾ ಉಪಸ್ಥಿತರಿದ್ದರು.



ಬಸವೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ., ಹಿಪ್ಪಾರಗಿ ಸಹಕಾರಿಯಲ್ಲಿ 75 ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆ.




**ಕಲಬುರಗಿ :** ಪುಣ್ಯಕೋಟಿ ಸೌಹಾರ್ದ ಸಹಕಾರಿಯಲ್ಲಿ 75 ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆ.




**ಗದಗ :** ವೀರಶೈವ ಪಂಚಮಸಾಲಿ ಸೌಹಾರ್ದ ಪತ್ತಿನ ಸಹಕಾರಿ ನಿ., ಗದಗ ಇದರ ವತಿಯಿಂದ ತಾರೀಕು 15/08/2022 ನೇ ಇಸ್ವಿಯ ಸೋಮವಾರ ಮುಂಜಾನೆ 8.00 ಘಂಟೆಗೆ ಸೌಹಾರ್ದ ಪತ್ತಿನ ಸಹಕಾ–ರಿಯ ಉಪಾಧ್ಯಕ್ಷರಾದ ಶ್ರೀ ದುಂಡಪ್ಪ ಎನ್ ಆಸಂಗಿ ಇವರ ಅಧ್ಯಕ್ಷತೆಯಲ್ಲಿ ಸಹಕಾರಿಯ ನಿರ್ದೇಶಕರಾದ ಶ್ರೀ ಶಿವಪ್ರಭು ಎಲ್ ನೀಲಗುಂದ ಸಾ॥ ಗದಗ ಇವರ ಅಮೃತ ಹಸ್ತದಿಂದ ಸ್ವಾತಂತ್ರ್ಯೋವದ ಧ್ವಜಾರೋಹಣ ಕಾರ್ಯಕ್ರಮ ಜರುಗಿತು. ಸರ್ವಶ್ರೀ ನಿರ್ದೇಶಕರಾದ ಶ್ರೀ ಎಸ್ ಎಮ್ ಪಾಟೀಲ, ಶ್ರೀ ಎಸ್ ಬಿ ಕಲಕೇರಿ , ಶ್ರೀ ಎಂ ಆರ್ ಕಿತ್ತೂರು, ಮತ್ತು ಶ್ರೀಮತಿ ಸವಿತಾ ಎಂ ಪಾಟೀಲ ಇವರುಗಳು 75ನೇಯ ಸ್ವಾತಂತ್ರ್ಯೋತ್ಸವದ ಧ್ವಜವನ್ನು ಹಾರಿಸಿದ ನಂತರ ಸ್ವತಂತ್ರ ಸಿಕ್ಕ ಬಗ್ಗೆ ನಾಲ್ಕು ಮಾತನಾಡಿದ ಬಳಿಕ ಚಹಾ ಪರಾಳದ ನಂತರ ಸಭೆಯು ಮುಕ್ತಾಯಗೊಳಿಸಿತು ಎಂದು ಸಹಕಾರಿಯ ಮ್ಯಾನೇಜರ ಇವರು ಶ್ರೀ ಸಿ ವ್ಹಿ ಪಾಟೀಲ ಮತ್ತು ಸಹಕಾ–ರಿಯ ಸಿಬ್ಬಂದಿಯಾದ ಪರಪ್ಪ ವ್ಹಿ ಬಳಿಗೇರ ಹಾಗೂ ಪಿಗ್ಮಿ ಸಂಗ್ರಹಕಾರರಾದ ಶ್ರೀ ರಮೇಶ ಪಿ ಅಣ್ಣಿಗೇರಿ ಮತ್ತು ಆಯ್ ಜೆ ಶಿರೂರು ಹಾಜರಿದ್ದರು.




ಶ್ರೀ ದುರದುಂಡೀಶ್ವರ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಬೋರಗಲ್ಲ ಸಹಕಾರಿಯಲ್ಲಿ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆ.




ಶ್ರೀ ಶರಣ ಶಬರೀಶ ಸೌಹಾರ್ದ ಸಹಕಾರಿ ನಿ., ಬೋರಗಲ್ಲ ಸಹಕಾರಿಯಲ್ಲಿ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆ.



**ತುಮಕೂರು** : ದಿನಾಂಕ 03-09-2022ರಂದು ತುಮಕೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ತುಮಕೂರು ಇದರ ಆಡಳಿತ ಮಂಡಲಿ ಸಭೆಯಲ್ಲಿ ತುಮಕೂರು ಜಿಲ್ಲೆಯ ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್ ರವರು ಭಾಗವಹಿಸಿ ತುಮಕೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮಾಹಿತಿ ಹಾಗೂ ದಿನಾಂಕ:07-09-2022ರಂದು ನಡೆಯಲಿರುವ ತುಮಕೂರು ಜಿಲ್ಲೆಯ ಸಂಪರ್ಕ ಸಭೆ ಕುರಿತು ಮಾಹಿತಿ ನೀಡಿದರು. ತುಮಕೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟಕ್ಕೆ ಷೇರು ಸಂಗ್ರಹಣೆ ಮಾಡುವ ಕುರಿತು ಮತ್ತು ಒಕ್ಕೂಟದ ಕಾರ್ಯಚಟುವಟಿಕೆಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಯೋಜನೆ ರೂಪಿಸುವ ಕುರಿತು ಚರ್ಚಿಸಲಾಯಿತು. ಈ ಸಂದರ್ಭದಲ್ಲಿ ತುಮಕೂರು ಜಿಲ್ಲಾ ಒಕ್ಕೂಟ ಅಧ್ಯಕ್ಷರಾದ ಶ್ರೀ ಎಸ್.ಲಕ್ಷ್ಮೀನಾರಾಯಣ ರವರು ಹಾಗೂ ಜಿಲ್ಲಾ ಒಕ್ಕೂಟದ ನಿರ್ದೇಶಕರು ಉಪಸ್ಥಿತರಿದ್ದರು.



ದೇವನಪ್ರಿಯಾ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ ಸಹಕಾರಿಯಲ್ಲಿ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆ.



ಶ್ರೀ ಬಸವೇಶ್ವರ ಅರ್ಬನ್ ಪತ್ತಿನ ಸೌಹಾರ್ದ ಸಹಕಾರಿ ನಿ., ಶಿರಹಟ್ಟಿ ಸಹಕಾರಿಯಲ್ಲಿ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆ.



ಧರಣಿ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಧಾರವಾಡ ಸಹಕಾರಿಯಲ್ಲಿ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆ.



ದಿ ಹುಕ್ಕೇರಿ ಸೌಹಾರ್ದ ಸಹಕಾರಿ ಸಂಘ ನಿ., ಹುಕ್ಕೇರಿ ಸಹಕಾರಿಯಲ್ಲಿ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಧ್ವಜಾರೋಹಣವನ್ನು ನೇರವೇರಿಸಲಾಯಿತು.



ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ಕ್ಷೇಮಾಭಿವೃದ್ಧಿ ಸೌಹಾರ್ದ ಸಹಕಾರಿ ನಿಯಮಿತ ಶಿಗ್ಗಾಂವ ಸಹಕಾರಿಯಲ್ಲಿ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆ.



ವೀರಶೈವ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ ಬೆಳಗಾವಿ ಸಹಕಾರಿಯಲ್ಲಿ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆ.



ದಿ ಪಾಟೀಲ್ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿ. ಬೆಳಗಾವಿ ಸಹಕಾರಿಯಲ್ಲಿ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆ.



ಕರ್ನಾಟಕ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಸಂಕೇಶ್ವರ ಸಹಕಾರಿಯಲ್ಲಿ 75 ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆ.



ಸ್ನೇಹ ಸಂಗಮ ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು ಸಹಕಾರಿಯು ನಿವೃತ್ತ ಯೋಧರನ್ನು ಸನ್ಮಾನಿಸುವುದರ ಮೂಲಕ 75ನೇ ಸ್ವತಂತ್ರೋತ್ಸವ ಸಮಾರಂಭವನ್ನು ಅರ್ಥಪೂರ್ಣವಾಗಿ ಆಚರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಮಂಜುನಾಥ್ ರವರು, ಆಡಳಿತ ಮಂಡಳಿ ಸದಸ್ಯರು ಹಾಗೂ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರು, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭ ಸಂದರ್ಭದಲ್ಲಿ ರಾಜದೀಪ್ ಸೌಹಾರ್ದ ಕ್ರೆಡಿಟ್ ಸಹಕಾರಿ ನಿಯಮಿತ, ಶಿರಸಿ ವತಿಯಿಂದ ಸಹಕಾರಿಯ ಅಧ್ಯಕ್ಷರಾದ ಶ್ರೀ ದೀಪಕ ಹೆಗಡೆ ದೊಡ್ಡೂರರವರು ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಮುಖ್ಯ ಕಾರ್ಯನಿರ್ವಹಕ ಪ್ರಸನ್ನ ವಿ ಹೆಗಡೆ ಹಾಗು ಸಿಬ್ಬಂದಿಗಳು ಉಪಸ್ಥಿತರಿದ್ದರು.

ಸನ್ ರೈಸ್ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಕ್ಯಾತಸಂದ್ರ, ತುಮಕೂರು ಸಹಕಾರಿಯು ನಿವೃತ್ತ ಯೋಧ ಶ್ರೀ ಶ್ರೀನಿವಾಸ್ ರವರನ್ನು ಸನ್ಮಾನಿಸುವುದರ ಮೂಲಕ 75ನೇ ಸ್ವಾತಂತ್ರೋತ್ಸವ ಸಮಾರಂಭವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ವಿಜಯ ಸಿ.ಪಿ ರವರು, ಆಡಳಿತ ಮಂಡಳಿ ಸದಸ್ಯರು ಹಾಗೂ ಸಹಕಾರಿಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಮಂಗಳೂರು** : 75ನೇ ಸ್ವಾತಂತ್ರ್ಯ ಮಹೋತ್ಸವದ ಪ್ರಯುಕ್ತ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಮಂಗಳೂರು ಸೌಹಾರ್ದ ಸಹಕಾರಿ ಸಂಘ ನಿ., ಸಹಯೋಗದಿಂದ ಕೋವಿಡ್ ಲಸಿಕೆ ಉಚಿತ ಶಿಬಿರವನ್ನು ದಿನಾಂಕ 14.08.2022 ರಂದು ಶಾಂತಿನಗರ ಮಂಗಳೂರು ಸ್ಟೋರ್ ಬಳಿ ಸಹಕಾರಿ ಅಧ್ಯಕ್ಷರಾದ ಶ್ರೀ ಕೆ. ಭಾಸ್ಕರರಾವ್, ಮಾಜಿ ಕಾರ್ಪೋರೇಟ್ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಭಾರತೀ ಭಟ್, ಯೋಗೇಶ್ ಕುಮಾರ್ ಜಪ್ಪು, ಶ್ರೀ ಕೊರಗಪ್ಪ ವಿಕಾಶ ಕಾಲೇಜ್ ಟ್ರಸ್ಟ್, ಶ್ರೀ ಜಗದೀಶ್ ನೆಹರು, ಯುವ ಕೇಂದ್ರ ಅಧಿಕಾರಿ, ಕಲಾವತಿ ಗಣಪತಿ ಸಾವುಕೂರು, ಟಿ.ಕೆ ಸುಧೀರ್ ಇವರು ಉಪಸ್ಥಿತರಿದ್ದರು ಹಾಗೂ ಅವರನ್ನು ಸನ್ಮಾನಿಸಲಾಯಿತು.



ಶ್ರೀ ಆದಿನಾಥ ಪತ್ತಿನ ಸೌಹಾರ್ದ ಸಹಕಾರಿ ನಿ., ಬೆಳಗಾವಿ ಸಹಕಾರಿಯಲ್ಲಿ 75 ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆ.




ವೀರಶೈವ ಲಿಂಗಾಯತ ಜನೋಪಯೋಗಿ ಸೌಹಾರ್ದ ಸಹಕಾರಿ ನಿ., ಅರಕಲಗೂಡು ತಾ ಹಾಸನ. 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆ



ದಿನಾಂಕ 12.10.2022 ರಂದು 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಹಿನ್ನಲೆಯಲ್ಲಿ ಹರ್‌ಘರ್ ತಿರಂಗ ಅಭಿಯಾನದ ಭಾಗವಾಗಿ ದಾವಣಗೆರೆಯ ಜಂಗಮ ಸೌಹಾದ್ ಸಹಕಾರಿ ನಿ., ಇದರ ವತಿಯಿಂದ ಸಹಕಾರಿಯ ಸದಸ್ಯರಿಗೆ ತ್ರಿವರ್ಣ ಧ್ವಜವನ್ನು ವಿತರಿಸಿದರು. ಇದೇ ಸಂದರ್ಭದಲ್ಲಿ ಶ್ರೀ ಶಿವಯೋಗಿ ಸ್ವಾಮಿ, ಮಾಜಿ ಮುಖ್ಯ ಸಚೇತಕರು, ವಿಧನಪರಿಷತ್, ಕರ್ನಾಟಕ ಸರ್ಕಾರ, ಶ್ರೀ ನಟರಾಜ, ಜಿಲ್ಲಾ ಸಂಯೋಜಕರು, ದಾವಣಗೆರೆ, ಶ್ರೀ ಎನ್.ಎಮ್. ಬಸವರಾಜಯ್ಯ, ಅಧ್ಯಕ್ಷರು, ಜಂಗಮ ಸೌಹಾರ್ದ ಸಹಕಾರಿ ನಿ. ಆಡಳಿತ ಮಂಡಲಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



ಕೊಪ್ಪಳ : ಆಜಾದಿ ಕಾ ಅಮೃತ ಮಹೋತ್ಸವದ ಸಂದರ್ಭದಲ್ಲಿ ದಿನಾಂಕ : 15.08.2022 ರಂದು ಕೊಪ್ಪಳ ಜಿಲ್ಲೆಯ ಗಂಗಾವತಿ ನಗರದ ಶ್ರೀ ಚನ್ನಬಸವ ಸೌಹಾರ್ದ ಪತ್ತಿನ ಸಹಕಾರಿ ನಿ., ಶ್ರೀ ಗಂಗಾಧರೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ.,ಶ್ರೀ ಚನ್ನಬಸವೇಶ್ವರಸ್ವಾಮಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿ.,ದಿ ಗಂಗಾವತಿ ಸಮೃದ್ಧಿ ಪತ್ತಿನ ಸೌಹಾರ್ದ ಸಹಕಾರಿ ನಿ., ಮತ್ತು ಇತರೇ ಸಹಕಾರಿಗಳು 75ನೇ ಸ್ವಾತಂತ್ರೋತ್ಸವ ದಿನಾಚರಣೆಯನ್ನು ಧ್ವಜಾರೋಹಣದ ಮೂಲಕ ಆಚರಿಸಿದರು. ಈ ಸಂದರ್ಭದಲ್ಲಿ ಅನೇಕ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಆಡಳಿತ ಮಂಡಳಿಯ ಸದಸ್ಯರು ಮತ್ತು ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಮತ್ತು ಸಿಬ್ಬಂದಿಗಳು ಹಾಗು ಜಿಲ್ಲಾ ಸಂಯೋಜಕರಾದ ಪವನ ಉಪಸ್ಥಿತರಿದ್ದರು.



ಪಾಂಡವಪುರ ಗಾಣಿಗರ ಸೌಹಾರ್ದ ಸಹಕಾರಿ ನಿ., ಪಾಂಡವಪುರ, ಮಂಡ್ಯ ಜಿಲ್ಲೆ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆ




ಮಾರುತಿ ಸೌಹಾರ್ದ ಸಹಕಾರಿ ನಿ., ಬೆಳ್ಳೂರು ಕ್ರಾಸ್, ನಾಗಮಂಗಲ ತಾ., ಮಂಡ್ಯ ಜಿಲ್ಲೆ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆ




ಸಮೃದ್ಧಿ ಭಾರತೀನಗರ ಸೌಹಾರ್ದ ಸಹಕಾರಿ ನಿ., ಮದ್ದೂರು ತಾ, ಮಂಡ್ಯ ಜಿಲ್ಲೆ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆ



ಶ್ರೀ ಮಹದೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ., ಹಲಗೂರು, ಮಳವಳ್ಳಿ ತಾ. ಮಂಡ್ಯ ಜಿಲ್ಲೆ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆ




ನುಡಿಭಾರತಿ ಸೌಹಾರ್ದ ಸಹಕಾರಿ ನಿ., ಮಂಡ್ಯ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆ



ವಾಸವಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಕೊಳ್ಳೇಗಾಲ, ಚಾಮರಾಜನಗರ ಜಿಲ್ಲೆ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆ



ಮಂಡ್ಯ ಜಿಲ್ಲಾ ಶ್ರೀ ಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಮಂಡ್ಯ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆ



ಮರ್ಚೆಂಟ್ಸ್ ಸೌಹಾರ್ದ ಕ್ರೆಡಿಟ್ ಕೋ–ಆಪ್ ಲಿ., ಚಾಮರಾಜನಗರ ಜಿಲ್ಲೆ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆ



ಶ್ರೀ ಪಾರ್ವತಿ ಸೌಹಾರ್ದ ಸಹಕಾರಿ ನಿ., ಕುದೇರು, ಚಾಮರಾಜನಗರ ಜಿಲ್ಲೆ. 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆ




ಜೈ ಭೀಮ್ ಬಿಸಿನೆಸ್ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆ



ಶ್ರೀ ಅಕ್ಷಯಶ್ರೀ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ. 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆ



ಶ್ರೀ ಮುರಘರಾಜೇಂದ್ರಸ್ವಾಮಿ ಸೌಹಾರ್ದ ಸಹಕಾರಿ ನಿ., ಮರಿಯಾಲ, ಚಾಮರಾಜನಗರ ಜಿಲ್ಲೆ. 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆ



ವಿಶ್ವರೂಪ ವಿವಿದೋದ್ದೇಶ ಪತ್ತಿನ ಸೌಹಾರ್ದ ಸಹಕಾರಿ ನಿ., ಹಾಸನ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆ




ದಿನಾಂಕ: 14.08.2022ರಂದು ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿಯ 2021–22ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ನಡೆಯಿತು. ಸಹಕಾರಿಯು 2021–22ನೇ ಸಾಲಿನಲ್ಲಿ ರೂ. 13.15 ಲಕ್ಷ ಲಾಭಾಂಶ ಗಳಿಸಿದೆ. ಸಭೆಯ ಅಧ್ಯಕ್ಷತೆಯನ್ನು ಅಧ್ಯಕ್ಷರಾದ ಶ್ರೀ ಸಿ.ಪಿ ಪದ್ಮಪ್ರಸಾದ್ ಉದ್ಘಾಟಿಸಿದರು. ಸಭೆಯಲ್ಲಿ ಉಪಾಧ್ಯಕ್ಷರಾದ ಶ್ರೀ ಬಿ.ವಿ ವೆಂಕಟನಾಗಪ್ಪ ಶೆಟ್ಟಿ ರವರು ಮತ್ತು ಆಡಳಿತ ಮಂಡಲಿ ನಿರ್ದೇಶಕರು ಹಾಗೂ ಸಿಇಓ ಆದ ಬಿ.ಜಿ ಸಂಕೀರ್ತನ್ ಹಾಜರಿದ್ದರು.




ದಿನಾಂಕ 14.08.2022ರಂದು ಭಾನುವಾರ ದಂದು ಶ್ರೀ ವಾಸವಿ ವಿವಿದೋದ್ದೇಶ ಪತ್ತಿನ ಸೌಹಾರ್ದ ಸಹಕಾರಿಯ 13ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆ ಜರುಗಿತು.

# ರಾಜ್ಯದ ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆ



**ಹುಬ್ಬಳ್ಳಿ :** ಕುಂಭಕಲ್ಪ ಸೌಹಾರ್ದ ಸಹಕಾರಿ ನಿ., ಬಮ್ಮಾಪುರ ಓಣಿ, ಹುಬ್ಬಳ್ಳಿ ಇದರ 7ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ 07.08.2022 ರ ಭಾನುವಾರ ಮುಂಜಾನೆ 10-30ಘಂಟೆಗೆ "H D M C ನೌಕರರ ಸಹಕಾರಿ ಸಂಘದ ಸಭಾಭವನ", ಜೆ.ಸಿ.ನಗರ, ಹುಬ್ಬಳ್ಳಿಯಲ್ಲಿ ನಡೆಸಲಾಯಿತು.

ಈ ಮಹಾಸಭೆಗೆ ಅಧ್ಯಕ್ಷರಾದ ಶ್ರೀ ಕೆ.ಬಸವರಾಜಪ್ಪ, ಉಪಾಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಪಿ ಕುಂಬಾರ, ಎಲ್ಲ ಆಡಳಿತಮಂಡಳಿ ಸದಸ್ಯರು, ದಾವಣಗೆರೆ ವಿಶ್ವವಿದ್ಯಾಲಯದ ಉಪ ಕುಲಪತಿಗಳಾಗಿರುವ ಡಾ॥ ಬಿ.ಡಿ ಕುಂಬಾರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಮುಖ್ಯಕಾರ್ಯನಿರ್ವಾಹಕಾರದ ಶ್ರೀ ವಿನಾಯಕ ಮ ದೊಡ್ಡಪ್ಪನವರ, ಲೆಕ್ಕಪರಿಶೋಧಕರಾದ ಶ್ರೀ ಸಂಜೀವಕುಮಾರ ಹಾದಿಮನಿ, ಧಾರವಾಡ ಜಿಲ್ಲಾ ಸಂಯೋಜಕಾರದ ಶ್ರೀ ಕಲ್ಮೇಶ ಎಸ್.ಎಂ. ಮತ್ತು ಹಾಗೂ ಸಹಕಾರಿಯ ಸದಸ್ಯರು ಮತ್ತು ಸಮಾಜದ ಬಂಧುಗಳು ಉಪಸ್ಥಿತರಿದ್ದರು.

ಈ ಸಭೆಯಲ್ಲಿ ಸಹಕಾರಿಯ ವತಿಯಿಂದ ಮುಖ್ಯ ಅತಿಥಿಗಳಾದ ಮಾನ್ಯ ಉಪ ಕುಲಪತಿಗಳಾಗಿರುವ ಡಾ॥ ಬಿ.ಡಿ ಕುಂಬಾರ ರವರಿಗೆ ಸನ್ಮಾನಿಸಲಾಯಿತು. ಇದರೊಂದಿಗೆ 80 ವರ್ಷ ಮೇಲ್ಪಟ್ಟ ನಮ್ಮ ಸಹಕಾರಿಯ ನಿರ್ದೇಶಕರಾದ ಶ್ರೀ ಶಂಕ್ರಪ್ಪ ಬ ಬೇವಿನಮರದ ಮತ್ತು ಓರ್ವ ಸದಸ್ಯರಾದ ಶ್ರಿ ಮಲ್ಲೇಶಪ್ಪ ಕುಂಬಾರ ಇವರಿಗೆ ಸನ್ಮಾನಿಸಲಾಯಿತು.

ನಮ್ಮ ಕುಂಬಾರ ಸಮಾಜದ ಪ್ರತಿಭಾನ್ವಿತ ಮಕ್ಕಳಿಗೆ, ಇದೇ 2021-22 ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಯಲ್ಲಿ ಶೇ. 90% ಮತ್ತು ಪಿ.ಯು.ಸಿ. ಯಲ್ಲಿ ಶೇ 85% ಕ್ಕಿಂತಲೂ ಹೆಚ್ಚಿನ ಅಂಕಗಳಿಸಿರುವ ಹಾಗೂ ಶೇ 100ಕ್ಕೆ 100ರಷ್ಟು ಅಂಕ ಪಡೆದ ಕುಮಾರಿ॥ ಪಂಚಮಿ ಸಿ. ಶಿವಮೊಗ್ಗ, ಒಟ್ಟಾರೆ 50 ಜನ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಈ ಸಂದರ್ಭದಲ್ಲಿ ಮಾನ್ಯ ಉಪಕುಲಪತಿಗಳು ಸಭೆಯಲ್ಲಿ ಮಾತನಾಡುತ್ತ ವಿದ್ಯಾರ್ಥಿಗಳು ಹೆಚ್ಚು ಅಂಕವನ್ನು ಪಡೆಯುವುದರ ಜೊತೆಗೆ ತಂದೆ-ತಾಯಿ, ಗುರುಹಿರಿಯರನ್ನು ಗೌರವಿಸುವ ಶಿಕ್ಷಣ ಮತ್ತು ಸಂಸ್ಕಾರವನ್ನು ಬದುಕಿನ ಮೂಲ ಮಂತ್ರವನ್ನಾಗಿಸಿಕೊಂಡು ಸಮಾಜಮುಖಿಯಾಗಿ ಕಾರ್ಯ ನಿರ್ವಹಿಸಬೇಕೆಂದು ಹೇಳಿದರು.




**ಸಿಂಧನೂರು :** ಶ್ರೀ ಸಾಯಿ ಚನ್ನಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿಯ 12ನೇ ವಾರ್ಷಿಕ ಸಾಮಾನ್ಯಸಭೆಯಲ್ಲಿ ಷೇರುದಾರರಿಗೆ, ಗ್ರಾಹಕರಿಗೆ ಗುಣಮಟ್ಟದ ಸೇವೆ ನೀಡುವ ಸಂಕಲ್ಪ ನಮ್ಮದಾಗಿದೆ ಎಂದು ಶ್ರೀ ಸಾಯಿ ಚನ್ನಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷ ಎಂ.ಲೋಕನಗೌಡ ಹೇಳಿದರು.

ನಗರದ ಖಾಸಗಿ ಹೋಟೇಲ್‌ನಲ್ಲಿ ರವಿವಾರ ಶ್ರೀ ಸಾಯಿ ಚನ್ನಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿಯ 12ನೇ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಎಲ್ಲರ ಸಹಕಾರದಿಂದ ಸಹಕಾರಿಯು ನಿರೀಕ್ಷೆಗೂ ಮೀರಿ ಬೆಳವಣಿಗೆಯಾಗಿದೆ. ಪ್ರಸಕ್ತ ವರ್ಷ ಸಹಕಾರಿಯು 98.42 ಲಕ್ಷ ರೂ.ಗಳ ನಿವ್ವಳ ಲಾಭ ಗಳಿಸಿದೆ. ಸದಸ್ಯರಿಗೆ ಶೇ.20 ರಷ್ಟು ಲಾಭಾಂಶ ನೀಡಲು ನಿರ್ಧರಿಸಲಾಗಿದೆ. ಗ್ರಾಹಕ-ರಿಗೆ ಸಾಲ ಸೌಲಭ್ಯದ ಜೊತೆಗೆ ಇತರ ಸೇವೆಗಳನ್ನು ನೀಡುವ ಗುರಿ ಹೊಂದಿದ್ದೇವೆ ಎಂದರು.

ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿಯ ಮುಖ್ಯಕಾರ್ಯನಿರ್ವಹಣಾಧಿಕಾರಿ ಪಂಪನಗೌಡ ಮಲ್ಲಾಪುರ ಮಾತನಾಡಿ, ಬಡ, ಮಧ್ಯಮ ವರ್ಗ ಜನರ ಆರ್ಥಿಕ ಪ್ರಗತಿಗೆ ಸಹಕಾರಿಗಳ ಮಾತ್ರ ದೊಡ್ಡದಿದೆ. ಸಹಕಾರಿಗಳ ಬೆಳವಣಿಗೆಗೆ ಆಡಳಿತ ಮಂಡಳಿ ಪಾತ್ರ ದೊಡ್ಡದಿದೆ. ಸಾಲ ಪಡೆದವರು ಸಕಾಲದಲ್ಲಿ ಮರು ಪಾವತಿ ಮಾಡುವದು ಅಗತ್ಯವಿದೆ. ಸಹಕಾರಿಯು ಅತ್ಯಂತ ವೇಗವಾಗಿ ಬೆಳೆಯುತ್ತಿದ್ದು, ಗ್ರಾಹಕರಿಗೆ, ಷೇರುದಾರರಿಗೆ ಹೊಸ ಹೊಸ ಸೇವೆಗಳನ್ನು ನೀಡಲು ಮುಂದಾಗಬೇಕು ಎಂದು ಸಲಹೆ ನೀಡಿದರು.

ಸಹಕಾರಿಯ ಉಪಾಧ್ಯಕ್ಷ ಎಂ.ಆರ್.ಪ್ರಾಣೇಶ, ನಿರ್ದೇಶಕರಾದ ಸೂಗೂರಯ್ಯ ಸ್ವಾಮಿ, ಹೆಚ್.ಕಲ್ಯಾಣಪ್ಪ, ಆರ್.ಪಂಪಾಪತಿ ಪಾಟೀಲ್, ಕೆ.ಶರಣಬಸವ ವಕೀಲರು, ಎಂ.ಸರ್ವೋತ್ತಮ ರೆಡ್ಡಿ ಪಾಟೀಲ್, ರಂಗಮ್ಮ, ಸುನಂದ, ಕಾನೂನು ಸಲಹೆಗಾರ ಬಸವನಗೌಡ, ಲೆಕ್ಕ ಪರಿಶೋಧಕ ಕೆ.ನಾಗನಗೌಡ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಿ.ಬಸವರಾಜ, ಸಹಾಯಕ ವ್ಯವಸ್ಥಾಪಕ ಎನ್.ಬಸವರಾಜ ಅಲಬನೂರು ಸೇರಿದಂತೆ ಅನೇಕರು ಇದ್ದರು.



**ದಾವಣಗೆರೆ :** ಆ.21–ನಗರದ ಸನ್ಮತಿ ಸೌಹಾರ್ದ ಸಹಕಾರಿ ಸಂಘ ನಿಯಮಿತದ 2021–22ನೇ ಸಾಲಿನ ನಾಲ್ಕನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯು ರೋಟರಿ ಬಾಲ ಭವನದಲ್ಲಿ ನೆಡೆಯಿತು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಹಕಾರಿಯ ಅಧ್ಯಕ್ಷ ಟಿ.ಎಂ.ಪಾಲಾಕ್ಷ ಮತ್ತು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದಂತಹ ಎಂ.ಆರ್ ಪ್ರಭುದೇವ್ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.., ಬೆಂಗಳೂರು ಮತ್ತು ಜಿ.ಎಂ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ., ದಾವಣಗೆರೆ. ಹಾಗೂ ದಾವಣಗೆರೆಯ ಮಹಾನಗರ ಪಾಲಿಕೆಯ ಮಹಾಪೌರರು ಆದ ಶ್ರೀಮತಿ ಜಯಮ್ಮ ಗೋಪಿನಾಯ್ಕ್ ರವರು ಮತ್ತು ಸಹಕಾರಿಯ ನಿರ್ದೇಶಕ ಮಂಡಳಿಯವರು ಸಭೆಯಲ್ಲಿ ಉಪಸ್ಥಿತರಿದ್ದು ದೀಪ ಬೆಳಗಿಸುವ ಮೂಲಕ ಸಭೆಯನ್ನು ಉದ್ಘಾಟಿಸಿದರು

ಸಹಕಾರಿಯು 31/03/2022ಕ್ಕೆ 23.33 ಲಕ್ಷ ರೂ. ಷೇರು ಬಂಡವಾಳ ಹೊಂದಿದ್ದು, ನಿಧಿಗಳು 25,71 ಲಕ್ಷ ರೂ. ಆಗಿದ್ದು, 3 ಕೋಟಿ ರೂ, ಠೇವಣಿ ಸಂಗ್ರಹಿಸಲಾಗಿದೆ. 2,56 ಕೋಟಿ ರೂ. ಸಾಲ ಮತ್ತು ಮುಂಗಡಗಳಾಗಿದ್ದು, 3,54 ಕೋಟಿ ರೂ. ದುಡಿಯುವ ಬಂಡವಾಳವಿದ್ದು. 8.73 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ ಎಂದು ತಿಳಿಸಿ ಕೇವಲ ಐದು ವರ್ಷಗಳಲ್ಲಿ ಸೌಹಾರ್ದ ಸಹಕಾರಿ ಅಭಿವೃದ್ಧಿ ಪತದಲ್ಲಿ ಮುನ್ನಡೆಯುತಿದೆ ಎಂದು ಅಧ್ಯಕ್ಷ ಟಿ.ಎಂ. ಪಾಲಾಕ್ಷ ಅವರು ಸಂತಸ ವ್ಯಕ್ತಪಡಿಸಿದರು. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಠೇವಣಿ ಸಂಗ್ರಹಿಸಿ, ಹೆಚ್ಚಿನ ಸಾಲ ಸೌಲಭ್ಯವನ್ನು ಸದಸ್ಯರಿಗೆ ಕಲ್ಪಿಸಲು ತೀಮಾ9ನಿಸಲಾಗಿದೆ ಎಂದು ಹೇಳಿದರು.

2021–2022ನೇ ಸಾಲಿನಲ್ಲಿ ದ ಅವರು, ಉತ್ತಮ ಸೇವಾ ಯೋಜನೆಗಳನ್ನು ಜಾರಿಗೊಳಿಸಿ ಸದಸ್ಯ ಗ್ರಾಹಕರಿಗೆ ಅನುಕೂಲ ಮಾಡಿಕೊಡಲಾಗುವುದು ಎಂದುರು.

ವಾರ್ಷಿಕ ಮಹಾಸಭೆಯ ನಡುವಳಿಕೆಯನ್ನು ಅಕೌಟೇಂಟ್ ಎನ್.ಪಿ.ಹರೀಶ ಓದಿದರು. ಆಢಾವೆ ಪತ್ರವನ್ನು ಉಪಾದ್ಯಕ್ಷರಾದ ವಿ.ಹೆಚ್. ಕುಮಾರ್ ಮತ್ತು ಲಾಭ ನಷ್ಟದ ತಃಖ್ತೆ ಮತ್ತು ಬಜೆಟ್ಟನ್ನು ನಿರ್ದೇಶಕ ನ್ಯಾಮತಿ ವಾಮದೇವ್ ಓದಿ ಅನುಮೋದನೆ ಪಡೆದರು.



ಆರ್.ಡಿ.ಸೋನಿ ವಿವಿದ್ದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ ವತಿಯಿಂದ ರೋಟರಿ ಶಾಲೆಯಲ್ಲಿ ನಿರ್ಗತಿಕರು ಹಾಗೂ ಬಡಮಕ್ಕಳಿಗೆ ಸಹಕಾರಿಯ ಅಧ್ಯಕ್ಷರಾದ ಶ್ರೀ ರಾಘವೇಂದ್ರ ಸೋನಿ ಇವರ ಮಗನಾದ ಆದಿತ್ಯ ಸೋನಿರವರು ಉಚಿತವಾಗಿ ಪುಸ್ತಕಗಳೂ, ಬ್ಯಾಗ್‌ಗಳು, ಪೆನ್ಸ್, ರಬ್ಬರ್, ಪೆನ್ಸಿಲ್ ಹಾಗೂ ಇನ್ನು ವಿಧ್ಯಾರ್ಥಿಗಳಿಗೆ ಅವಶ್ಯಕವಾದ ಸಾಮಾಗ್ರಿಗಳನ್ನು ವಿತರಿಸಲಾಯಿತು.

ಸಹಕಾರಿಯ ಸ್ಥಾಪನ ಅಧ್ಯಕ್ಷರಾದ ಶ್ರೀ ದೇವೇಂದ್ರ ಕುಮಾರ್ ಸೋನಿಯವರ ಜನುಮ ದಿನದ ಪ್ರಯುಕ್ತ ದಿನಾಂಕ 25–7–2022 ಸಹಕಾರಿಯಲ್ಲಿ ಎಲ್ಲಾ ಸಿಬ್ಬಂಧಿಗಳಿಗೆ ಸಮವಸ್ತ್ರವನ್ನು ಪ್ರಾರಂಭಿಸಲಾಯಿತು. ವಿಜಯನಗರ ಜಿಲ್ಲೆಯಲ್ಲೇ ಪ್ರಪ್ರಥಮ ಬಾರಿಗೆ ಸಿಬ್ಬಂದಿಗಳಿಗೆ ಸಮವಸ್ತ್ರವನ್ನು ಪ್ರಾರಂಭಿಸಿದ ಮೊದಲ ಸಹಕಾರಿಯಾಗಿದೆ.



ಹೊಸದುರ್ಗ : ದಿನಾಂಕ 22.08.2022 ರಂದು ಹೊಸದುರ್ಗ ನಗರದಲ್ಲಿರುವ ನಿಸರ್ಗ ಸ್ವ–ಶಕ್ತಿ ಸೌಹಾರ್ದ ಸಹಕಾರಿ ನಿ., ಸಹಕಾರಿಯ 19ನೇ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಸಭಾಂಗಣದಲ್ಲಿ ಜರುಗಿತು. ಸಭೆಯಲ್ಲಿ ಚಿತ್ರದುರ್ಗ ಜಿಲ್ಲೆಯ ನಿರ್ದೇಶಕರಾದ ಶ್ರೀ ರಘುರಾಮರೆಡ್ಡಿ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಸಹಕಾರಿ ಸದಸ್ಯರ ಕರ್ತವ್ಯ ಮತ್ತು ಜವಬ್ದಾರಿಗಳ ಬಗ್ಗೆ ಮಾಹಿತಿ ನೀಡಿದರು. ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ರವರು ಉಪವಿಧಿ ತಿದ್ದುಪಡಿ ಬಗ್ಗೆ ಮಾಹಿತಿ ನೀಡಿದರು. ಸಭೆಯಲ್ಲಿ ಸಹಕಾರ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರಮೇಶ್ ರವರು, ನಿರೀಕ್ಷಕರಾದ ಶ್ರೀ ರಾಮು ರವರು, ಡಿ.ಸಿ.ಸಿ ಬ್ಯಾಂಕಿನ ವ್ಯವಸ್ಥಾಪಕರಾದ ಶ್ರೀ ಬಸವರಾಜ್ ರವರು ಉಪಸ್ಥಿತರಿದ್ದರು.



**ಕಲಬುರಗಿ** : 15.08.2022 ರಂದು ಶ್ರೀ ಸುವರ್ಣ ಲಕ್ಷ್ಮೀ ಸೌಹಾರ್ದ ಸಹಕಾರಿ ಸಂಘ ನಿ., ಕಲಬುರಗಿ ಇದರ ಉದ್ಘಾಟನೆಯನ್ನು ಶ್ರೀ ಡಾ. ಚಂದ್ರಶೇಖರ ಪಾಟೀಲ ಮಾನ್ಯ ವಿಧಾನ ಪರಿಷತ್ ಸದಸ್ಯರು,ಇವರು ನೇರವೇ–ರಿಸಿದರು.

ಸಾನಿದ್ಯ ಶ್ರೀ ಜಗದ್ಗುರು ಡಾ. ಸಾರಂಗಧರ ದೇಶಿಕೇಂದ್ರ ಮಹಾಸ್ವಾಮಿಗಳು, ಶ್ರೀಶೈಲಂ ವಹಿಸಿದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿರವರು ಮತ್ತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು ಶ್ರೀ ರಾಜಶೇಖರ ಹೆಚ್ ರವರು ಹಾಗೂ ಕಾನೂನು ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರವರು ಮತ್ತು ಲಿಂಗರಾಜ ಎಸ್ ಪಾಟೀಲ ರವರು ಭಾಗವಹಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿಯ ನಿರ್ದೇಶಕರು ಹಾಗೂ ಸದಸ್ಯರು ಉಪಸ್ಥಿತರಿದ್ದರು.



**ಶಿವಮೊಗ್ಗ** : ದಿನಾಂಕ 01.08.2022 ರಂದು ಪ್ರಾಥಮಿಕ ಶಾಲಾ ಶಿಕ್ಷಕರ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ ಇದರ ಟಿ.ಎಸ್.ಟಿ ಹೈಪರ ಮಾರ್ಕೆಟನ್ನು ಉದ್ಘಾಟಿಸಲಾಯಿತು. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಶ್ರೀ ಅವದೂತ ವಿನಯ ಗುರೂಜಿ ರವರು ವಹಿಸಿದ್ದರು. ಉದ್ಘಾಟಕರಾಗಿ ಶ್ರೀಯುತ ಅರಗ ಜ್ಞಾನೇಂದ್ರ ರವರು, ಗೃಹ ಸಚಿವರು, ಕರ್ನಾಟಕ ಸರ್ಕಾರ ಇವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಕಿಮ್ಮನೆ ರತ್ನಾಕರ, ಮಾಜಿ ಸಚಿವರು, ಶ್ರೀಯುತ ಮಂಜುನಾಥ ಗೌಡ್ರು, ಮಾಜಿ ಅಧ್ಯಕ್ಷರು ಅಪೆಕ್ಸ್ ಬ್ಯಾಂಕ್, ಶ್ರೀ ಎ.ಆರ್. ಪ್ರಸನ್ನ ಕುಮಾರ್, ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ,. ಬೆಂಗಳೂರು, ಶ್ರೀ ಚನ್ನವೀರಪ್ಪ, ಅಧ್ಯಕ್ಷರು, ಡಿಸಿಸಿ ಬ್ಯಾಂಕ್, ಶಿವಮೊಗ್ಗ, ಶ್ರೀ ವಿಜಯದೇವ್, ನಿರ್ದೇಶಕರು ಅಪೆಕ್ಸ್ ಬ್ಯಾಂಕ್, ಶ್ರೀ ಶಬನಮ್, ಅಧ್ಯಕ್ಷರು, ಪಟ್ಟಣ ಪಂಚಾಯತಿ, ತೀರ್ಥಹಳ್ಳಿ ಇವರುಗಳು ಭಾಗವಹಿಸಿದ್ದರು. ಶ್ರೀ ಮಹಾಬಲೇಶ್ವರ ಹೆಗಡೆ, ಅಧ್ಯಕ್ಷರು, ಪ್ರಾಥಮಿಕ ಶಾಲಾ ಶಿಕ್ಷಕರ ಸೌಹಾರ್ದ ಸಹಕಾರಿ ನಿ, ಶಿವಮೊಗ್ಗ ಜಿಲ್ಲಾ ಸಂಯೋಜ–ಕರಾದ ಶ್ರೀ ಶಶಿಕುಮಾರ್ ಇವರುಗಳು ಉಪಸ್ಥಿತರಿದ್ದರು.



ಶಿವಮೊಗ್ಗ : ದಿನಾಂಕ 05.08.2022 ರಂದು ತುಂಗ ಸೃಷ್ಠಿ ಸೌಹಾರ್ದ ಸಹಕಾರಿ ಸಂಘ ನಿ., ಶಿವಮೊಗ್ಗ ಜಿಲ್ಲೆ ನೂತನ ಸಹಕಾರಿಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಶಿವಮೊಗ್ಗ ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ಎಸ್. ಇವರು ಹಾಗೂ ಸಮೃದ್ಧ ಸೌಹಾರ್ದ ಸಹಕಾರಿ ನಿ, ಶಿವಮೊಗ್ಗ ಇದರ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ರಾಜಶೇಖರ್ ಇವರು ಭಾಗವಹಿಸಿದ್ದರು. ಸದರಿ ನೂತನ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರು ಉಪಸ್ಥಿತರಿದ್ದರು.



ದಿನಾಂಕ 20.08.2022 ರಂದು ಸಮೃದ್ಧ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ ಸಹಕಾರಿಯ 19ನೇ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಆವರಣದಲ್ಲಿ ಜರುಗಿತು. ಜಿಲ್ಲಾ ಸಂಯೋಜ–ಕರಾದ ಶ್ರೀ ಶಶಿಕುಮಾರ್ ಎಸ್. ರವರು ಭಾಗವಹಿಸಿ ಸಹಕಾರಿ ಸದಸ್ಯರ ಕರ್ತವ್ಯ ಮತ್ತು ಜವಬ್ದಾರಿಗಳ ಬಗ್ಗೆ ಮಾಹಿತಿ ನೀಡಿದರು.



**ಶಿವಮೊಗ್ಗ** : ಶ್ರೀ ಮಹಾದೇಶ್ವರ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಇಂದಿರಾನಗರ, ಶಿವಮೊಗ್ಗ ಇದರ ಸಾಮಾನ್ಯ ಸಭೆಯು ದಿನಾಂಕ 06.08.2022 ರಂದು ಜರುಗಿತು. ಸಾಮಾನ್ಯ ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್, ಪ್ರಸನ್ನಕುಮಾರ್, ಇವರು ನೆರವೇರಿಸಿದರು. ಸಭೆಯ ಮುಖ್ಯ ಅತಿಥಿಗಳಾಗಿ ಸಾಮಾಜಿಕ ಕಾರ್ಯಕರ್ತರಾದ ಶ್ರೀ ಪಟ್ಟಾಭಿರಾಮ್ ಇವರು ಭಾಗವಹಿಸಿದ್ದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ಅಯ್ಯಪ್ಪ ಇವರು ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ಎಸ್, ಇವರು ಭಾಗವಹಿಸಿದ್ದರು. ಸಹಕಾರಿಯ ಆಡಳಿತ ಮಂಡಳಿ ವತಿಯಿಂದ ಸಂಯುಕ್ತ ಸಹಕಾರಿಗೆ ನೂತನ ಉಪಾಧ್ಯಕ್ಷರಾಗಿ ಆಯ್ಕೆಯಾದ ಶ್ರೀ ಎ.ಆರ್, ಪ್ರಸನ್ನಕುಮಾರ್, ಇವರಿಗೆ ಅಭಿನಂದನೆಗಳನ್ನು ಸಲ್ಲಿಸಿದರು.



**ದಾವಣಗೆರೆ** : ದಿನಾಂಕ 20.08.2022 ರಂದು ದಾವಣಗೆರೆಯ ಪಂಜುರ್ಲಿ ಸಭಾಂಗಣ, ದಾವಣಗೆರೆ ಜಿಲ್ಲಾ ಸೌಹಾರ್ದ ಒಕ್ಕೂಟ, ಜಿಲ್ಲೆಯ ಸೌಹಾರ್ದ ಸಹಕಾರಿಗಳು, ಹಾಗೂ ಸಹಕಾರ ಭಾರತಿ, ದಾವಣಗೆರೆ ಜಿಲ್ಲೆ ಇವರ ವತಿಯಿಂದ ಸಂಯುಕ್ತ ಸಹಕಾರಿಯ ನೂತನ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರುಗಳಿಗೆ ಅಭಿನಂದನಾ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಸದರಿ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರಿ ಜಿ. ನಂಜನಗೌಡ ರವರು, ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ್ ರವರು, ನಿಕಟಪೂರ್ವ ಅಧ್ಯಕ್ಷರು ಹಾಗೂ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು,, ನಿರ್ದೇಶಕರುಗಳಾದ ಶ್ರೀ ಬಿ.ಎಸ್. ಗುಂಡೂರಾವ್ ರವರು, ಶ್ರೀ ಎಂ.ಆರ್. ಪ್ರಭುದೇವ್ ರವರು, ಶ್ರೀ ರಘುರಾಮರೆಡ್ಡಿ ರವರು, ಶ್ರೀ ವಿಜಯ ಸಿ.ಪಿ ರವರು, ಒಕ್ಕೂಟದ ಅಧ್ಯಕ್ಷರಾದ ಶ್ರೀ ಹೆಚ್.ಎಮ್ ನಾಗರಾಜ್ ರವರು, ಉಪಾಧ್ಯಕ್ಷರಾದ ಶ್ರೀ ಉಮೇಶ್ ಶೆಟ್ಟಿ ರವರು, ಸಹಕಾರ ಭಾರತಿಯ ಜಿ.ಎನ್ ಸ್ವಾಮಿ ರವರು, ಜಿಲ್ಲಾ ಸಂಯೋಜ–ಕರಾದ ಶ್ರೀ ನಟರಾಜ ರವರು, ಜಿಲ್ಲೆಯ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ದಾವಣಗೆರೆ ಜಿಲ್ಲಾ ಸೌಹಾರ್ದ ಒಕ್ಕೂಟ, ಜಿ.ಎಂ ಸೌಹಾರ್ದ ಸಹಕಾರಿ ನಿ., ದಿ ಇಂಡಿಯನ್ನ ಸೌಹಾರ್ದ ಸಹಕಾರಿ ನಿ., ಜಂಗಮ ಸೌಹಾರ್ದ ಸಹಕಾರಿ ನಿ, ದೇವನಗಿರಿ ಸೌಹಾರ್ದ ಸಹಕಾರಿ ನಿ, ಈ ಸಂಸ್ಥೆಗಳ ವತಿಯಿಂದ ಸಂಯುಕ್ತ ಸಹಕಾರಿಯ ನೂತನ ಅಧ್ಯಕ್ಷರು, ಉಪಾಧ್ಯಕ್ಷರು ಹಾಗು ನಿರ್ದೇಶಕರುಗಳಿಗೆ, ಒಕ್ಕೂಟದ ಪದಾಧಿಕಾರಿಗಳಿಗೆ, ಸಹಕಾರ ಭಾರತಿಯ ಪದಾಧಿಕಾರಿಗಳಿಗೆ ಸನ್ಮಾನಿಸಲಾಯಿತು.



**ದಾವಣಗೆರೆ** : ದಿನಾಂಕ 26.08.2022 ರಂದು ಜಿಲ್ಲಾ ಸಂಯೋಜ–ಕರಾದ ಶ್ರೀ ನಟರಾಜ ರವರು ಚನ್ನಪ್ಪ ಸ್ವಾಮಿ ಸೌಹಾರ್ದ ಸಹಕಾರಿ ನಿ,. ಹೊನ್ನಾಳಿ ತಾಲೂಕು, ದಾವಣಗೆರೆ ಜಿಲ್ಲೆ ಈ ಸಹಕಾರಿಯ ಅಧ್ಯಕ್ಷರು ಹಾಗೂ ಹೊನ್ನಾಳಿ ಹಿರೇಕಲ್ಮಠದ ಪೂಜ್ಯ ಗುರುಗಳಾದ ಶ್ರೀ ಷ. ಬ್ರ. ಡಾ. ಒಡೆಯರ್ ಚೆನ್ನಮಲ್ಲಿಕಾರ್ಜುನ ಶಿವಚಾರ್ಯರವರನ್ನು ಭೇಟಿ ಮಾಡಿ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಚರ್ಚಿಸಿದರು.



**ಕಾರ್ಕಳ** : ಕೊಂಕಣ್ ಕ್ಯಾಥೊಲಿಕ್ ವಿವಿಧೋದ್ಧೇಶ ಸೌಹಾರ್ದ ಸಹಕಾರಿ ಸಂಘ ಕಾರ್ಕಳ ಇದರ 9ನೇ ವಾರ್ಷಿಕ ಮಹಾಸಭೆ ಕಾರ್ಕಳ ಕ್ರೈಸ್ಟ್ ಕಿಂಗ್ ಚರ್ಚ್ ಸಭಾಭವನದಲ್ಲಿ ನಡೆಯಿತು. ಸಂಘದ ಅಧ್ಯಕ್ಷರಾದ ಡಾ ಪೀಟರ್ ಫೆರ್ನಾಂಡಿಸ್ ಸಭೆಯ ಅಧ್ಯಕ್ಷತೆ ವಹಿಸಿದರು. ನಮ್ಮ ಸಂಸ್ಥೆಯ ಕಾರ್ಯವ್ಯಾಪ್ತಿಯನ್ನು ಉಡುಪಿ ಜಿಲ್ಲೆ ಮತ್ತು ದ.ಕ ಜಿಲ್ಲೆಗೆ ವಿಸ್ತರಿಸುವ ಬಗ್ಗೆ ಚಿಂತಿಸಲಾಗಿದೆ, ಕಳೆದ ಸಾಲಿನಲ್ಲಿ 34 ಕೋಟಿ ವ್ಯವಹಾರ ಮಾಡಿದೆ ಎಂದು ಅಧ್ಯಕ್ಷರು ತಿಳಿಸಿದರು. ಸದಸ್ಯರಿಗೆ ಶೇ 8 ಡಿವಿಡೆಂಡ್ ನೀಡುವುದಾಗಿ ಘೋಷಿಸಿದರು. ಸಹಕಾರಿಯ ಎಲ್ಲಾ ನಿರ್ದೇಶಕರು ಸಭೆಗೆ ಹಾಜರಿದ್ದರು.



**ಕೊಪ್ಪಳ :** ಸೌಭಾಗ್ಯಲಕ್ಷ್ಮೀ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಇದರ 2021–22 ನೇ ಸಾಲಿನ 10ನೇ ವಾರ್ಷಿಕ ಮಹಾ ಸಭೆಯು ದಿನಾಂಕ : 14–08–2022 ರಂದು ರವಿವಾರ ಬೆಳಗ್ಗೆ 10:30 ಗಂಟೆಗೆ ಸಹಕಾರಿಯ ಕಟ್ಟಡದ " ಸೌಭಾಗ್ಯಲಕ್ಷ್ಮೀ ಸಂಕೀರ್ಣದಲ್ಲಿ" ನೆರವೇ–ರಿಸಲಾಯಿತು. ಸಭೆಗೆ ಆಗಮಿಸಿದ ಎಲ್ಲಾ ಸದಸ್ಯರನ್ನು ಸಹಕಾರಿಯ ಉಪಾಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಸಿ.ಸುಂಕದರವರು ಹೃತಪೂರ್ವಕವಾಗಿ ಸ್ವಾಗತಿಸಿದರು, ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಪ್ರಾಣೇಶರಾವ್ ಎಲ್. ದೇಸಾಯಿಯವರು ಸುದೀರ್ಘವಾಗಿ ವಾರ್ಷಿಕ ವರದಿಯನ್ನು ಮಂಡಿಸಿದರು.ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಚಂದ್ರಶೇಖರ ಮುದ್ದಾಪೂರ ನೋಟಿಸನಲ್ಲಿನ ಎಲ್ಲಾ ವಿಷಯಗಳನ್ನು ಪ್ರಸ್ತಾಪಿಸಿದರು. ಸಭೆಯು ಕೂಲಂಕುಷವಾಗಿ ಚರ್ಚಿಸಿ ಅನುಮೋದನೆ ನೀಡಿತು. ಸಹಕಾ–ರಿಯ ನಿರ್ದೇಶಕರಾದ ಶ್ರೀಮತಿ ಶಿಲ್ಪಾ.ಸಿ.ತಾಲೇಡಾ ರವರು ಸಾಮಾನ್ಯ ಸಭೆಯನ್ನು ಯಶ್ವಸಿಗೊಳಿಸಿದ ಎಲ್ಲಾ ಸದಸ್ಯರಿಗೂ, ಸಿಬ್ಬಂದಿಯವರಿಗೆ, ಪಿಗ್ಮಿ ಸಂಗ್ರಾಹಕರಿಗೆ, ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕಾರ ನೀಡಿದ ಎಲ್ಲಾ ಮಹನೀಯರಿಗೆ ವಂದನೆ ಸಲ್ಲಿಸಿದರು.



ದಿನಾಂಕ 26.08.2022 ರಂದು ತುಮಕೂರು ಜಿಲ್ಲಾ ಸಂಪರ್ಕ ಕಚೇರಿಯಲ್ಲಿ ಸಂಯುಕ್ತ ಸಹಕಾರಿಯ ತುಮಕೂರು ಜಿಲ್ಲಾ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರ ಅಧ್ಯಕ್ಷತೆಯಲ್ಲಿ ತುಮಕೂರು ನವನಿಧಿ ಸೌಹಾರ್ದ ಸಹಕಾರಿ ನಿ., ಸಹಕಾರಿಯ ಆಡಳಿತ ಮಂಡಲಿಯ ಸಭೆ ಕರೆದು ಸಹಕಾರಿಯ ಆಡಳಿತ ಮಂಡಲಿ ಸದಸ್ಯರಲ್ಲಿ ಉಂಟಾಗಿರುವ ಸಮಸ್ಯೆಗಳ ಕುರಿತು ಚರ್ಚಿಸಿ ಸೌಹಾರ್ದ ಕಾಯ್ದೆಯ ನಿಯಮಾನುಸಾರ ಕಾರ್ಯನಿರ್ವಹಿಸುವಂತೆ ಸೂಚಿಸಿದರು. ಇದೇ ಸಂದರ್ಭದಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್ ರವರು ಉಪಸ್ಥಿತರಿದ್ದರು.



**ಕಾರವಾರ :** ಸೈಂಟ್ ಮಿಲಾಗ್ರಿಸ್‌ಕ್ರೆಡಿಟ್ ಸೌಹಾರ್ದಕೋ–ಆಪರೇಟಿವ್ ಸೊಸೈಟಿಲಿ., ಕಾರವಾರ ಸಹಕಾರಿಯ 75ನೇ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಸಂಭ್ರಮವಾಗಿದ್ದು ನಮ್ಮ ಜೀವನದ ಇಷ್ಟು ದಿನಗಳ ಬಹು ದೊಡ್ಡ ಕ್ಷಣ ಹಾಗೂ ಭಾರತಮಾತೆಯ ಮಕ್ಕಳಾದ ನಮಗೆಲ್ಲರಿಗೂ ಒಂದು ಹೆಮ್ಮೆಯ ದಿನ. ಆದಕಾರಣ, ಸೈಂಟ್ ಮಿಲಗ್ರೀಸ್ ಸಹಕಾರಿಯ ವತಿಯಿಂದ ಅನಾಥಾಶ್ರಮ, ಬುದ್ದಿಮಾಂದ್ಯ ಹಾಗೂ ವಿಕಲ ಚೇತನರಿಗೆ ಅಗತ್ಯ ವಸ್ತುಗಳ ವಿತರಣೆಯು ಪ್ರತೀ ವರ್ಷದಂತೆ ಸಹಕಾರಿಯು ಕಾರ್ಯ ನಿರ್ವಹಿಸುತ್ತಿರುವ 9 ಜಿಲ್ಲೆಗಳ 111 ಶಾಖೆಗಳಿಂದ ವಸತಿ ಇರುವ 38 ಫಲಾನುಭವಿ ಸಂಸ್ಥೆಗಳನ್ನು ಆಯ್ದು ಒಟ್ಟೂ , ಸರಿ ಸುಮಾರು ಮೂರು ಸಾವಿರ ಫಲಾನುಭವಿ ಮಕ್ಕಳಿಗೆ ಸೊಲ್ಲಾಪುರ ಚಾದರ, ಲಘು ಉಪಹಾರವನ್ನು ಸಾತಂತ್ರ್ಯೋತ್ಸವದ ಅಂಗವಾಗಿ ನೀಡಲಾಯಿತು. ಈ ಕಾರ್ಯಕ್ರಮವನ್ನು ಉತ್ತರ ಕನ್ನಡ ಜಿಲ್ಲೆಯ, ಕಾರವಾರದ ಹೆಮ್ಮೆಯ ಶಾಸಕಿಯೆಂದೇ ಹೆಸರು ಮಾಡಿರುವ ಶ್ರೀಮತಿ. ರೂಪಾಲಿ ನಾಯ್ಕ, ಶಾಸಕರು ಕರ್ನಾಟಕ ವಿಧಾನಸಭೆ ಹಾಗೂ ಶ್ರೀ. ಗಣಪತಿ ಉಳ್ವೇಕರ್, ಸದಸ್ಯರು ಕರ್ನಾಟಕ ವಿಧಾಸಭಾ ಪರಿಷತ್ ಹಾಗೂ ಇತರೇ ಗಣ್ಯರೆಲ್ಲರೂ ಕಾರ್ಯಕ್ರಮ ಉದ್ಘಾಟಿಸುವ ಮೂಲಕ ಸಹಕಾರಿಯ ಈ ಒಂದು ಉದಾತ್ತ ಸೇವೆಗೆ ಸಾಕ್ಷಿಯಾದರು.

ಈ ವರ್ಷದ ಸ್ವಾತಂತ್ರ್ಯೋತ್ಸವವು 75ನೇ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ಮಾನ್ಯ ಕೇಂದ್ರ ಸರ್ಕಾರದ ಹರ್ ಘರ್ ತಿರಂಗಾ ಅಭಿಯಾನಕ್ಕೆ ಪೂರಕವಾಗಿ ಸಹಕಾರಿಯ ಎಲ್ಲಾ 1265 ಸಿಬ್ಬಂದಿಗಳಿಗೂ ರಾಷ್ಟ್ರಧ್ವಜ ನೀಡುವ ಮೂಲಕ ವಿಶೇಷವಾಗಿ ಆಚರಿಸಲಾಯಿತು.



**ಚಾಮರಾಜನಗರ** : ಶ್ರೀ ಮಂಜುನಾಥ, ಮಾನ್ಯ ಪ್ರಾಂತೀಯ ನಿರ್ದೇಶಕರು ದಿನಾಂಕ: 13.08.2022ರಂದು ಚಾಮರಾಜನಗರ ಜಿಲ್ಲೆ ಪ್ರವಾಸದ ಸಂದರ್ಭದಲ್ಲಿ ಸ್ನೇಹಜ್ಯೋತಿ ಮಹಿಳಾ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಇದರ ಕಛೇರಿಗೆ ಭೇಟಿ ಕಾರ್ಯಚಟುವಟಿಕೆಗಳ ಮಾಹಿತಿಯನ್ನು ಪಡೆದರು. ಈ ಸಂದರ್ಭದಲ್ಲಿ ಶ್ರೀ ಶಿವಕುಮಾರ ಬಿರಾದರ, ಮೈಸೂರು ಪ್ರಾಂತೀಯ ವ್ಯವಸ್ಥಾಪಕರು ಉಪಸ್ಥಿತರಿದ್ದರು.




**ದಾವಣಗೆರೆ** : ದಿನಾಂಕ 27.08.2022 ರಂದು ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ರವರು ದಾವಣಗೆರೆ ನಗರದ ಮನಿಪ್ಲಾಂಟ್ ಸೌಹಾರ್ದ ಸಹಕಾರಿಯ 9ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಸಹಕಾರಿಯ ಸದಸ್ಯರ ಹಾಗೂ ಆಡಳಿತ ಮಂಡಲಿ ಸದಸ್ಯರ ಹಕ್ಕುಗಳು ಮತ್ತು ಜವಬ್ದಾರಿಗಳ ಬಗ್ಗೆ ಮಾಹಿತಿ ನೀಡಿದರು.



**ತುಮಕೂರು** : ದಿನಾಂಕ 28.08.2022 ರಂದು ತುಮಕೂರು ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್ ರವರು ಸನ್‌ರೈಸ್ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಕ್ಯಾತ್ಸಂದ್ರ, ತುಮಕೂರು, ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿದರು.




**ಮಂಡ್ಯ** : ದಿನಾಂಕ 22.08.2022ರಂದು ಕ್ರಾಂತಿಯೋಗಿ ಶ್ರೀ ಬಸವೇಶ್ವರ ನೌಕರರ ಪತ್ತಿನ ಸೌಹಾರ್ದ ಸಹಕಾರಿ ನಿ., ಮಂಡ್ಯ ಇದರ ಅಧ್ಯಕ್ಷರಾದ ಶ್ರೀ ರಮೇಶ್ ರವರು ಮತ್ತು ಆಡಳಿತ ಮಂಡಲಿ ನಿರ್ದೇಶಕರು ಸಹಕಾರಿಯ 2021-22ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯ ಉದ್ಘಾಟನೆಗೆ ಆಗಮಿಸುವಂತೆ ಕೋರಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರಿಗೆ ಆಹ್ವಾನ ಪತ್ರಿಕೆ ನೀಡಿದರು. ಈ ಸಂದರ್ಭದಲ್ಲಿ ಶಾಮಿಯಾನ ಮಾಲೀಕರ ಸೌಹಾರ್ದ ಸಹಕಾರಿ ನಿ., ಮಂಡ್ಯ ಇದರ ಅಧ್ಯಕ್ಷರಾದ ಶ್ರೀ ಎ.ಸಿ ರಮೇಶ್ ರವರು ಹಾಜರಿದ್ದರು.




**ಮಂಡ್ಯ** : ದಿನಾಂಕ 22.08.2022ರಂದು ಶ್ರೀ ವೀರಮಡಿವಾಳ ಮಾಚಿದೇವ ಸೌಹಾರ್ದ ಸಹಕಾರಿ ನಿ., ಮಂಡ್ಯ ಇದರ ಅಧ್ಯಕ್ಷರಾದ ಶ್ರೀ ಬಿ.ಟಿ ಗುರುರಾಜ್ ರವರು ಹಾಗೂ ಆಡಳಿತ ಮಂಡಲಿ ನಿರ್ದೇಶಕರು ಮತ್ತು ಸಿಇಓ ರಾದ ಶ್ರೀಮತಿ ಮಂಜುಶ್ರೀ ರವರು ಸಹಕಾರಿಯ 2021-22ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯ ಉದ್ಘಾಟನೆಗೆ ಆಗಮಿಸುವಂತೆ ಕೋರಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರಿಗೆ ಆಹ್ವಾನ ಪತ್ರಿಕೆ ನೀಡಿದರು. ಈ ಸಂದರ್ಭದಲ್ಲಿ ಕ್ರಾಂತಿಯೋಗಿ ಶ್ರೀ ಬಸವೇಶ್ವರ ನೌಕರರ ಪತ್ತಿನ ಸೌಹಾರ್ದ ಸಹಕಾರಿ ನಿ., ಮಂಡ್ಯ ಇದರ ಅಧ್ಯಕ್ಷರಾದ ಶ್ರೀ ರಮೇಶ್ ರವರು ಹಾಗೂ ಶಾಮಿಯಾನ ಮಾಲೀಕರ ಸೌಹಾರ್ದ ಸಹಕಾರಿ ನಿ., ಮಂಡ್ಯ ಇದರ ಅಧ್ಯಕ್ಷರಾದ ಶ್ರೀ ಎ.ಸಿ ರಮೇಶ್ ರವರು ಹಾಜರಿದ್ದರು.



# ಸಹಕಾರ ಶಿಕ್ಷಣ, ಶಿಕ್ಷಣ ನಿಧಿ ನಿರ್ವಹಣೆ, ಸಂಪನ್ಮೂಲ ವ್ಯಕ್ತಿಗಳು ಮತ್ತು ನಿಬಂಧಕರು - ಒಂದು ವಿಮರ್ಶೆ

– ಶ್ರೀ ಸಿ.ಎನ್ ಪರಶಿವಮೂರ್ತಿ, ನಿವೃತ್ತ ಸಹಕಾರ ಸಂಘಗಳ ಅಪರ ನಿಬಂಧಕರು, ಮೈಸೂರು.

ಸಹಕಾರ ಸಂಸ್ಥೆಗಳ ರಚನೆ ಅಂತರಾಷ್ಟ್ರೀಯ ಸಹಕಾರ ಒಕ್ಕೂಟ ರೂಪಿಸಿದ ಏಳು ಸಹಕಾರ ತತ್ವಗಳ ಅಡಿ ನೊಂದಾವಣಿಯಾಗುತ್ತದೆ. ಸಹಕಾರ ಶಿಕ್ಷಣ ಮತ್ತು ತರಬೇತಿ ಈ ಏಳು ತತ್ವಗಳಲ್ಲಿ ಒಂದು ತತ್ವ ಸಹಕಾರ ಶಿಕ್ಷಣದ ಬಗ್ಗೆ ಇದೆ. ಏಕೆಂದರೆ ಸದಸ್ಯರ ಮಟ್ಟದಲ್ಲಿ ಸಹಕಾರ ವಿಷಯದ ಬಗ್ಗೆ ತಿಳುವಳಿಕೆ ಪ್ರಮಾಣ ಹೆಚ್ಚಿಲ್ಲದ್ದರಿಂದ ಈ ತರಬೇತಿ ಅವಶ್ಯಕ. ಆದರೆ ಭಾರತೀಯ ಸಂಸ್ಕೃತಿಯ ಹಿನ್ನೋಟವನ್ನ ನೋಡಿದಾಗ ಸಹಬಾಳ್ವೆಯ ಒಂದು ಮೂಲ ತತ್ವ. ಭಾರತದ ಸಹಕಾರ ಸಂಸ್ಥೆಗಳಲ್ಲಿ ಇರುವ ಸದಸ್ಯರ ಸಂಖ್ಯೆ ವಿಶ್ವದ ಬೇರೆ ಬೇರೆ ದೇಶಗಳ ಸಂಖ್ಯೆ ಒಟ್ಟುಗೂಡಿದ ಸಂಖ್ಯೆಗಿಂತಲ್ಲೂ ಹೆಚ್ಚಿದೆ. ಅಂದರೆ ಸುಮಾರು 30 ರಿಂದ 40 ಕೋಟಿ ಸದಸ್ಯರು ಸಹಕಾರ ಸಂಸ್ಥೆಗಳಲ್ಲಿ ಸದಸ್ಯತ್ವ ಹೊಂದಿದ್ದಾರೆ. ಇಷ್ಟು ದೊಡ್ಡ ಪ್ರಮಾಣದ ಸಂಖ್ಯೆಗೆ ಸಹಕಾರಿ ವಿಷಯದ ಬಗ್ಗೆ ಆದಾಗಿಂದಾಗಲೇ ತರಬೇತಿ ನೀಡುತ್ತಿದ್ದಾರೆ. ಇಂತಹ ಸಂಸ್ಥೆಗಳಿಂದ ಆಗುವ ಆರ್ಥಿಕ, ಸಾಮಾಜಿಕ, ಬೆಳವಣಿಗೆ ಸಾಧ್ಯವಾಗಲಾರದು. ಸಹಕಾರಿ ಸಂಸ್ಥೆಗಳು ರಾಷ್ಟದ, ಖಾಸಗಿ ಮತ್ತು ಸರ್ಕಾರಿ ಸಂಸ್ಥೆಗಳ ಜೊತೆಗೆ ಮೂರನೇ ವ್ಯವಸ್ಥೆಯಾಗಿ ರೂಪು ಗೊಂಡಿದೆ. ಈ ಸಹಕಾರಿ ಸಂಸ್ಥೆಗಳ ರಚನೆಯಿಂದ ಸದಸ್ಯರೇ ನಡೆಸುವ ಸಂಸ್ಥೆ ಎಂಬುದನ್ನು ತಿಳಿದಾಗ ಸಂಸ್ಥೆಗಳು ಆರ್ಥಿಕವಾಗಿ ಸಬಲವಾಗಿ ಬೆಳಯಲು ಸಾಧ್ಯವೆಂಬುದನ್ನ ಮನದಟ್ಟುಮಾಡಿಕೊಳ್ಳಬೇಕು.

ಸಹಕಾರ ಸಂಘಗಳ ನಿಬಂಧಕರನ್ನು ದಾರ್ಶನಿಕ, ತತ್ವಜ್ಞಾನಿ ಹಾಗೂ ಸ್ನೇಹಿತನೆಂದು ಭಾವಿಸಲಾಗಿದೆ. ಈ ನೀತಿ ಸಹಕಾರ ಸಂಸ್ಥೆಗಳನ್ನು ಸ್ವಾಯತ್ತ, ಸ್ವಾತಂತ್ರ್ಯ, ಸ್ವಯಂ ನಿಯಂತ್ರಿತ ಸಂಸ್ಥೆಗಳೆಂದು ಗುರುತಿಸಿದಾಗ, ನಿಬಂಧಕರು ಮೇಲ್ಕಂಡ ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸಬಹುದು. ಬೇರೆ ರಾಷ್ಟಗಳಲ್ಲಿ ಸಹಕಾರ ಕಾಯ್ದೆ ಮೂರರಿಂದ ನಾಲ್ಕು ಪುಟಗಳು ಮಾತ್ರ ಇರುತ್ತದೆ. ಆದರೆ. ಭಾರತ ದೇಶದಲ್ಲಿ ಪ್ರತಿಯೊಂದು ರಾಜ್ಯದಲ್ಲಿಯೂ ಪ್ರತೇಕ ಸಹಕಾರ ಕಾಯಿದೆಗಳನ್ನು ರಚಿಸಿದ್ದು ಎಲ್ಲಾ ಕಾಯ್ದೆಗಳು ಸುಮಾರ ಎರಡೂ ನೂರರಿಂದ ಮೂನ್ನೂರ ಕಾಲಂಗಳನ್ನು ಸೇರಿಸಿ ಕಾಯ್ದೆ ರೂಪಿಸಲಾಗಿದೆ. ಸಹಕಾರ ಎಂಬ ವಿಷಯ ಭಾರತ ಸಂವಿಧಾನದ ಎರಡನೇ ಪಟ್ಟಿಯಲ್ಲಿ ಬರುವುದರಿಂದ ರಾಜ್ಯ ಸರ್ಕಾರಗಳು ಮಾತ್ರ ಸಹಕಾರ ಕಾಯ್ದೆಯನ್ನು ರಚಿಸಿ, ನಿರ್ವಹಿಸಲು ಅಧಿಕಾರ ಹೊಂದಿದೆ. 97ನೇ ಸಂವಿಧಾನ ತಿದ್ದುಪಡಿಯ ನಂತರವೂ ಈ ಪಟ್ಟಿ ಮುಂದುವರಿದಿದ್ದು, ಇತ್ತೀಚಿಗೆ ಕೇಂದ್ರ ಸರ್ಕಾರ ಸಹಕಾರ ಸಚಿವಾಲಯವನ್ನು ಹೊಸದಾಗಿ ರಚಿಸಿದ್ದು (ಈವರೆವಿಗೂ ಕೇಂದ್ರ ಸರ್ಕಾರದ ಕೃಷಿ ಇಲಾಖೆಯ ಜೊತೆ ಸಹಕಾರ ಇಲಾಖೆ ಸೇರ್ಪಡೆಯಾಗಿತ್ತು) ಈ ಕಾಯ್ದೆಗಳ ಜಾರಿ ಮಾಡುವ ಸಂದರ್ಭದಲ್ಲಿ ನಿಬಂಧಕರ ಜವಾಬ್ದಾರಿ ದಾರ್ಶನಿಕ, ತತ್ವಜ್ಞಾನಿ, ಮತ್ತು ಸ್ನೇಹಿತನ ಬದಲಾಗಿ ಸಹಕಾರ ಕಾಯ್ದೆಯನ್ನು ಜಾರಿ ಮಾಡಿ ಸಹಕಾರ ಸಂಸ್ಥೆಗಳನ್ನು ನಿಯಂತ್ರಿಸುವಲ್ಲಿ ಹೆಚ್ಚಿನ ಜವಾಬ್ದಾರಿಯನ್ನು ನಿರ್ವಹಿಸುತ್ತಿರುವುದರಿಂದ ಮೇಲ್ಕಂಡ ಮೂಲ ತತ್ವ ಅಷ್ಟು ಸಮಂಜಸವಾಗಿ ಕಾಣುವುದಿಲ್ಲ.

ಈ ಪೀಠಿಕೆಹೊಂದಿಗೆ ಸಹಕಾರ ಸಂಘಗಳ/ ಸಂಸ್ಥೆಗಳ ಸದಸ್ಯರ, ಪದಾಧಿಕಾರಿಗಳ, ನೌಕರರ ಮತ್ತು ಸಾರ್ವಜನಿಕರಿಗೆ ಸಹಕಾರದ ಬಗ್ಗೆ ತಿಳುವಳಿಕೆ, ಮಾರ್ಗದರ್ಶನ, ಸದಸ್ಯರ–ಪದಾಧಿಕಾರಿಗಳ ಹಕ್ಕು ಮತ್ತು ಕರ್ತವ್ಯ ಹಾಗೂ ಜವಾಬ್ದಾರಿಗಳು ಮತ್ತು ಕಾಯ್ದೆಯಲ್ಲಿ ನಿಗಧಿಪಡಿಸಿರುವ ಜವಾಬ್ದಾರಿಗಳನ್ನು ಸದಸ್ಯರು, ಪದಾಧಿಕಾರಿಗಳು, ಮಂಡಳಿ ಮತ್ತು ನೌಕರರು ನಿರ್ವಹಿಸದಿದ್ದಾಗ ನಿಬಂಧಕರ ಮಧ್ಯೆ ಪ್ರವೇಶಕ್ಕೆ ಅವಕಾಶವಾಗಿದೆ. ಅದಕ್ಕಾಗಿ ಸಹಕಾರ ಸಂಸ್ಥೆಗಳು ತಮ್ಮ ಕಾರ್ಯ ನಿರ್ವಹಣೆಯಿಂದ ಗಳಿಸಿದ ಲಾಭಾದಲ್ಲಿ ಶಿಕ್ಷಣ ನಿಧಿಯನ್ನ ತೆಗೆದಿರಿಸುವಂತೆ 1959ರ ಕಾಯ್ದೆ ಕಲಂ 57 ನಿಯಮ 20 ಹಾಗೂ ಸೌಹಾರ್ದ ಸಹಕಾರಿ ಕಾಯ್ದೆ ಕಾಯ್ದೆ ಕಲಂ 10(2) ಮತ್ತು ನಿಯಮ 10ಬಿ ರೆಡಿ ಪ್ರತಿಯೊಂದು ಲಾಭಗಳಿಸುವ ಸಂಘ ಸಂಸ್ಥೆಗಳು ಶೇ.2 ರಷ್ಟು ಶಿಕ್ಷಣ ನಿಧಿಯನ್ನ ಸಹಕಾರ ಮಹಾಮಂಡಳ ಹಾಗೂ ಸಂಯುಕ್ತ ಸಹಕಾರಿಗೆ ನೀಡಲು ಷರತ್ತು ವಿಧಿಸಲಾಗಿದೆ. 1959ರ ಕಾಯ್ದೆ ಕಲಂ 57ರಲ್ಲಿ ಪಟ್ಟಣ ಸಹಕಾರ ಮಹಾಮಂಡಳಕ್ಕೆ ಪ್ರತ್ಯೇಕವಾಗಿ ಶೇ.1 ರಷ್ಟು ಲಾಭಾಂಶವನ್ನ ಪ್ರಾಥಮಿಕ ಪಟ್ಟಣ ಸಹಕಾರಿ ಬ್ಯಾಂಕುಗಳು ಪಾವತಿ ಮಾಡುವ ಅವಕಾಶ ಕಲ್ಪಿಸಿದೆ. ಅಂದರೆ ಸಹಕಾರಿ ಸಂಸ್ಥೆಗಳು ನೀಡುವ ಶಿಕ್ಷಣ ನಿಧಿಯನ್ನು ಈ ಕೆಳಕಂಡ ಮೂರು ಸಂಸ್ಥೆಗಳ ಪಡೆಯುತ್ತೀವೆ.

1. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು. (ಲಾಭಾಂಶ ಶೇಕಡ 2 ರಷ್ಟು )

2. ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ., ಬೆಂಗಳೂರು (ಲಾಭಾಂಶ ಶೇಕಡ 1 ರಷ್ಟು)

3. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. (ಲಾಭಾಂಶ ಶೇಕಡ 2 ರಷ್ಟು)

(ಇದರ ಜೊತೆಗೆ ಸಹಕಾರ ಅಕಾಡಮಿಗೆ ಶೇ.050ರಷ್ಟು ತೆಗೆದಿರಿಸ ಬೇಕೆಂದ್ದು ಇದ್ದರೂ ಈ ಅಕಾಡಮಿ ಅಸ್ತಿಸ್ವಕ್ಕೆ ಬಂದಿಲ್ಲ)

ಈ ಮೇಲ್ಕಂಡ ಮೂರು ಸಂಸ್ಥೆಗಳ ಸಹಕಾರ ಶಿಕ್ಷಣ ನಿಧಿಯನ್ನ ಸಂಗ್ರಹ ಮಾಡುವ ಸಂದರ್ಭದಲ್ಲಿ ವಿಧಿಸುವ ಷರತ್ತು ಯಾವುದೆಂದರೆ,

ಪ್ರತಿಯೊಂದು ಲಾಭಗಳಿಸುವ ಸಹಕಾರಿ ಸಂಸ್ಥೆಗಳು ಸದಸ್ಯರಿಗೆ ಡಿವಿಡೆಂಟ್ ಹಂಚುವ ಪೂರ್ವದಲ್ಲಿ ಶಿಕ್ಷಣ ನಿಧಿಯನ್ನು ಸಂಬಂಧಪಟ್ಟ ಮಹಾಮಂಡಳಿಗೆ ಪಾವತಿ ಮಾಡಿದ ನಂತರವೇ ಸದಸ್ಯರ ಡಿವಿಡೆಂಟ್

ಹಂಚಬೇಕೆಂದು ಷರತ್ತು ವಿಧಿಸಿದದ್ದರೂ ಇದನ್ನು ಪಾಲಿಸಿದ ಬಗ್ಗೆ ಯಾವ ಮಟ್ಟದಲ್ಲಿಯೂ ವಿರ್ಮಷೆಯಾಗುತ್ತಿಲ್ಲ. ಕಾಯ್ದೆಯನ್ನು ಪಾಲಿಸುವಂತೆ ನಿಬಂಧಕರ ಮೇಲ್ವಿವಿಚಾರಣೆಯಲ್ಲಿ ನೋಡಿಕೊಳ್ಳುವ ಜವಬ್ದಾರಿಇದ್ದರೂ, ಈ ಬಗ್ಗೆ ಯಾವುದೇ ರೀತಿಯ ವಿಮರ್ಷಾತ್ಮಕ ವರದಿಗಳು ಲಭ್ಯವಿಲ್ಲ. ಅಂದರೆ ಈ ಷರತ್ತನ್ನು ಪಾಲಿಸದೆ ಇರುವ ಸಹಕಾರ ಸಂಸ್ಥೆಗಳ ಮೇಲೆ ಶಾಸನಬದ್ಧ ಜವಾಬ್ದಾರಿಯನ್ನು ನಿಗಧಿಪಡಿಸಿ ಕ್ರಮ ಜರುಗಿಸಿದರೆ ಮಾತ್ರ ಈ ಮೇಲ್ಕಂಡ ಮೂರು ಮಹಾಮಂಡಳಗಳು ಸಹಕಾರ ಶಿಕ್ಷಣದ ಬಗ್ಗೆ ಕ್ರಮ ಕೈಗೊಳ್ಳಲು ಸಂಪನ್ಮೂಲ ಬರಿಸದಂತಾಗುತ್ತದೆ.

ಈ ಬಗ್ಗೆ ಸಂಬಂಧಪಟ್ಟ ಮಹಾಮಂಡಳ ಶಿಕ್ಷಣ ನಿಧಿ ವಸೂಲಾದ ಬಗ್ಗೆ ಸೆಪ್ಟೆಂಬರ್ 30ಕ್ಕೆ ಇದ್ದಂತೆ ಲಾಭಗಳಿಸಿದ ಸಹಕಾರ ಸಂಸ್ಥೆಗಳ ಸಂಖ್ಯೆ ಮತ್ತು ಶಿಕ್ಷಣ ನಿಧಿ ಪ್ರಮಾಣವನ್ನ ಕ್ರೂಢಿಕರಿಸಿ ಪಾವತಿ ಮಾಡಿಲ್ಲದ ಸಹಕಾರ ಸಂಸ್ಥೆಗಳ ಪಟ್ಟಿ ತಯಾರಿಸಿ, ನಿಬಂಧಕರಿಗೆ ಸಲ್ಲಿಸಿ, ಕ್ರಮ ಜರುಗಿಸುವಂತೆ ವರದಿಯನ್ನು ನೀಡುವುದಿಲ್ಲ. ಇದರಿಂದ ಸಹಕಾರ ಸಂಸ್ಥೆಗಳು ತಮ್ಮ ಜವಾಬ್ದಾರಿಯನ್ನ ನಿರ್ವಹಿಸದೆ ಇದ್ದಾಗ, ನಿಬಂಧಕರು ತುರ್ತು ಕ್ರಮ ಕೈಗೊಳ್ಳುವ ಅವಕಾಶವನ್ನ ನೀರರ್ತಕಗೊಳಿಸಿದಂದಾಗುತ್ತದೆ. ಈ ಹಿಂದೆ ಶಿಕ್ಷಣ ನಿಧಿ ಪ್ರಮಾಣವನ್ನು ಲಾಭಾಂಶ ಆಧಾರದ ಮೇಲೆ ನಿಗಧಿಪಡಿಸಲಾಗುತ್ತಿತ್ತು. ಆದರೆ 90ರ ದಶಕದಲ್ಲಿ ಅದ ತಿದ್ದುಪಡಿಯ ಮುಖಾಂತರ ಗಳಿಸಿದ ಲಾಭಾಂಶದಲ್ಲಿ ಶಿಕ್ಷಣ ನಿಧಿಯ ಪ್ರಮಾಣವನ್ನ ನಿಗಧಿಪಡಿಸಿದ ಮೇಲೆ, ಮಹಾಮಂಡಳಗಳ ಶಿಕ್ಷಣ ನಿಧಿ ಸಂಗ್ರಹ ಪ್ರಮಾಣ ಬಹು ದೊಡ್ಡ ಮಟಟ್ಟದಲ್ಲಿ ಹೆಚ್ಚಾಯಿತು. ಸುಮಾರು ವಾರ್ಷಿಕವಾಗಿ ಸಂಗ್ರಹಣೆಯಾಗುತ್ತಿದ್ದ 3–4 ಕೋಟಿ ಬದಾಲಾಗಿ 30 ರಿಂದ 35 ಕೋಟಿ ಸಂಗ್ರಹವಾದ ನಂತರ, ಮಹಾಮಂಡಳಗಳು ಶಿಕ್ಷಣ ನಿಧಿ ಸಂಗ್ರಹಿಸದ ಮೇಲೆ ಅದರ ಉಪಯೋಗವನ್ನ ಯಾವ ರೀತಿ ಮಾಡಲಾಗುತ್ತಿದೆ ಎಂದು ನಿಬಂಧಕರು ವಿಮರ್ಷಿಸುವ ಜವಾಬ್ದಾರಿಯನ್ನು ವಹಿಸುತ್ತಿಲ್ಲ. ಶಿಕ್ಷಣ ನಿಧಿ ಸಂಗ್ರಹವಾದ ನಂತರ ಅದರ ಉಪಯೋಗಕ್ಕಾಗಿ ಒಂದು ಸಲಹಾ ಸಮಿತಿಯನ್ನು 1959ರ ನಿಯಮ 20ರ ಅಡಿ ಮತ್ತು ಸೌಹಾರ್ದ ಸಹಕಾರಿ ಕಾಯ್ದೆಯ ನಿಯಮ 10ಬಿ ಅಡಿ ರಚಿಸಲಾಗಿದೆ. ಈ ಸಮಿತಿಗಳು ರಚನೆ ಮಾಡುವ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಕ್ಕೆ ರಚಿಸಿದ ಸಮಿತಿಯಲ್ಲಿ ಮಹಾಮಂಡಳದ ಅಧ್ಯಕ್ಷರ ಜೊತೆ ನಾಲ್ಕು ರಾಜ್ಯ ಮಹಾಮಂಡಳದ ಅಧ್ಯಕ್ಷರು ಮತ್ತು ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆಯ ನಿರ್ದೇಶಕರು ಹಾಗೂ ಸಹಕಾರ ಸಂಘಗಳ ನಿಬಂಧಕರು ಅಥವಾ ಅವರ ಪ್ರತಿನಿಧಿಯ ಜೊತೆ ಸಹಕಾರ ಮಹಾಮಂಡಳದ ಮುಖ್ಯ ಕಾರ್ಯನಿರ್ವಹಕನು ಸದಸ್ಯ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸುತ್ತಾನೆ.

**ಸೂಚನೆ :**

1. ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳಕ್ಕೆ ಪ್ರತ್ಯೇಕವಾಗಿ ಶೇ.1 ರಷ್ಟು ಶಿಕ್ಷಣ ನಿಧಿ ಪಾವತಿಸಲು ಅವಕಾಶ ಕಲ್ಪಿಸಿದ್ದರೂ ಈ ಸಲಹಾ ಸಮಿತಿಯಲ್ಲಿ ಅ ಮಹಾಮಂಡಳಕ್ಕೂ ಒಂದು ಪ್ರತಿನಿಧಿಯನ್ನು ಕಲ್ಪಸಿವಿರುವುದು ಸೂಕ್ತವೇ ಎಂದು ಸರ್ಕಾರ ಮರು ಪರಿಶೀಲಿಸಬೇಕು.
2. ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಮಹಾಮಂಡಳವು ಒಂದು ಶಿಕ್ಷಣ ಸಲಹಾ ಸಮಿತಿಯನ್ನು ರಚಿಸಿದೆ. ಈ ಸಮಿತಿಯ ಸಹಕಾರ ಸಂಘಗಳ ನಿಯಮದಲ್ಲಿ ಸೇರ್ಪಡೆಯಾಗಿಲ್ಲ. ಇದರ ವಿಶೇಷತೆ ಎಂದರೆ ಪಟ್ಟಣ ಬ್ಯಾಂಕುಗಳ ಸಹಕಾರ ಮಹಾಮಂಡಳದ ಅಧ್ಯಕ್ಷರು ಮತ್ತು ಮಹಾಮಂಡಳ ಮುಖ್ಯ ಕಾರ್ಯನಿರ್ವಹಕ ಹಾಗೂ ಈ ಸಮಿತಿಯ ಅಧ್ಯಕ್ಷ ಮತ್ತು ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಯಾವುದೇ ಸಮಿತಿ ರಚನೆಯಾದಾಗ ಆ ಸಂಸ್ಥೆಯ ಕಾರ್ಯಾನಿರ್ವಹಣಾ ಮುಖ್ಯಸ್ಥ, ಅಂದರೆ ಮುಖ್ಯ ಕಾರ್ಯನಿರ್ವಾಹಕ ಇಲ್ಲದೆ ಸಭೆಗಳನ್ನು ನಡೆಸಲು ಅವಕಾಶವೇ ಇಲ್ಲದಿದ್ದರೂ ಈ ಸಂಸ್ಥೆಯಲ್ಲಿ ಮಹಾಮಂಡಳ ಅಧ್ಯಕ್ಷರು ಅಧ್ಯಕ್ಷತೆ ವಯಿಸುವುದು ಹಾಗೂ ಮುಖ್ಯ ಕಾರ್ಯನಿರ್ವಹಕ ನಡುವಳಿಗಳನ್ನು ನೈಜವಾಗಿ ಹಾಗೂ ಯಥಾವಂತಾಗಿ ದಾಖಾಲಿಸುವುದೇ ಇಲ್ಲ. ಅಂದರೆ ಸಭೆಗಳಿಗೆ ಹಾಜರಾಗುವ ಅವಶ್ಯಕೆಯೇ ಇಲ್ಲ. ಇದರ ಮತ್ತೊಂದು ವಿಶೇಷತೆ ಎಂದರೆ ಶಿಕ್ಷಣ ಸಲಹಾ ಸಮಿತಿಯಲ್ಲಿ 8 ಸದಸ್ಯರ ರನ್ನು ಹೊಂದಿದ್ದು ಅದರಲ್ಲಿ ಒಬ್ಬರೂ ಮಾತ್ರ ಸಹಕಾರ ಶಿಕ್ಷಣ ತಜ್ಞರಿದ್ದಾರೆ. ಅಂದರೆ. ಪ್ರಾದೇಶಿಕ ನಿರ್ವಹಣಾ ಸಂಸ್ಥೆಯ ನಿರ್ದೇಶಕರನ್ನು, ಹೊರತು ಪಡಿಸಿ, ಉಳಿದ ಏಳು ಜನ ಸದಸ್ಯರು ಮಹಾಮಂಡಳ ಮಂಡಳಿ ಸದಸ್ಯರಾಗುವ ಅರ್ಹತೆಯಿಂದ ವಂಚಿತರಾದವರೂ ಇರಬಹುದು ಅಥವಾ ಮಹಾಮಂಡಳದ ಅದ್ಯಕ್ಷರ ಇಚ್ಛೆಯಂತೆ ಈ ಏಳು ಸದಸ್ಯರನ್ನು ಸೇರಿಸಿ ಸಮಿತಿ ರಚಿಸಿರಬಹುದು. ಶಿಕ್ಷಣ ಸಲಹಾ ಸಮಿತಿಯ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು 1959ರ ನಿಯಮ 20(6)ರಲ್ಲಿ ಕೆಲವು ಜವಾಬ್ದಾರಿಗಳನ್ನು ನಿಗದಿಪಡಿಸಿದೆ. ಕರ್ನಾಟಕ ಸೌಹಾರ್ದ ಕಾಯ್ದೆಯ ನಿಯಮ 10ಋ ಮತ್ತು 10ಸಿ ರಲ್ಲಿ ಈ ಸಮಿತಿಯ ಹಕ್ಕು, ಕರ್ತವ್ಯ ಜವಾಬ್ದಾರಿಯನ್ನು ನಿಗಧಿಪಡಿಸಿದೆ.

ಈ ಸಲಹಾ ಸಮಿತಿಗಳ ಸಭೆಯಲ್ಲಿ ಈ ಜವಾಬ್ದಾರಿಗಳನ್ನು ನಿರ್ವಹಿಸಲಾಗುತ್ತಿದೆ ಇಲ್ಲವೇ ಇಂತಹ ಜವಾಬ್ದಾರಿಯನ್ನು ನಿಬಂಧಕರು ಗಮನಿಸುತ್ತಲೇ ಇಲ್ಲ. ಈ ಮಹಾಮಂಡಳಗಳ ಸಲಹಾ ಸಮಿಯ ಕಾರ್ಯನಿರ್ವಹಣ ನಿಬಂಧಕರು ಆ ಸಂಬಂದ್ದ ಪಟ್ಟ ಮಹಾಮಂಡಳಗಳಲ್ಲಿ ನಿರ್ದೇಶಕರಾಗಿರುವುದರಿಂದ ಮಂಡಳಿ ಸಭೆಗಳದ್ದಾರೂ ಈ ಸಲಹಾ ಸಮಿತಿಯ ಜವಾಬ್ದಾರಿ ನಿರ್ವಹಣೆಯ ಬಗ್ಗೆ ವಿಮರ್ಷಿಸಬೇಕು. ಈ ಸಲಹಾ ಸಮುತಿಯು ನಿರ್ವಹಿಸಬೇಕಾದ ಜವಾಬ್ದಾರಿಗಳನ್ನ ಈ ಕೆಳಕಂಡ ಪಟ್ಟಿ ಮಾಡಬಹುದು.

**1959ರ ನಿಯಮ 20 :**

ಸಲಹಾ ಮಂಡಳಿಯು ಕಾಲಕಾಲಕ್ಕೆ ನೀಡಬಹುದಾದಂಥ ನಿರ್ದೇಶನಗಳಿಗೊಳಪಟ್ಟು, ಸಹಕಾರ ಶಿಕ್ಷಣ, ತರಬೇತಿ ಮತ್ತು ಸಹಕಾರ ಸಂಘಗಳ ಮಾನವ ಸಂಪನ್ಮೂಲ ಅಭಿವೃದ್ಧಿ ಇವುಗಳಿಗೆ ಸಂಬಂಧಪಟ್ಟ ಈ ಕೆಳಕಂಡ ಯಾವುದೇ ಉದ್ದೇಶಗಳಿಗಾಗಿ ನಿಧಿಯನ್ನು ಬಳಕೆ ಮಾಡಿಕೊಳ್ಳಬಹುದು ಎಂದರೆ.

ಎ) ಸಹಕಾರ ಸಂಘಗಳ ಪದಾಧಿಕಾರಿಗಳು ಮತ್ತು ನೌಕರರ ಸೇರಿದಂತೆ ಸದಸ್ಯರು, ನಿರ್ದೇಶಕರಿಗೆ ಮತ್ತು ಸಾರ್ವಜನಿಕರಿಗೆ

ಮತ್ತು ಸಾರ್ವಜನಿಕರಿಗೆ ಸಹಕಾರ ತತ್ವಗಳ ಮತ್ತು ಪದ್ಧತಿ ವಿಷಯದಲ್ಲಿ ಶಿಕ್ಷಣ ನೀಡುವುದು.

ಬಿ) ಸಹಕಾರ ಸಂಘಗಳಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ

ಸಿ) ಸಹಕಾರ ಸಂಘಗಳ ಅಭಿವೃದ್ಧಿ

ಡಿ) ಸಾಮರ್ಥ್ಯವೃದ್ಧಿ ಹಾಗೂ ವ್ಯವಹಾರ ನಿರ್ವಹಣೆ

ಇ) ವೃತ್ತಿ ನೈಪುಣ್ಯತೆ

ಎಫ್) ತಾಂತ್ರಿಕ ಉನ್ನತೀಕರಣ

ಜಿ) ಉದ್ದೇಶಗಳನ್ನು ಈಡೇರಿಸುವುದಕ್ಕೆ ಶಿಕ್ಷಣ, ತರಬೇತಿ, ಸಂಶೋಧನೆ, ಮಾನವಶಕ್ತಿ ಮತ್ತು ಮೂಲಭೂತ ಸೌಕರ್ಯ

ಎಚ್) ಸಂಶೋಧನೆ ಮತ್ತು ಅಭಿವೃದ್ಧಿ

ಎಚ್) ಸಾಮಾನ್ಯರಾಗಿ ಸಹಕಾರ ಆಂದೋಲನವನ್ನು ಅಭಿವೃದ್ಧಿ ಪಡಿಸುವುದು.

ಜೆ) ಸಹಕಾರ ತತ್ವದ ಪ್ರಸಾರ ಹಾಗೂ ಪ್ರಚಾರ.

ಕೆ) ಸಹಕಾರ ಆಂಧೋಲನಕ್ಕೆ ಸಂಬಂಧಿಸಿದ ಪುಸ್ತಕಗಳು ಹಾಗೂ ಪತ್ರಿಕೆಗಳ ಪ್ರಕಟಣೆ.

ಎಲ್) ಸಹಕಾರ ಆಂದೋಲನ ಕ್ಷೇತ್ರದಲ್ಲಿ ಸಂಶೋಧನೆ ನಡೆಸುವುದು, ವಿಷಯ ಅಧ್ಯಯನಗಳು ಮತ್ತು ಶಿಕ್ಷಣ.

ಎಂ) ರಾಜ್ಯದ ಸಹಕಾರ ಆಂದೋಲನೆಯಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಕ್ಕಾಗಿ ಬಹುಮಾನ ಅಥವಾ ಗೌರವ ಧನ ನೀಡುವುದು.

**ಸೌಹಾರ್ದ ನಿಯಮ 10ಸಿ :**

ಶಿಕ್ಷಣ ನಿಧಿಯನ್ನು ಬಳಕೆ ಮಾಡಬಹುದಾದ ಉದ್ದೇಶಗಳು :

(1) ಸಲಹಾ ಸಮಿತಿಯ ಅನುಮೋದನೆ ಇಲ್ಲದೆ ಸಹಕಾರ ಶಿಕ್ಷಣ ನಿಧಿಯಿಂದ ಯಾವುದೇ ವೆಚ್ಚವನ್ನು ಮಾಡತಕ್ಕದ್ದಲ್ಲ. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಇದರ ಲೆಕ್ಕ ಪರಿಶೋಧಕರು ಈ ನಿಧಿಯ ಬಳಕೆಯನ್ನು ಪರಿಶೀಲಿಸಿ ದೃಢೀಕರಿಸತಕ್ಕದ್ದು.

(2) ಸಲಹಾ ಸಮಿತಿಯು ಕಾಲಕಾಲಕ್ಕೆ ನೀಡುವ ನಿರ್ದೇಶನಗಳಿಗೆ ಒಳಪಟ್ಟು ಈ ನಿಧಿಯನ್ನು ಸಹಕಾರಿ ಶಿಕ್ಷಣ ತರಬೇತಿ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿಗೆ ಸಂಬಂಧಪಟ್ಟ ಕೆಳಗಿನ ಯಾವುದೇ ಉದ್ದೇಶಗಳಿಗೆ ಉಪಯೋಗಿಸಬಹುದು.

(ಎ)ಸಹಕಾರಿಗಳ ನೌಕರರ, ನಿರ್ದೇಶಕರ (ಪದಾಧಿಕಾರಿಗಳನ್ನು ಒಳಗೊಂಡಂತೆ) ಮತ್ತು ಸದಸ್ಯರ ಶಿಕ್ಷಣ ಹಾಗೂ ಸಹಕಾರ ತತ್ವ ಮತ್ತು ಆಚರಣೆಯಲ್ಲಿ ಸಾರ್ವಜನಿಕರಿಗೆ ಶಿಕ್ಷಣ ನೀಡುವುದುದು;

(ಬಿ)ಸಹಕಾರಿಗಳಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ;

(ಸಿ)ಸಹಕಾರಿಗಳ ಅಭಿವೃದ್ಧಿ;

(ಡಿ)ಸಾಮಾನ್ಯವಾಗಿ ಸಹಕಾರಿ ಚಳುವಳಿಯ ಅಭಿವೃದ್ಧಿ;

(ಇ)ವೃತ್ತಿ ನೈಪುಣ್ಯತೆ;

(ಎಫ್) ಸಂಶೋಧನೆ ಮತ್ತು ಅಭಿವೃದ್ಧಿ;

(ಜಿ)ತಾಂತ್ರಿಕ ಸೌಲಭ್ಯಗಳನ್ನು ಇಂದೀಕರಿಸುವುದು;

(ಹೆಚ್) ಶಿಕ್ಷಣ, ತರಬೇತಿ, ಸಂಶೋಧನೆ, ಸಿಬ್ಬಂದಿ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ

(ಐ)ಸಹಕಾರಿ ಪ್ರಚಾರ ಮತ್ತು ಪ್ರಸಿದ್ಧಿ;

(ಜೆ) ಸಹಕಾರಿ ಚಳುವಳಿಗೆ ಸಂಬಂಧಪಟ್ಟ ಪುಸ್ತಕ ಮತ್ತು ನಿಯತಕಾಲಿಕೆಗಳ ಪ್ರಕಟಣೆ;

(ಕೆ)ಸಂಶೋಧನೆ, ಸರ್ವೇಕ್ಷಣೆ ಮತ್ತು ಪ್ರಕರಣ ಅಧ್ಯಯನಗಳನ್ನು ನಡೆಸುವುದು;

(ಎಲ್) ರಾಜ್ಯದ ಸಹಕಾರಿ ಕ್ಷೇತ್ರಕ್ಕೆ ಪ್ರಶಂಸನೀಯ ಸೇವೆ ಸಲ್ಲಿಸಿದವರಿಗೆ ಬಹುಮಾನ ಅಥವಾ ಗೌರವಧನ ಕೊಡುವುದು;

(3) ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಸಲಹಾ ಸಮಿತಿಯು ನೀಡುವ ಒಟ್ಟಾರೆ ಮಾರ್ಗಸೂಚಿಗಳನ್ನು ಅನುಸರಿಸಿ ಸಹಕಾರಿ ತತ್ವಗಳು ಮತ್ತು ಮೌಲ್ಯಗಳ ಬಗ್ಗೆ ತಿಳುವಳಿಕೆ ಮೂಡಿಸುವುದು, ಸದಸ್ಯರ ಶಿಕ್ಷಣ, ಸಹಕಾರಿಗಳಲ್ಲಿ ಆರ್ಥಿಕ ಮತ್ತು ವ್ಯವಹಾರ ನಿರ್ವಹಣೆ ಇತ್ಯಾದಿ ವಿಷಯಗಳ ಸಹಕಾರಿ ಚಳುವಳಿ ಮತ್ತು ಸಹಕಾರಿಗಳ ಬೆಳವಣಿಗೆಗೆ ಶಿಕ್ಷಣ ಮತ್ತು ತರಬೇತಿ ಕಾರ್ಯಕ್ರಮಗಳನ್ನು ರೂಪಿಸತಕ್ಕದ್ದು ಮತ್ತು ವಾರ್ಷಿಕ ಬಜೆಟ್‌ಗಳನ್ನು ತಯಾರಿಸತಕ್ಕದ್ದು ಹಾಗೂ ಅವುಗಳನ್ನು ಅನುಷ್ಠಾನಗೊಳಿಸತಕ್ಕದ್ದು;

(4) ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ರಿಜಿಸ್ಟ್ರಾರನಿಗೆ ತರಬೇತಿ ಕಾರ್ಯಕ್ರಮಗಳನ್ನು ನಡೆಸುವ ವಿವರಗಳನ್ನು ತೋರಿಸುವ ಅಧಿಕೃತ ವರದಿಗಳನ್ನು ವರ್ಷಕ್ಕೊಮ್ಮೆ ಸಲ್ಲಿಸತಕ್ಕದ್ದು;

(5) ಪ್ರತಿ ಸಹಕಾರಿ ಆಡಳಿತ ಮಂಡಳಿಯು ಸಹ ತನ್ನ ವಾರ್ಷಿಕ ಆಯವ್ಯಯದಲ್ಲಿ ನೌಕರರ, ನಿರ್ದೇಶಕರ, ಸದಸ್ಯರ ಮತ್ತು ಭಾವಿ ಸದಸ್ಯರ ಶಿಕ್ಷಣದ ಖರ್ಚುಗಳನ್ನು ಅಳವಡಿಸತಕ್ಕದ್ದು. ಸಹಕಾರ ಸಿದ್ಧಾಂತ, ತತ್ವಗಳು ಮತ್ತು ಆಚರಣೆಗಳ ಬಗ್ಗೆ ಸದಸ್ಯರು ನಿರ್ದೇಶಕರು ಮತ್ತು ನೌಕರರು ಸರಿಯಾದ ತರಬೇತಿ ನೀಡಿ ಅರಿವು ಮೂಡಿಸುವುದನ್ನು ಖಾತರಿ ಪಡಿಸಿಕೊಳ್ಳತಕ್ಕದ್ದು. ಯಾವುದೇ ಒಂದು ಉತ್ತಮ ಸಹಕಾರಿಯಲ್ಲಿ ಅನುಸರಿಸಬೇಕಾದ ಮಾರ್ಗದರ್ಶಕತೆ ತಿಳುವಳಿಕೆಯ ಮಟ್ಟ, ಸದಸ್ಯರ ಭಾಗವಹಿಸುವಿಕೆ ಮತ್ತು ಸದಸ್ಯರ ನಿಯಂತ್ರಣಗಳು ಸಹಕಾರಿಯ ಎಲ್ಲಾ ನೌಕರರಿಗೆ, ನಿರ್ದೇಶಕರಿಗೆ ಮತ್ತು ಸದಸ್ಯರಿಗೆ ಮುಟ್ಟುವುದನ್ನು ಖಾತರಿ ಪಡಿಸಿಕೊಳ್ಳತಕ್ಕದ್ದು.]

ಈ ಮೇಲ್ಕಂಡ ಸಲಹಾ ಸಮಿತಿಯ ಜವಾಬ್ದಾರಿಗಳಲ್ಲಿ ಸಂಯುಕ್ತ ಸಹಕಾರಿ ಸಲಹಾ ಸಮಿತಿಗೆ ರಚಿಸಿದ ಸಮಿತಿಯಲ್ಲಿ 10ಸಿ ಅಡಿ ನಿಗದಿಪಡಿಸದ ಎಲ್ಲಾ ವಿಷಯಗಳ ಬಗ್ಗೆ ತ್ರೈಮಾಸಿಕವಾಗಿ ವಿಮರ್ಷೆಮಾಡಿ ತೀರ್ಮಾನ ತೆಗೆದುಕೊಳ್ಳುವ ಬಗ್ಗೆ ತಿಳಿದಿದ್ದೇನೆ. ಅಂದರೆ ನಿಯಮದಲ್ಲಿ ರೂಪಿಸಿದ ಎಲ್ಲಾ ಜವಾಬ್ದಾರಿಗಳನ್ನು ಸಂಯುಕ್ತ ಸಹಕಾರಿಯ ನಿರ್ವಹಿಸುತ್ತೀದೆ.

ಮುಂದಿನ ಸಂಚಿಕೆಯಲ್ಲಿ ಮುಂದುವರೆಯುವುದು.

# ವಿತ್ತೀಯ ಸಾಕ್ಷರತೆ ( ಫೈನಾನ್ಸಿಯಲ್ ಲಿಟರಸಿ )

– ಶ್ರೀ ಶರಣಗೌಡ ಜಿ. ಪಾಟೀಲ, ವ್ಯವಸ್ಥಾಪಕರು ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

ಭಾರತ ಗ್ರಾಮೀಣ ಪ್ರದೇಶವುಳ್ಳ ದೇಶ. ದೇಶದ ಪ್ರಮುಖ ಉದ್ಯೋಗ ಕೃಷಿ. ಶೇಕಡಾ 70% ಕ್ಕಿಂತಲೂ ಹೆಚ್ಚು ಜನರು ಕೃಷಿಯನ್ನೆ ಪ್ರಧಾನ ಉದ್ಯೋಗವನ್ನಾಗಿ ಮಾಡಿಕೊಂಡಿದ್ದಾರೆ. ನಮ್ಮ ದೇಶಕ್ಕೆ ಸ್ವಾತಂತ್ರ ಬಂದು 75 ವರ್ಷಗಳಾಗಿವೆಯಾದರೂ ಸಾಕ್ಷರತೆ ಪ್ರಮಾಣ 65ಕ್ಕಿಂತಲೂ ಕಡಿಮೆ. ಆಧುನಿಕ ತಂತ್ರಜ್ಞಾನದ ಬಳಕೆಯಿಂದ ದೇಶ ಪ್ರಗತಿ ಪಥದಲ್ಲಿ ನಡೆಯುತ್ತಿದೆಯಾದರೂ ದೇಶದ ಸಾಕ್ಷರತೆ ಪ್ರಮಾಣ ಜೊತೆಗೆ ಹಣಕಾಸಿನ ನಿರ್ವಹಣೆಗೆ ಕಷ್ಟವಾಗುತ್ತದೆ. ವಿತ್ತೀಯ ಸಾಕ್ಷರತೆ ಪ್ರಮಾಣ ಹೆಚ್ಚಬೇಕು. ವಿತ್ತೀಯ ಸಾಕ್ಷರತೆ ಇಲ್ಲದಿದ್ದರೆ ಬೇರೆಯವರ ಮೇಲೆ ಅವಲಂಬನಕ್ಕೆ ದಾರಿಯಾಗುತ್ತದೆ. ಇದರಿಂದ ಹೊಸ ಹೊಸ ವಿಚಾರಗಳ ಬೆಳವಣಿಗೆ ಆಗುವುದಿಲ್ಲ. ಯಾವ ಕೆಲಸ ಮಾಡಿದರೆ ಏನಾಗುತ್ತದೆಯೂ ಎಂಬ ಭಯ. ಅನೇಕ ಮೋಸ ವಂಚನೆಗಳು ನಡೆಯಲು ಸಾಧ್ಯ. ಹೀಗಾಗಿ ಸಾಕ್ಷರತೆಯ ಜೊತೆಗೆ ವಿತ್ತೀಯ ಸಾಕ್ಷರತೆಯೂ ಅಗತ್ಯ.

ಬದಲಾದ ಅರ್ಥವ್ಯವಸ್ಥೆಯಲ್ಲಿ ದಿನೇ ದಿನೇ ಬದಲಾಗುತ್ತಿರುವ ಪೈಪೋಟಿ ಯುಗದಲ್ಲಿ ಉತ್ತಮ ಜೀವನ ನಡೆಸುವುದು ಒಂದು ಸವಾಲು. ಈ ಸವಾಲನ್ನು ಸಮರ್ಥವಾಗಿ ಎದುರಿಸಿ ಉತ್ತಮ ಜೀವನ ಶೈಲಿಯಲ್ಲಿ ಜೀವನ ನಿರ್ವಹಣೆಗೆ ಹಲವಾರು ವಿಷಯಗಳ ಕಡೆಗೆ ಗಮನ ಹರಿಸಬೇಕಾಗುತ್ತದೆ. ಅದರಲ್ಲಿ ಹಣಕಾಸು ನಿರ್ವಹಣೆಯೂ ಒಂದು. ಆದ್ದರಿಂದ ಉತ್ತಮ ಹಣಕಾಸು ನಿರ್ವಹಣೆ ಅಗತ್ಯದ ಬಗ್ಗೆ ತಿಳುವಳಿಕೆ ಪಡೆದುಕೊಳ್ಳುವುದು ಅಗತ್ಯ. ಉತ್ತಮ ಹಣಕಾಸು ಹಣಕಾಸು ನಿರ್ವಹಣೆಗೆ ಹಣಕಾಸು ಸಾಕ್ಷರತೆ ಅಗತ್ಯ.

**ವಿತ್ತೀಯ (ಹಣಕಾಸು) ಸಾಕ್ಷರತೆ :**

ಸಾಕ್ಷರತೆ ಎಂದರೆ ಅಕ್ಷರಜ್ಞಾನ. ವಿತ್ತೀಯ ಸಾಕ್ಷರತೆ ಎಂದರೆ ಹಣಕಾಸು ವ್ಯವಹಾರಗಳ ಜ್ಞಾನ. ಜೀವನ ನಿರ್ವಹಣೆಯಲ್ಲಿ ಹಣಕಾಸು ಮಹತ್ವದ ಪಾತ್ರ ನಿರ್ವಹಿಸುವುದು ಎಲ್ಲರಿಗೂ ತಿಳಿದಿದೆ. ಹಣವಿಲ್ಲದವನನ್ನು ಸಮಾಜ ಗೌರವಿಸುವಿದಿಲ್ಲ. ಆಪತ್ತಿನಲ್ಲಿ ನೆರವು ಸಿಗುವುದಿಲ್ಲ. ಆದ್ದರಿಂದ ಹಣವನ್ನು ಸಂಪಾದಿಸುವುದು ಅವಶ್ಯಕ. ಈ "ಹಣಗಳಿಸುವ, ಹಣ ಉಳಿಸುವ ಮತ್ತು ಜಾಣತನದಿಂದ ಹಣ ಖರ್ಚುಮಾಡುವ ವಿಧಾನವೇ ವಿತ್ತೀಯ ಸಾಕ್ಷರತೆ" ಎಂದು ಹೇಳಲಾಗುತ್ತದೆ.

**ವಿತ್ತೀಯ ಸಾಕ್ಷರತೆಯ ಮುಖ್ಯ ಸೂತ್ರಗಳು**

- ಜೀವನ ನಿರ್ವಹಣೆಗೆ ಅಗತ್ಯ ಹಣಕಾಸು ಯೋಜನೆ
- ಬುದ್ಧಿವಂತಿಕೆಯಿಂದ ಖರ್ಚು ಮಾಡುವುದು
- ಉಳಿತಾಯಕ್ಕೆ ಪ್ರಥಮ ಆದ್ಯತೆ
- ಅಗತ್ಯತೆಗಾಗಿ ಮಾತ್ರ ಸಾಲ
- ವಿಮೆ ಮತ್ತು ಪಿಂಚಣಿಗಳ ಸದುಪಯೋಗ

**1. ಜೀವನ ನಿರ್ವಹಣೆಗೆ ಅಗತ್ಯ ಹಣಕಾಸು ಯೋಜನೆ**

ಜೀವನ ನಿರ್ವಹಣೆಗಾಗಿ ಹಣಕಾಸಿನ ಸಂಗ್ರಹ ಮಾಡಲೇಬೇಕಾಗುತ್ತದೆ. ಈ ಹಣಕಾಸನ್ನು ಹೇಗೆ ಸಂಗ್ರಹಮಾಡಬೇಕು ಎಂಬ ಬಗ್ಗೆ ಒಂದು ಯೋಜನೆ ಮಾಡಬೇಕಾಗುತ್ತದೆ. ಇದರಲ್ಲಿ ಹಾಲಿ ಇರುವ ಹಣಕಾಸಿನ ಸಂಗ್ರಹ, ಹೆಚ್ಚುವರಿ ವೆಚ್ಚಗಳ ನಿರ್ವಹಣೆಗಾಗಿ ಹೆಚ್ಚುವರಿ ಹಣಕಾಸಿನ ಸಂಗ್ರಹಕ್ಕೆ ಇರುವ ಮೂಲಗಳು ಅವುಗಳ ಬಳಕೆ ಬಗ್ಗೆ ಯೋಜನೆಗಳನ್ನು ಸಿದ್ಧಪಡಿಸಿ ಅನುಷ್ಠಾನಗೊಳಿಸಬೇಕಾಗುತ್ತದೆ. ಹೀಗಾಗಿ ನಮ್ಮ ವೆಚ್ಚಗಳೆಷ್ಟು ? ಆದಾಯ ಎಷ್ಟು ? ಅದನ್ನು ಹೇಗೆ ಸರಿದೂಗಿಸಬೇಕು. ಅದರಲ್ಲಿ ಹೇಗೆ ಉಳಿತಾಯ ಮಾಡಬೇಕು ಎಂಬ ಬಗ್ಗೆ ತಿಳುವಳಿಕೆ ಹೊಂದುವುದೇ ವಿತ್ತೀಯ ಸಾಕ್ಷರತೆಯ ಮೊದಲ ಹಂತವಾಗಿದೆ.

**2. ಬುದ್ಧಿವಂತಿಕೆಯಿಂದ ಖರ್ಚು ಮಾಡುವುದು.**

ಬುದ್ಧಿವಂತಿಕೆಯಿಂದ ಖರ್ಚು ಮಾಡುವುದು ವಿತ್ತೀಯ ಸಾಕ್ಷರತೆಯ ದ್ವಿತೀಯ ಹಂತ. ಜೀವನ ನಿರ್ವಹಣೆ ಸಂದರ್ಭದಲ್ಲಿ ಪ್ರತಿ ಒಬ್ಬರಿಗೂ ಅವರವರದೇ ಆದ ವೆಚ್ಚದ ಬಾಬ್ತುಗಳು ಇರುತ್ತವೆ. ವಿಶೇಷವಾಗಿ ಶಿಕ್ಷಣ, ಆರೋಗ್ಯ, ಕೌಟುಂಬಿಕ ಬೇಕು ಬೇಡಿಕೆಗಳು ಹೀಗೆ ಹತ್ತು ಹಲವು ವಿಧವಾದ ದಾರಿಗಳಿವೆ ವೆಚ್ಚಕ್ಕೆ. ಇವುಗಳಲ್ಲಿ ಆದ್ಯತಾ ವಲಯವನ್ನು ಮಾಡುವುದು ಅಗತ್ಯ. ಪ್ರಮುಖವಾಗಿ

- ಅಗತ್ಯ ಹಾಗು ತಕ್ಷಣ ನಿರ್ವಹಿಸಲೇಬೇಕು.
- ಅಗತ್ಯ ಆದರೆ ಅವಸರ ಬೇಡ.
- ಅಗತ್ಯವಿರುವುದಿಲ್ಲ : ಅವಸರವಿಲ್ಲ. ಅನಿವಾರ್ಯದ ವೆಚ್ಚ.
- ಅಗತ್ಯವೂ ಇಲ್ಲ. ಅನಿವಾರ್ಯವೂ ಇಲ್ಲ ಅನಗತ್ಯದ ವೆಚ್ಚ

ನಮ್ಮ ಹತ್ತರ ದುಡ್ಡು ನಮ್ಮದಿರಬಹುದು, ಬೇರೆಯವರದಿರಬಹುದು ಸಂಸ್ಥೆಗಳದ್ದಿರಬಹುದು ಇವುಗಳನ್ನೆಲ್ಲ ನಮ್ಮ ದುಡ್ಡು ಎಂದು ಪರಿಗಣಿಸಲಾರದು. ವೆಚ್ಚ ನಿರ್ವಹಣೆ ಸಂದರ್ಭದಲ್ಲ ಕೇವಲ ನಮ್ಮ ದುಡ್ಡು ಮಾತ್ರ ಮತ್ತು ಸದರಿ ಕಾರ್ಯಕ್ಕಾಗಿ ತೆಗೆದಿರಿಸಿರುವ ಮೊತ್ತವನ್ನೆ ಖರ್ಚುಮಾಡಿದಾಗ ಅದು ಜಾಣ್ಮೆಯ ವೆಚ್ಚವೆನಿಸಿಕೊಳ್ಳುತ್ತದೆ. ಇಂತಹ ವೆಚ್ಚಗಳನ್ನೂ ಸಹ ಆತುರದಿಂದ ಮಾಡಬಾರದು. ಮಾಡಿದ ವೆಚ್ಚ ಸಾರ್ಥಕವಾಗಬೇಕು. ಅದರಿಂದ ಪ್ರಯೋಜನವಾಗಬೇಕು.

**3. ಉಳಿತಾಯಕ್ಕೆ ಪ್ರಥಮ ಆದ್ಯತೆ**

ಜೀವನ ನಿರ್ವಹಣೆಯ ಪ್ರತಿಯೊಂದು ಹಂತದಲ್ಲಿ ಆದಾಯ ವೆಚ್ಚಗಳ ಲೆಕ್ಕ ಹಾಕುವ ಸಮಯದಲ್ಲಿ ಹೆಚ್ಚು ಗಮನವನ್ನು ಈ ವ್ಯವಹಾರದಲ್ಲಿ ಎಷ್ಟು ಹಣವನ್ನು ಉಳಿತಾಯ ಮಾಡಬಹುದು ಎಂದು ಆಲೋಚಿಸಿ ಅದರ ಬಗ್ಗೆ ಗಮನ ಹರಿಸಬೇಕು. ಉಳಿತಾಯವೆಂದರೆ ಸಂಪಾದನೆ ಇದ್ದ ಹಾಗೆ ಎಂಬ

45ನೇ ಪುಟಕ್ಕೆ.....

# ಸಹಕಾರದಿಂದ ಸಮೃದ್ಧಿ
## ಕೇಂದ್ರ ಸಹಕಾರ ಸಚಿವಾಲಯದ ಸಾಧನೆ ಹಾಗು ಕಾರ್ಯಚಟುವಟಿಕೆಗಳು

– ಮೂಲ : "ದಿ ಕೋ–ಆಪರೇಟಿವ್" ಮಾಸ ಪತ್ರಿಕೆ, ಕನ್ನಡ ಅನುವಾದ : ಶ್ರೀಮತಿ ದಿವ್ಯ ಟಿ, ಹಿರಿಯ ಸಹಾಯಕಿ, ಕರಾಸೌಸಂಸನಿ., ಬೆಂಗಳೂರು.

(ಸಹಕಾರ ಚಳುವಳಿಯ ಅಭಿವೃದ್ಧಿಗೋಸ್ಕರವಾಗಿ ಕೇಂದ್ರದಲ್ಲಿ ಸಹಕಾರ–ಸೇ–ಸಮೃದ್ಧಿ ಘೋಷ ವಾಕ್ಯದೊಂದಿಗೆ ರಚನೆಯಾದ ಸಹಕಾರ ಕ್ಷೇತ್ರದ ಪ್ರತ್ಯೇಕ ಸಚಿವಾಲಯದ ಮೂಲಕ ಹಲವಾರು ಪ್ರಗತಿಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಅವುಗಳನ್ನು ಸಾರ್ವಜನಿಕರಿಗೆ ಹಾಗೂ ಸಹಕಾರಿಗಳಿಗೆ ಪರಿಚಯಿಸುವ ದೃಷ್ಟಿಯಿಂದ ಮೂಲ ಆಂಗ್ಲ ಭಾಷೆಯ ಲೇಖನವನ್ನು ಕನ್ನಡಕ್ಕೆ ಭಾಷಾಂತರಿಸಿ ಪ್ರಕಟಿಸಲಾಗಿದೆ.)

ಸಹಕಾರ ಕ್ಷೇತ್ರವನ್ನು ಪುನರುಜ್ಜೀವನಗೊಳಿಸಲು, ಸಹಕಾರ ಕ್ಷೇತ್ರದಲ್ಲಿ ಪಾರದರ್ಶಕತೆ, ಆಧುನೀಕರಣ, ಗಣಕೀಕರಣ ವ್ಯವಸ್ಥೆಯನ್ನು ಜಾರಿಗೊಳಿಸಲು, ಸ್ಪರ್ಧಾತ್ಮಕ ಸಹಕಾರಿಗಳನ್ನು ಸೃಷ್ಟಿಸಲು ಮತ್ತು ದೇಶದಾದ್ಯಂತ ಆಳವಾಗಿ ತಳಮಟ್ಟದವರೆಗೂ ಸಹಕಾರ ಕ್ಷೇತ್ರದ ವ್ಯಾಪ್ತಿಗೆ ತರಲು ಕೇಂದ್ರ ಸಹಕಾರ ಸಚಿವಾಲಯವು ಸಹಕಾರ–ಸೇ–ಸಮೃದ್ಧಿಯ ಅಡಿಯಲ್ಲಿ ವಿವಿಧ ಕ್ರಮಗಳನ್ನು ಕೈಗೊಳ್ಳುತ್ತಿದೆ:

1. ದಿನಾಂಕ 01 ಜೂನ್ 2022ರಂದು ಕೇಂದ್ರ ಸಚಿವ ಸಂಪುಟವು ಸರ್ಕಾರಿ ಇ–ಮಾರ್ಕೆಟಿಂಗ್ (GeM) ಪ್ಲಾಟ್‌ಫಾರ್ಮ್‌ನಲ್ಲಿ ಸಹಕಾರಿ ಸಂಸ್ಥೆಗಳನ್ನು 'ಖರೀದಿದಾರರಾಗಿ' ನೋಂದಾಯಿಸಲು ಅವಕಾಶ ಮಾಡಿಕೊಟ್ಟಿದೆ. GeM ಪೋರ್ಟಲ್‌ನಲ್ಲಿ ದೇಶದಾದ್ಯಂತ ನೋಂದಾಯಿಸಲಾದ ಸುಮಾರು 40 ಲಕ್ಷ ಮಾರಾಟಗಾರರಿಂದ ಸರಕು ಮತ್ತು ಸೇವೆಗಳನ್ನು ಖರೀದಿಸಲು ಅನುವು ಮಾಡಿಕೊಟ್ಟಿದೆ. ಇದರಿಂದ ಸಹಕಾರಿ ಸಂಸ್ಥೆಗಳಿಗೆ ಉಳಿತಾಯ ಮಾಡಲು ಮತ್ತು ತಮ್ಮ ಸಂಗ್ರಹಣೆ/ಖರೀದಿ ವ್ಯವಸ್ಥೆಯಲ್ಲಿ ಪಾರದರ್ಶಕತೆಯನ್ನು ಸುಧಾರಿಸಲು ಸಹಾಯಕವಾಗುತ್ತದೆ.

2. ಕೇಂದ್ರ ಪ್ರಾಯೋಜಿತ ಯೋಜನೆಯಾದ "ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳ (PACS) ಗಣಕೀಕರಣ" ಯೋಜನೆಯನ್ನು ದಿನಾಂಕ 29 ಜೂನ್ 2022ರಂದು ರೂ.2,516 ಕೋಟಿಗಳ ಬಜೆಟ್‌ನೊಂದಿಗೆ ಮೂರು ಹಂತದ ಗ್ರಾಮೀಣ ಪತ್ತಿನ ರಚನೆಯ ಕೆಳಸ್ತರದಲ್ಲಿರುವ 63,000 ಕಾರ್ಯನಿರತ PACS ಗಳ ಡಿಜಿಟಲೀಕರಣಕ್ಕಾಗಿ ಜಾರಿಗೊಳಿಸಲಾಗಿದೆ.

3.PACSಗಳಿಗಾಗಿ ಕರಡು ಮಾದರಿ ಉಪವಿಧಿಗಳನ್ನು ರಾಜ್ಯ ಸರ್ಕಾರಗಳು, ರಾಷ್ಟ್ರೀಯ ಸಹಕಾರ ಫೆಡರೇಶನ್‌ಗಳು ಮತ್ತು ಎಲ್ಲಾ ಇತರ ಮಧ್ಯಸ್ಥಗಾರರೊಂದಿಗೆ ಸಮಾಲೋಚಿಸಿ, PACS ನ ಚಟುವಟಿಕೆಗಳನ್ನು ವೈವಿಧ್ಯಗೊಳಿಸಲು ಮತ್ತು ಅವುಗಳನ್ನು ಗ್ರಾಮ ಮಟ್ಟದಲ್ಲಿ ಉತ್ತೇಜಿತ ವಿವಿಧೋದ್ದೇಶ ಆರ್ಥಿಕ ಘಟಕಗಳಾಗಿ ಮಾಡಲು ಸಿದ್ಧಪಡಿಸಲಾಗಿದೆ.

4. ದಿನಾಂಕ 25 ಅಕ್ಟೋಬರ್ 2021ರ ಸರ್ಕಾರದ ಅಧಿಸೂಚನೆಯನ್ವಯ ನ್ಯಾಯಯುತ ಮತ್ತು ಲಾಭದಾಯಕ ಬೆಲೆ (FRP) ಅಥವಾ ರಾಜ್ಯ ಬೆಂಬಲ ಬೆಲೆ (SAP) ಸಂದರ್ಭದಲ್ಲಿ ರೈತರಿಗೆ ಕಬ್ಬಿಗೆ ಹೆಚ್ಚಿನ ಬೆಲೆ ನೀಡುತ್ತಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳು ಹೆಚ್ಚುವರಿ ಆದಾಯ ತೆರಿಗೆ ವ್ಯಾಪ್ತಿಗೆ ಒಳಪಡುವುದಿಲ್ಲ ಎಂದು ಸ್ಪಷ್ಟಪಡಿಸುವುದರ ಮೂಲಕ ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಪ್ರಮುಖ ಪರಿಹಾರವನ್ನು ಒದಗಿಸಿದೆ.

5. ಯಾವ ಸಹಕಾರಿ ಸಂಸ್ಥೆಗಳಲ್ಲಿ ರೂ.1 ಕೋಟಿಗಿಂತ ಹೆಚ್ಚಿನ ಒಟ್ಟು ಆದಾಯವನ್ನು ಹೊಂದಿದೆಯೋ ಹಾಗೂ ಸಹಕಾರಿ ಸಂಸ್ಥೆಗಳು ಮತ್ತು ಅದರ ಸದಸ್ಯರ ಆದಾಯವನ್ನು ರೂ.10 ಕೋಟಿಗಳವರೆಗೆ ಹೆಚ್ಚಿಸಲು ಅವಕಾಶವಿದೆಯೋ ಅಂತಹ ಸಹಕಾರಿ ಸಂಸ್ಥೆಗಳ ಸರ್‌ಚಾರ್ಜ್ ಅನ್ನು ಶೇ.12 ರಿಂದ ಶೇ.7ಕ್ಕೆ ಇಳಿಸಲಾಗಿದೆ.

6. ಕಾರ್ಪೋರೇಟ್ ಸಂಸ್ಥೆಗಳೊಂದಿಗೆ ಸ್ಪರ್ಧಿಸಲು ವೇದಿಕೆಯನ್ನೊದಗಿಸಲು ಸಹಕಾರಿ ಸಂಸ್ಥೆಗಳಿಗೆ ಕನಿಷ್ಠ ಪರ್ಯಾಯ ತೆರಿಗೆ (MAT) ದರವನ್ನು ಶೇ.18.5 ರಿಂದ ಶೇ.15ಕ್ಕೆ ಇಳಿಸಲಾಗಿದೆ.

7. ಸಹಕಾರ ಆಧಾರಿತ ಆರ್ಥಿಕ ಅಭಿವೃದ್ಧಿ ಮಾದರಿಗೆ ಉತ್ತೇಜನ ನೀಡಲು ಸಹಕಾರಿ ಸಂಸ್ಥೆಗಳಿಗೆ ಸಮಪರ್ಕತೆಯನ್ನು ಒದಗಿಸಲು ನಾನ್–ಶೆಡ್ಯೂಲ್ಡ್ ಅರ್ಬನ್ ಕೋಆಪರೇಟಿವ್ ಬ್ಯಾಂಕುಗಳು, ರಾಜ್ಯ ಸಹಕಾರಿ ಬ್ಯಾಂಕುಗಳು ಮತ್ತು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳನ್ನು ಸದಸ್ಯರಿಗೆ ಕೈಗೆಟಕುವ ಮತ್ತು ಸಕಾಲಿಕ ಸಾಲವನ್ನು ನೀಡುವ ಸಂಸ್ಥೆಗಳಾಗಿ ದಿನಾಂಕ 03 ಫೆಬ್ರವರಿ 2022ರ ಸುತ್ತೋಲೆಯ ಮೂಲಕ ಗ್ಯಾರಂಟಿ ಫಂಡ್ ಟ್ರಸ್ಟ್ (CGTMSE) ಯೋಜನೆಯಲ್ಲಿ ಖಾತರಿಪಡಿಸಲಾಗಿದೆ.

8. ಭಾರತ ಸರ್ಕಾರವು ದಿನಾಂಕ 08 ಜೂನ್ 2022ರಂದು ಸಹಕಾರ ಬ್ಯಾಂಕಿಂಗ್ ವಲಯದಲ್ಲಿ ಸಹಕಾರಿಗಳ ಅಭಿವೃದ್ಧಿಗೆ ಹೊಸ ಉತ್ತೇಜನವನ್ನು ನೀಡಲು ನಿರ್ಧಾರಗಳನ್ನು ಕೈಗೊಂಡಿದೆ ಅಂದರೆ., (ಎ) ನಗರ ಸಹಕಾರಿ ಬ್ಯಾಂಕುಗಳಿಗೆ (UCBs) ಮತ್ತು ಗ್ರಾಮೀಣ ಸಹಕಾರಿ ಬ್ಯಾಂಕುಗಳಿಗೆ (RCBs) ವೈಯಕ್ತಿಕ ಗೃಹ ಸಾಲದ ಮಿತಿಯನ್ನು ದ್ವಿಗುಣಗೊಳಿಸಿದೆ; (ಬಿ) ವಾಣಿಜ್ಯ ರಿಯಲ್ ಎಸ್ಟೇಟ್ ರೆಸಿಡೆನ್ಷಿಯಲ್ ಹೌಸಿಂಗ್ ವಲಯಕ್ಕೆ ಸಾಲ ನೀಡಲು TCBs ಗಳಿಗೆ ಅವಕಾಶ ನೀಡಲಾಗಿದೆ; (ಸಿ) ವಾಣಿಜ್ಯ ಬ್ಯಾಂಕುಗಳಂತೆ UCBs ಗಳು ತಮ್ಮ ಗ್ರಾಹಕರ ಮನೆ ಬಾಗಿಲಿಗೆ ಬ್ಯಾಂಕಿಂಗ್ ಸೌಲಭ್ಯವನ್ನು ಒದಗಿಸಲು ಈಗ ಅವಕಾಶ ನೀಡಲಾಗಿದೆ.

9. ಸಹಕಾರಿ ಸಂಸ್ಥೆಗಳ ಸರ್ವತೋಮುಖ ಅಭಿವೃದ್ಧಿಯ ಗುರಿಯೊಂದಿಗೆ 'ಸಮೃದ್ಧಿಗೆ ಸಹಕಾರ' (Cooperation to Prosperity) ಯೋಜನೆಯನ್ನು ರೂಪಿಸಲು ಸಹ ಸಚಿವಾಲಯವು

ಕ್ರಮವನ್ನು ಕೈಗೊಂಡಿದೆ.

10. ದೇಶದಾದ್ಯಂತ ಸಹಕಾರಿ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳನ್ನು ಆಧುನೀಕರಣಗೊಳಿಸುವ ಮತ್ತು ವೃತ್ತಿಪರಗೊಳಿಸುವ ಯೋಜನೆಯು ಸಹ ಜಾರಿಯಲ್ಲಿದೆ.

ಮೇಲಿನವುಗಳೊಂದಿಗೆ, ಪ್ರಸ್ತುತ ಸಹಕಾರಿಗಳಿಗಾಗಿ ಸಚಿವಾಲಯದಿಂದ ರಾಷ್ಟ್ರ ಮಟ್ಟದ ಹೊಸ ನೀತಿಯನ್ನು ರೂಪಿಸುವ ಪ್ರಕ್ರಿಯೆ ಜಾರಿಯಲ್ಲಿದೆ. ಹೊಸ ಸಹಕಾರ ನೀತಿಯ ಕುರಿತು ಎರಡು ದಿನಗಳ ರಾಷ್ಟ್ರೀಯ ಸಮಾವೇಶವನ್ನು ದಿನಾಂಕ 12 ಮತ್ತು 13 ಏಪ್ರಿಲ್ 2022ರಂದು ನಡೆಸಲಾಗಿದೆ. ಈ ಸಮಾವೇಶದಲ್ಲಿ ಸಹಕಾರ ಇಲಾಖೆಯ ಕಾರ್ಯದರ್ಶಿಗಳು/ಎಲ್ಲಾ ರಾಜ್ಯಗಳಿಂದ/ ಕೇಂದ್ರಾಡಳಿತ ಪ್ರದೇಶಗಳಿಂದ RCSs ಗಳು ಭಾಗವಹಿಸಿದ್ದು, ಈ ಸಮಾವೇಶದಲ್ಲಿ ಕಾನೂನು ಚೌಕಟ್ಟು, ನಿಯಂತ್ರಣಗಳು, ನೀತಿ ಮತ್ತು ಕಾರ್ಯಾಚರಣೆಯ ಅಡೆತಡೆಗಳ ಗುರುತಿಸುವಿಕೆ; ಸುಲಭ ವ್ಯವಹಾರ ನಿರ್ವಹಣೆ; ಆಡಳಿತವನ್ನು ಬಲಪಡಿಸಲು ಸುಧಾರಣೆಗಳು; ಹೊಸ ಮತ್ತು ಸಾಮಾಜಿಕ ಸಹಕಾರಿಗಳನ್ನು ಉತ್ತೇಜಿಸುವುದು; ನಿಷ್ಕ್ರಿಯಗೊಂಡವುಗಳನ್ನು ಪುನರುಜ್ಜೀವನಗೊಳಿಸುವುದು; ಸಹಕಾರಿಗಳನ್ನು ಉತ್ತೇಜಿತ ಆರ್ಥಿಕ ಘಟಕಗಳನ್ನಾಗಿ ಮಾಡುವುದು; ಸಹಕಾರ ಸಂಸ್ಥೆಗಳ ನಡುವೆ ಸಹಕಾರ ಮತ್ತು ಸಹಕಾರಿಗಳಲ್ಲಿನ ಸದಸ್ಯತ್ವವನ್ನು ಹೆಚ್ಚಿಸುವುದು ಈ ವಿಷಯಗಳ ಕುರಿತು ಚರ್ಚೆಗಳು ಜರುಗಿರುತ್ತವೆ. ಅಲ್ಲದೇ, ಸಚಿವಾಲಯದ ವೆಬ್‌ಸೈಟ್‌ನ ಮೂಲಕ ಈ ಕರಡು ನೀತಿಯ ಕುರಿತು ಸಾರ್ವಜನಿಕರು ಸೇರಿದಂತೆ ಮಧ್ಯಸ್ಥಗಾರರಿಂದ ಸಲಹೆಗಳನ್ನು ನೀಡುವಂತೆ ಕೋರಲಾಗಿದೆ.

ಭಾರತ ಸರ್ಕಾರದ ಎಲ್ಲಾ ಸ್ಕೀಂಗಳ/ ಯೋಜನೆಗಳ ಮೂಲಕ ಉತ್ತರಾಖಂಡ ರಾಜ್ಯ ಸೇರಿದಂತೆ ಎಲ್ಲಾ ರಾಜ್ಯಗಳು ಸಹ ಸಹಕಾರ ಕ್ಷೇತ್ರವನ್ನು ಪುನರುಜ್ಜೀವನಗೊಳಿಸುವತ್ತ ಗಮನಹರಿಸಿವೆ. ದಿನಾಂಕ 06 ಜುಲೈ 2021ರಂದು ಸಚಿವಾಲಯವು ರಚನೆಯಾದಾಗಿನಿಂದ ಇಲ್ಲಿಯವರೆಗೆ ನ್ಯಾಷನಲ್ ಕೋಆಪರೇಟಿವ್ ಡೆವೆಲಪ್‌ಮೆಂಟ್ ಕಾರ್ಪೋರೇಷನ್ (NCDC) ನಿಂದ ರೂ.73 ಕೋಟಿಗಳಷ್ಟು ಮೊತ್ತದ ಸಾಲವನ್ನು ಬಿಡುಗಡೆ ಮಾಡಿದೆ. ಇದನ್ನು ಸಮಗ್ರ ಅಭಿವೃದ್ಧಿ ಗುರಿಯನ್ನು ಹೊಂದಿರುವ ಮೂಲಭೂತ ಸೌಕರ್ಯಗಳನ್ನು ಸೃಷ್ಟಿಸಲು, ಸಹಕಾರಿ ಕ್ಲಸ್ಟರ್ ಬೇಸಾಯ, ಮಾರುಕಟ್ಟೆ ವಿಸ್ತರಣೆ ಮತ್ತು ಉದ್ಯೋಗ ಮಾರ್ಗಗಳ ಸೃಷ್ಟಿ ಸೇರಿದಂತೆ ಎನ್‌ಸಿಡಿಸಿ ನೆರವಿನ 'ರಾಜ್ಯ ಸಮೇಕಿತ್ ವಿಕಾಸ್ ಪರಿಯೋಜನಾ'ವನ್ನು ಅನುಷ್ಠಾನಗೊಳಿಸಲು ಬಿಡುಗಡೆ ಮಾಡಿದೆ.

....43ನೇ ಪುಟದಿಂದ

ಬಗ್ಗೆ ಜ್ಞಾನವಿರಬೇಕು. ಇವತ್ತು ಮಾಡುವ ಉಳಿತಾಯ ನಮ್ಮ ಆಪತ್ತಕಾಲಕ್ಕೆ ಉಪಯೋಗವಾಗುತ್ತದೆ. ಆದ್ದರೀಮದ ಉಳಿತಾಯಕ್ಕೆ ಹೆಚ್ಚು ಆದ್ಯತೆಯನ್ನು ನೀಡಬೇಕು.

### 4. ಅಗತ್ಯಕ್ಕಾಗಿ ಮಾತ್ರ ಸಾಲ

ಕೆಲವು ಸಂದರ್ಭಗಳಲ್ಲಿ ಆದಾಯಕ್ಕಿಂತ ಖರ್ಚು ಹೆಚ್ಚಿದಾಗ ಸಾಲ ಮಾಡಬೇಕಾಗುತ್ತದೆ. ಪ್ರತಿಯೊಂದು ಕಾರ್ಯನಿರ್ವಹಣೆಗೂ ಸಾಲ ಮಾಡುವುದು ನಮ್ಮನ್ನು ಜೀವನದ ಉದ್ದಕ್ಕೂ ಸಾಲಗಾರರನ್ನಾಗಿ ಮಾಡುತ್ತದೆ. ಸಾಲದ ಸಂಕೋಲೆಗಳಿಂದ ಹೊರಬರಲು ಸಾಧ್ಯವೇ ಆಗುವುದಿಲ್ಲ. ವಿಶೇಷ ಸಂದರ್ಭಗಳಲ್ಲಿ ಅಂದರೆ ಮನೆ ಕಟ್ಟುವುದಕ್ಕಾಗಿ, ಮದುವೆ ಮಾಡುವುದಕ್ಕಾಗಿ ಮಕ್ಕಳ ಶಿಕ್ಷಣಕ್ಕಾಗಿ ಮತ್ತು ವಿಶೇಷ ಕಾಯಿಲೆಗಳ ನಿರ್ವಹಣೆಗಳಿಗಾಗಿ ನಮ್ಮಲ್ಲಿರುವ ಹಣ ಸಂಗ್ರಹ ಸಾಲದೇ ಇರುವಾಗ ಅನಿವಾರ್ಯವಾಗಿ ಸಾಲ ಮಾಡಬೇಕಾಗುತ್ತದೆ. ಅಗತ್ಯ ಕಾರ್ಯಗಳ ನಿರ್ವಹಣೆಗಾಗಿ ಸಾಲ ಮಾಡಬೇಕೆ ವಿನಃ ದೈನಂದಿನ ಕೆಲಸಕಾರ್ಯಗಳ ನಿರ್ವಹಣೆಗಾಗಿ ಸಾಲ ಮಾಡದಂತೆ ದೈನಂದಿನ ಜೀವನವನ್ನು ಯೋಜನಾ ಬದ್ಧವಾಗಿ ಕಾರ್ಯನಿರ್ವಹಿಸಬೇಕು.

### 5. ವಿಮೆ ಮತ್ತು ಪಿಂಚಣಿಗಳ ಸದುಪಯೋಗ

ಜೀವ ವಿಮೆ ಮತ್ತು ನಿವೃತ್ತಿಯ ನಂತರ ಬರುವ ಹಣ ವ್ಯಕ್ತಿಯ ಜೀವಮಾನದ ಸಾಧನೆಗ ಉಳಿಕೆಯ ಪ್ರತಿಫಲವಾಗಿದೆ. ಮುಂಬರುವ ದಿನಗಳಲ್ಲಿ ಹೆಚ್ಚಿನ ಆದಾಯ ಬರುವ ಯಾವ ಮೂಲಗಳು ಇರುವುದಿಲ್ಲ. ಇವುಗಳನ್ನು ಜೋಪಾನವಾಗಿ ಹೂಡಿಕೆ ಮಾಡಿ ಅವುಗಳಿಂದ ಬಡ್ಡಿ ಸರಿಯಾದ ಸಮಯಕ್ಕೆ ಸರಿಯಾದ ಪ್ರಮಾಣದಲ್ಲಿ ಬರುವ ಹಾಗೆ ವ್ಯವಸ್ಥೆಗಳನ್ನು ಮಾಡುವ ಜಾಣ್ಮೆಯನ್ನು ಬೆಳೆಸಿಕೊಳ್ಳುವುದು ಅಗತ್ಯ. ಏನಾದರೂ ಎಡವಟ್ಟು ಆದಲ್ಲಿ ಜೀವನದುದ್ದಕ್ಕೂ ಕೊರಗುವ ಪರಿಸ್ಥಿತಿ ಉಂಟಾಗದಂತೆ ಎಚ್ಚರಿಕೆ ವಹಿಸುವುದು ಅಗತ್ಯ.

ವಿತ್ತೀಯ ಸಾಕ್ಷರತೆಯ ಪ್ರಮಾಣ ಹೆಚ್ಚಿದಂತೆ ಹಣಕಾಸಿನ ನಿರ್ವಹಣೆ ಯಶಸ್ವಿಯಾಗಲು ಸಾಧ್ಯವಾಗುತ್ತದೆ. ಭಾರತ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಸಾಲಿನಲ್ಲಿ ಗುರುತಿಸಿಕೊಳ್ಳಲು ಮತ್ತು ಆತ್ಮ ನಿರ್ಭರ ಭಾರತ ನಿರ್ಮಾಣ ಕಾರ್ಯಸಾಧನೆಗೆ ನೆರವಾಗುತ್ತದೆ. ವಿತ್ತೀಯ ಸಾಕ್ಷರತಾ ಅಂದೋಲನದಲ್ಲಿ ದೇಶದ ಅನೇಕ ಸ್ವಸಹಾಯ ಗುಂಪುಗಳು ಕೈಜೋಡಿಸಿದಂತೆ ಸಹಕಾರಿ ಸಂಸ್ಥೆಗಳು ಈ ಕಾರ್ಯಕ್ರಮದಲ್ಲಿ ಸಕ್ರೀಯವಾಗಿ ಭಾಗವಹಿಸುವುದು ಅವಶ್ಯಕ. ತಮ್ಮ ಸದಸ್ಯರಿಗೆ ವಿತ್ತೀಯ ಸಾಕ್ಷರತಾ ಕಾರ್ಯಕ್ರಮಗಳನ್ನು ಗಮ್ಮಿಕೊಳ್ಳುವ ಮೂಲಕ ವಿಶೇಷವಾಗಿ ಮಹಿಳೆಯರನ್ನು ಗ್ರಾಮೀಣ ಜನರನ್ನು ಈ ವಿತ್ತೀಯ ಸಾಕ್ಷರತಾ ಅಂದೋಲನದಲ್ಲಿ ಸಕ್ರೀಯವಾಗಿ ಭಾಗವಹಿಸುವಂತೆ ಮಾಡುವಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಈ ಅಂದೋಲನ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ ಸಹಕಾರಿ ಸಂಸ್ಥೆಗಳು ಕಾರ್ಯನಿರ್ವಹಿಸುವುದು ಅವಶ್ಯಕ.

– ಜೈ ಸಹಕಾರ –

ಸ್ವಾಭಿಮಾನಿ ಸಹಕಾರಿ

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2020-2022 RNI NO. KARBIL-2004/18001/Pages 46
Licensed to post without Prepayment License No. PMG BG/WPP-384/2020-2022.

# ಸಂಬಂಧಗಳ ಗಾಳಿ, ನೀರು ಮತ್ತು ಬೆಳಕು....

**– ಶ್ರೀ ಧೀರೇಂದ್ರ ನಾಗರಹಳ್ಳಿ**

ನಮ್ಮ ಆತ್ಮೀಯರಿಗೆ ಸಮಯವನ್ನು ಕೊಡದೆ ಹೋದಾಗ ಅಂತಸ್ತು, ದೊಡ್ಡಸ್ತಿಕೆ, ಧಿಮಾಕು ಮತ್ತು ಅಹಮಿಕೆ ಎನ್ನುವ ಹತ್ತಾರು ತಪ್ಪು ಕಲ್ಪನೆಗಳ ಮಧ್ಯದಲ್ಲಿ ಒಂದು ಅಮೂಲ್ಯ ಸಂಬಂಧ ದಾರುಣವಾಗಿ ಸಾವಾಗುವ ಎಲ್ಲಾ ಲಕ್ಷಣಗಳನ್ನು ಕಾಣಬಹುದು!

"ಲೇ ! ಶಂಭು ಹೆಂಗಿದಿಲೇ" ಅಂತ ಪ್ರಾಥಮಿಕ ಶಾಲೆಯ ಆತ್ಮೀಯ ಸ್ನಹೀತನೊಬ್ಬನಿಗೆ ಕರೆ ಮಾಡುವುದಕ್ಕೆ ನಮಗೆ ಸಮಯವಿಲ್ಲ. ಹೌದು ! ನಮ್ಮ ಆತ್ಮೀಯರೊಬ್ಬರಿಗೆ 'ಹಾಯ್' ಅಂತ ಹೇಳಲು ಸಮಯವಿಲ್ಲ. ಆದರೆ, ಮದ್ಯಾಹ್ನ ಊಟದ ನಂತರದ 'ಸಣ್ಣ' ತಿರುಗಾಟದಲ್ಲಿ ಗಾಸಿಪ್ ಮಾಡಲು ಸಮಯವಿದೆ,ಹತ್ತಾರು ವಾಟ್ಸಪ್ ಗ್ರೂಪ್ಗಳಿಗೆ ಕೆಲಸಕ್ಕೆ ಬಾರದ ಸಂದೇಶಗಳನ್ನು ಫಾರ್ವರ್ಡ ಮಾಡಲು ಸಮಯವಿದೆ. ಆದರೆ ಪ್ರಾಥಮಿಕ ಶಾಲೆಯ ಆತ್ಮೀಯ ಸ್ನೇಹಿತನಿಗೆ ಕರೆ ಮಾಡಿ ಸುಮ್ಮನೆ ಹಳೆಯ ನೆನಪುಗಳನ್ನು ಮೆಲಕು ಹಾಕಿ ಒಂದು ಸಂಬಂಧವನ್ನು ಹಸಿರಾಗಿಡಲು ನಮಗೆ ಸಮಯವಿಲ್ಲ. ಇದು ಒಂದು ಉದಾಹರಣೆ ಅಷ್ಟೆ! ಸಂಬಂಧಗಳನ್ನು ಹಸಿರಾಗಡಲು ನಮ್ಮಲ್ಲಿ ಸಮಯವಿಲ್ಲ ಎನ್ನುವುದು ಎಲ್ಲಾ ರೀತಿಯ ಸಂಬಂಧಗಳಿಗೆ ಮತ್ತು ಪರಿಸ್ಥಿತಿಗಳಿಗೆ ಅನ್ವಯಿಸುತ್ತದೆ! ಅದೊಂದು ಪ್ರೇಮ ಅಥವಾ ಸ್ನೇಹ ಸಂಬಂಧವೇ ಆಗಿರಬಹುದು ಹಾಗೂ ಇನ್ನಿತರೆ ಯಾವುದಾದರೂ ಸಂಬಧಗಳಾದರೂ ಆಗಿರಬಹುದು.

ಸಂಬಂಧಗಳಿಗೆ ಬೇಕಾಗಿರುವುದು ದುಬಾರಿ ಉಡುಗೊರೆಗಳಲ್ಲ ಅಥವಾ ಪೊಳ್ಳು ಭರವಸೆಗಳ ಸುರಿಮಳೆಯಲ್ಲ ! ಪ್ರೀತಿ, ವಿಶ್ವಾಸ ಮತ್ತು ಕಾಳಜಿಗಳೇ ಸಾಕು ಸಂಬಂಧಗಳು ಮುಂಗಾರಿನ ಮಳೆಯಲ್ಲಿ ನಳ–ನಳಿಸುತ್ತಿರುವ ಮರಗಳಂತೆ ಪ್ರತೀ ದಿನವೂ ಹಸಿ–ಹಸಿರಾಗಿರುತ್ತವೆ.

**ಇನ್ನೊಂದು ಉದಾಹರಣೆ ಇದೊಂದು Classic example !**

ಯಾವುದಾದರು ಮೂರು ಸಸಿಗಳನ್ನು ತಂದು ಕುಂಡದಲ್ಲಿ ನೆಡಿ. ಒಂದೊಂದು ಕುಂಡವನ್ನು ಬೇರೆ ಬೇರೆ ತರಹದ ವಾತಾವರಣದಲ್ಲಿ ಬೆಳೆಯಲು ಬಿಡಿ. ಮೊದಲನೆಯದನ್ನು ಯಾವುದೆ ಸೂರ್ಯ ಕಿರಣಗಳು ಬೀಳದೆ ಇರುವ ಸ್ಥಳದಲ್ಲಿ ಬೆಳೆಯುವುದಕ್ಕೆ ಬಿಡಿ,ಇನ್ನೊಂದನ್ನು ಗಾಳಿಯೇ ಬೀಸದ ಕಡೆ (ಪ್ರಾಯೋಗಿಕವಾಗಿ ಸಾಧ್ಯವಿಲ್ಲ) ಬೆಳೆಯಲು ಬಿಡಿ. ಕೊನೆಯದಕ್ಕೆ ಒಂದು ಹನಿಯು ನೀರನ್ನು ಸೋಕಿಸದಂತೆ ಬೆಳೆಯಲು ಬಿಡಿ.ಕೇವಲ ಕೆಲವೆ ದಿನಗಳಲ್ಲಿ ಮೂರಕ್ಕೆ ಮೂರು ಮುರುಟಿಕೊಂಡು ಬಿಟ್ಟಿರುತ್ತವೆ. ಸಬಂಧಗಳು ಅಷ್ಟೆ ಸಸಿಗಳಷ್ಟೆ ನವಿರು ಮತ್ತು ಸೂಕ್ಷ್ಮ!!!

ಹಾಗೆ ಇದೇ ಪ್ರಯೋಗವನ್ನು ಸ್ವಲ್ಪ ಮುಂದುವರೆಸೋಣ. ಒಂದು ಸಸಿಯನ್ನು ತಂದು ಶುದ್ಧ ಗಾಳಿ, ನೀರು ಮತ್ತು ಬೆಳಕು ಬೀಳುವ ಸ್ಥಳದಲ್ಲಿ ಬೆಳೆಯಲು ಬಿಡೋಣ. ನೋಡು ನೋಡುತ್ತಿರವಷ್ಟರಲ್ಲೆ ಸಸಿ ನಳ–ನಳಿಸುತ್ತ ಬೆಳೆಯ ತೊಡುಗುತ್ತದೆ. ಆದರೆ ಕೆಲವೊಮ್ಮೆ ಕೀಟಗಳ ಬಾಧೆಗಳಿಂದ ರೋಗಗಳಿಗೆ ತುತ್ತಾಗುವ ಸಾಧ್ಯತೆಗಳು ಇಲ್ಲದೆ ಇಲ್ಲ. ಹಾಗಾಗಿ ಆ ಸಸಿಗಳಿಗೆ/ಗಿಡಗಳಿಗೆ ಕಾಲ ಕಾಲಕ್ಕೆ ಬೇಕಾಗಿರುವ ಪೊಷಕಾಂಶಗಳನ್ನು ಕೊಡುತ್ತಿರಬೇಕು

ಗಿಡಗಳಿಗೆ ಬೇಕಾಗಿರುವ ಗಾಳಿ, ನೀರು ಮತ್ತು ಬೆಳಕು ಸಂಬಂಧಗಳ ಪ್ರೀತಿ, ವಿಶ್ವಾಸ ಮತ್ತು ಕಾಳಜಿಗಳು. ಅದೇ ರೀತಿ ನಾವು ನಮ್ಮವರಿಗೆ ಕೊಡುವ ಭರವಸೆ ಮತ್ತು 'ನಾನು ನಿಮ್ಮವನು/ಳು' ಎನ್ನುವ ಬೆಚ್ಚನೆಯ ಭಾವನೆ ಹಾಗೂ ಆ ಭಾವನೆಗಳು ಜೀವಂತವಾಗಿರಲು ನಾವು ಕೊಡ ಮಾಡುವ ಸಣ್ಣ ಸಣ್ಣ ಉಡುಗೊರೆಗಳು ಸಸಿಗಳಿಗೆ ಬೇಕಾಗಿರುವ ಪೋಷಕಾಂಶಗಳು.

ಸಂಬಂಧಗಳಿಗೂ ಕಾಲ ಕಾಲಕ್ಕೆ ಗಾಳಿ, ನೀರು ಮತ್ತು ಬೆಳಕನ್ನು ಕೊಟ್ಟು ಪೋಷಿಸುತ್ತಿರಬೇಕು ! ಅವೆ ಪ್ರೀತಿ, ವಿಶ್ವಾಸ ಮತ್ತು ಕಾಳಜಿ ! ನಾವು ಏನನ್ನೇ ಕೊಟ್ಟಿದ್ದರೂ ಸಂಬಂಧಗಳು ಹಸಿರಾಗಿರಲು ಬೇಕಾಗಿರುವ ಈ ಮೂರು ಸೂತ್ರಗಳನ್ನು ಕೊಡದೆ ಹೋದರೆ ಸಂಬಂಧಗಳೂ ಅಷ್ಟೆ ಮುರುಟಿಕೊಳ್ಳುತ್ತವೆ !

ಕೇಂದ್ರ ಕಛೇರಿ : "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ದೂ: 080–23449933/34
ಇ–ಸ್ಟಾಂಪಿಂಗ್ ವಿಭಾಗ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ಬೆಂಗಳೂರು ಪ್ರಾಂತೀಯ ಕಛೇರಿ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ: 080–23525546.
ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299
ಬೆಳಗಾವಿ ಪ್ರಾಂತೀಯ ಕಛೇರಿ : 1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.
ಕಲಬುರಗಿ ಪ್ರಾಂತೀಯ ಕಛೇರಿ : ಶಿವಶರಣ ನಿಲಯ, ದೇವತಾ ಆಸ್ಪತ್ರೆ ಎದುರುಗಡೆ, ಖೂಬಾ ಪ್ಲಾಟ್, ಕಲಬುರಗಿ – 585102 ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., Nirman Bhavan complex, Dr. Rajkumar Road, 1st Black, Rajajinagar, Bengaluru-560 010